ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 4 | ಜನವರಿ 21-27, 2019 | ಪುಟ 16 | ರೂ. 10/-


web: www.janashakthi.co.in e-mail : js_weekly@yahoo.com

ಹಿಮಾಚಲದ

ಹಿರಿಯ ಸಿಪಿಐ(ಎಂ) ನಾಯಕ

ಮೊಹರ ಸಿಂಹ

ಲಾಲ್ ಸಲಾಂ!









10% ಮೀಸಲಾತಿ

ದಮನಿತರ ಮೀಸಲಾತಿ ಒಡೆಯುವ ತಂತ್ರ?



ಅಧಿಕಾರದಾಹದ ರಾಜಕಾರಣಕ್ಕೆ ಸರ್ಜರಿ ಬೇಕು



'ದೇಶದ್ರೋಹ ಕಾಯಿದೆ' ರದ್ದಾಗಬೇಕು



ಮನುಷ್ಯನ ಇರುವಿಕೆಯನ್ನು ಆತನ ಸಾಮಾನ್ಯ ಗುರುತುಗಳೊಂದಿಗೆ ಬೆಸೆಯಲಾಗಿದೆ. ಮನುಷ್ಯನನ್ನು ಒಂದು ಮತವಾಗಿ, ಸಂಖ್ಯೆಯಾಗಿ, ವಸ್ತುವಾಗಿ ನೋಡುತ್ತಿದ್ದೇವೆ... ಮನುಷ್ಯನೆಂದರೆ ಮನಸ್ಸು ಎಂದು ಭಾವಿಸುವಿಕೆಯೇ ಕಾಣೆಯಾಗಿದೆ.

- ರೋಹಿತ್ ವೇಮುಲ

ಕತ್ತಲ ನಕ್ಷತ್ರ

ಮತ್ತೆ ಹುಸಿ ವಿಜ್ಞಾನದ ಹಾವಳಿ

ಶಬರಿಮಲೆ ಕುರಿತ ಪ್ರಧಾನಿ ಹೇಳಿಕೆ–ಹೇಯ ಮತ್ತು ಖಂಡನಾರ್ಹ: ಸಿಪಿಐ(ಎಂ) ಪೊಲಿಟ್ ಬ್ಯುರೊ

ಒಂದು ಚುನಾಯಿತ ಸರಕಾರ ಸುಪ್ರಿಂ ಕೋರ್ಟ್‌ತೀರ್ಪನ್ನು ಜಾರಿಗೊಳಸಿದ್ದಕ್ಕಾಗಿ 'ಬುದ್ಧಿವಾದ'!

ಪ್ರಧಾನ ಮಂತ್ರಿಗಳು ಕೇರಳದ ಕೊಳ್ಳಂನಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಶಬರಿಮಲೆ ಕುರಿತಂತೆ ಎಲ್‌ಡಿಎಫ್ ಸರಕಾರದ ನಿಲುವು "ನಾಚಿಕೆಗೇಡಿನದ್ದು' ಎಂದಿದ್ದಾರೆ. ಇದು ಅತ್ಯಂತ ಹೇಯವಾದ ಮತ್ತು ಖಂಡನಾರ್ಹವಾದ ಹೇಳಿಕೆ, ಅವರು ಒಂದು ಚುನಾಯಿತ ಸರಕಾರಕ್ಕೆ ಅದು ಸುಪ್ರಿಂ ಕೋರ್ಟಿನ ತೀರ್ಪನ್ನು ಜಾರಿಗೊಳಿಸಿದ್ದಕ್ಕಾಗಿ ಈ ರೀತಿ 'ಬುದ್ಧಿವಾದ' ಹೇಳುತ್ತಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಶ್ರೀಯುತ ಮೋದಿಯವರು ತಾನು ಸಂವಿಧಾನದ ಅಡಿಯಲ್ಲಿ ಪ್ರತಿಜ್ಞೆ ಕೈಗೊಂಡಿದ್ದೇನೆ ಎಂಬುದನ್ನು ಮರೆತಿದ್ದಾರೆ, ಅವರು ಒಬ್ಬ ಆರೆಸ್ಸೆಸ್ ಪ್ರಚಾರಕನಂತೆ ಮಾತಾಡುತ್ತಿದ್ದಾರೆ, ದೇಶದ ಪ್ರಧಾನ ಮಂತ್ರಿಯಂತೆ ಅಲ್ಲ. ಅವರ ಹೇಳಿಕೆ ಭಾರತೀಯ ಸಂವಿಧಾನದ ಮೇಲೆ ಒಂದು ನೇರ ಹಲ್ಲೆ ಎಂದು ಪೊಲಿಟ್ ಬ್ಯುರೊ ವರ್ಣಿಸಿದೆ.

ಅವರ ಈ ಹೇಳಿಕೆ ಭವಿಷ್ಯದ ಮಟ್ಟಿಗೆ ಅಪಾಯಕಾರಿ ಪರಿಣಾಮಗಳನ್ನು ಹೊಂದಿದೆ. ಏಕೆಂದರೆ ಬಿಜೆಪಿ ಮತ್ತು ಆರೆಸ್ಸೆಸ್ ನ ಹಿತಗಳಿಗೆ ಸೂಕ್ತವಾಗಿರದ ಯಾವುದೇ ಸುಪ್ರಿಂ ಕೋರ್ಟ್ ತೀರ್ಪನ್ನು ಅದು ಮುರಿಯುತ್ತದೆ ಮತ್ತು ಅಂತಹ ತೀರ್ಪನ್ನು ಜಾರಿಗೊಳಿಸುವ ಒಂದು ಸರಕಾರದ ಮೇಲೆ ಪ್ರಹಾರ ಮಾಡುತ್ತದೆ ಎಂಬುದೇ ಇದರ ಅರ್ಥವಾಗಿದೆ. ಸ್ವತಂತ್ರ ಭಾರತದ ಇತಿಹಾಸದಲ್ಲೇ ಇದೊಂದು ಅಭೂತಪೂರ್ವ ಸನ್ನಿವೇಶ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಸಂವಿಧಾನ ಮತ್ತು ಜಾತ್ಯತೀತ ಪ್ರಜಾಪ್ರಭುತ್ವ ಮೌಲ್ಯಗಳಿಗೆ ಬೆಲೆ ಕೊಡುವವರೆಲ್ಲರೂ ಪ್ರಧಾನ ಮಂತ್ರಿಗಳ ಈ ನಿಲುವನ್ನು ಖಂಡಿಸುತ್ತಾರೆ ಎಂದು ಹೇಳಿದೆ.

ಪ್ರಧಾನಿಗಳಿಂದ ನ್ಯಾಯಾಂಗ ನಿಂದನೆ, ನಾಚಿಕೆಗೆಟ್ಟ ಹೇಳಿಕೆ–ಯೆಚುರಿ

ಈ ಕುರಿತು ತಮ್ಮ ಟ್ವಟರ್‌ನಲ್ಲಿ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಈಗಲಾದರೂ ಸುಪ್ರಿಂ ಕೋರ್ಟ್ ತಾನಾಗಿಯೇ ಮೋದಿಯವರ ಈ ನ್ಯಾಯಾಂಗ ನಿಂದನೆಯನ್ನು ಗಮನಕ್ಕೆ ತಗೊಳ್ಳಬೇಕು ಎಂದಿದ್ದಾರೆ. "ಕಾನೂನಿನ ಆಳ್ವಿಕೆ ಮೇಲುಗೈ ಪಡೆಯಬೇಕೇ ಹೊರತು ಜನಜಂಗುಳಿಗಳ ಆಳ್ವಿಕೆಯಲ್ಲ. ನಾವು ಸುಪ್ರಿಂ ಕೋರ್ಟ್ ಆದೇಶಗಳಿಗೆ ಬದ್ಧರಾಗಿದ್ದೇವೆ. ಪ್ರಧಾನಿಗಳ ಪೀಠದಲ್ಲಿ ಕೂತಿರುವ ಒಬ್ಬ ವ್ಯಕ್ತಿ, ಕಾನೂನು ಮತ್ತು ಸಂವಿಧಾನವನ್ನು ಎತ್ತಿಹಿಡಿಯುವದಾಗಿ ಪ್ರತಿಜ್ಞೆ ಸ್ವೀಕರಿಸುವಾತ ಹೀಗೆ ಹೇಳುತ್ತಿರುವುದು ನಿಜಕ್ಕೂ ನಾಚಿಕಗೇಡಿನ ಸಂಗತಿ" ಎಂದು ಅವರು ಹೇಳಿದ್ದಾರೆ.

ಸಿವಿಸಿ ಮುಖ್ಯಸ್ಥರನ್ನು ಕೂಡಲೇ ತೆಗೆದು ಹಾಕಿ, ಅವರ ವರ್ತನೆಯ ಬಗ್ಗೆ ತನಿಖೆಗೆ ಆದೇಶ ನೀಡಬೇಕು –ಸಿಪಿಐ(ಎಂ) ಪೊಲಿಟ್‌ಬ್ಯುರೊ

ಸಿಬಿಐ ನಿರ್ದೇಶಕರಾದ ಅಲೋಕ್ ವರ್ಮರವರನ್ನು ಅವರ ಹುದ್ದೆಯಿಂದ ತೆಗೆದು ಹಾಕಿರುವುದು ಒಂದು ಸ್ವೇಚ್ಛಾಚಾರಿ ಮತ್ತು ಆಘಾತಕಾರಿ ಕ್ರಮ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ. ಈ ಕ್ರಮ ಕೇಂದ್ರೀಯ ವಿಚಕ್ಷಣಾ ಆಯುಕ್ತರು(ಸಿವಿಸಿ) ಸಲ್ಲಿಸಿದ ವರದಿಯನ್ನು ಆಧರಿಸಿದ್ದು, ಈ ವರದಿಯಲ್ಲಿ ಆಪಾದನೆಗಳನ್ನು ಸಾಬೀತುಪಡಿಸಬಹುದಾದ ಸಾಕ್ಷ್ಯ ಬಹಳ ದುರ್ಬಲವಾಗಿದೆ ಎಂಬುದೀಗ ಕಂಡು ಬಂದಿದೆ. ಸಿವಿಸಿ ವರದಿ ಸಿಬಿಐ ಅಧಿಕಾರಿ ರಾಕೇಶ್ ಆಸ್ಥಾನಾರವರು ಮಾಡಿದ ಆರೋಪಗಳನ್ನು ಆಧರಿಸಿದೆ. ದಿಲ್ಲಿ ಹೈಕೋರ್ಟಿನಲ್ಲಿ ರಾಕೇಶ್ ಆಸ್ಥಾನಾ ತಮ್ಮ ಮೇಲಿನ ಆರೋಪಗಳ ಬಗ್ಗೆ ನಡೆಯುತ್ತಿರುವ ತನಿಖೆಗಳನ್ನು ರದ್ದುಗೊಳಿಸಬೇಕು ಎಂದು ಕೇಳಿ ಸಲ್ಲಿಸಿರುವ ಅರ್ಜಿಯನ್ನು ಆ ನ್ಯಾಯಾಲಯ ತಿರಸ್ಕರಿಸಿ, ಒಂದು ನಿರ್ದಿಷ್ಟ ಸಮಯಮಿತಿಯೊಳಗೆ ತನಿಖೆಯನ್ನು ನಡೆಸಬೇಕು ಎಂದು ಆದೇಶ ನೀಡಿದೆ. ಅಂದರೆ, ರಾಕೇಶ್ ಆಸ್ಥಾನಾರವರು ಮೇಲ್ನೋಟಕ್ಕೆ ಆರೋಪಗಳನ್ನು ಎದುರಿಸುತ್ತಿದ್ದಾರೆ ಎಂಬುದು ನ್ಯಾಯಾಂಗಕ್ಕೆ ಕಂಡು ಬಂದಿದೆ ಎಂಬುದು ಸ್ಪಷ್ಟ ಎಂದು ಈ ಕುರಿತು ವಿಶ್ಲೇಷಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಅಲೋಕ್ ವರ್ಮಾರವರ ವಿರುದ್ಧ ಆರೋಪಗಳ ಸಿ.ವಿ.ಸಿ. ತನಿಖೆಯ ಉಸ್ತುವಾರಿಗೆ ಸುಪ್ರಿಂ ಕೋರ್ಟ್ ನೇಮಿಸಿದ ನಿವೃತ್ತ ನ್ಯಾಯಮೂರ್ತಿ ಎ.ಕೆ.ಪಟ್ನಾಯಕ್ ಸಿವಿಸಿ ತನಿಖೆಯಲ್ಲಿ ವರ್ಮಾರವರ ವಿರುದ್ಧ ಯಾವುದೇ ಭ್ರಷ್ಟಾಚಾರದ ಸಾಕ್ಷಿ ಕಂಡುಬರಲಿಲ್ಲ ಎಂದು ಸಾರ್ವಜನಿಕವಾಗಿಯೇ ಹೇಳಿದ್ದಾರೆ, ಮತ್ತು ಈ ಮೂಲಕ ಅವರು ಈ ವರದಿಯಿಂದ ತನ್ನನ್ನು ದೂರವಿರಿಸಿ ಕೊಂಡಿದ್ದಾರೆ ಎಂಬ ಸಂಗತಿಯತ್ತವೂ ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ಕೇಂದ್ರೀಯ ವಿಚಕ್ಷಣಾ ಆಯುಕ್ತ ಕೆ.ವಿ.ಚೌಧರಿಯವರ ಪ್ರಶ್ನಾರ್ಹ ಪಾತ್ರದ ಬಗ್ಗೆ ಹೆಚ್ಚು ಸಂಗತಿಗಳು ಬಯಲಿಗೆ ಬಂದಿವೆ. ಅವರು ಆಗಿನ ಸಿಬಿಐ ನಿರ್ದೇಶಕರೊಂದಿಗೆ ಆಸ್ಥಾನಾ ರವರ ಪರವಾಗಿ ಮಾತಾಡಿದ್ದರು ಎಂಬುದು ಈಗ ಸಾರ್ವಜನಿಕ ವಾಗಿರುವ ಸಂಗತಿಯಾಗಿದೆ. ಇವೆಲ್ಲ ಸಂಗತಿಗಳೂ ಅಲೋಕ್ ವರ್ಮಾರವರನ್ನು ತೆಗೆದು ಹಾಕುವ ಮೋದಿ ನೇತೃತ್ವದ ಸಮಿತಿಯ ನಿರ್ಧಾರ ಪಕ್ಷಪಾತಪೂರ್ಣವಾಗಿದೆ ಮತ್ತು ದುರುದ್ದೇಶಪೂರಿತವಾಗಿದೆ ಎಂಬುದನ್ನು ತೋರಿಸುತ್ತದೆ, ವರ್ಮಾರವರಿಗೆ ತಮ್ಮನ್ನು ರಕ್ಷಿಸಿಕೊಳ್ಳುವ ಹಕ್ಕನ್ನು ತಿರಸ್ಕರಿಸಿ ಸ್ವಾಭಾವಿಕ ನ್ಯಾಯದ ನೀತಿಯನ್ನು ಉಲ್ಲಂಘಿಸಲಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಇವೆಲ್ಲವೂ, ಕೇಂದ್ರ ಸರಕಾರ ಮತ್ತು ಅದರ ಅತ್ಯುನ್ನತ ರಾಜಕೀಯ ಮುಖಂಡತ್ವವನ್ನು ಒಳಗೊಂಡ ಭ್ರಷ್ಟಾಚಾರದ ಗಂಭೀರ ಕೇಸುಗಳ ತನಿಖೆಗಳನ್ನು ತಡೆಯಲು ಅಲೋಕ್ ವರ್ಮಾರವರನ್ನು ತೆಗೆದು ಹಾಕುವ ಅತ್ಯಂತ ತರಾತುರಿಯಲ್ಲಿ ಮೋದಿ ಸರಕಾರ ಇತ್ತು ಎಂಬ ಸಂದೇಹವನ್ನು ದೃಢಪಡಿಸುತ್ತವೆ. ಇವುಗಳಲ್ಲಿ ರಫೇಲ್ ಹಗರಣ ಮತ್ತು ಇತರ ಭ್ರಷ್ಟಾಚಾರದ ಹಗರಣಗಳು ಸೇರಿವೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಬಹಿರಂಗಕ್ಕೆ ಬಂದಿರುವ ಸಂಗತಿಗಳ ಬೆಳಕಿನಲ್ಲಿ, ಕೇಂದ್ರೀಯ ವಿಚಕ್ಷಣಾ ಆಯುಕ್ತರನ್ನು ತಕ್ಷಣವೇ ಅವರ ಹುದ್ದೆಯಿಂದ ತೆಗೆದು ಹಾಕಬೇಕು ಮತ್ತು ಆಗಿನ ಸಿಬಿಐ ನಿರ್ದೇಶಕರನ್ನು ಕುರಿತ ವ್ಯವಹಾರವನ್ನು ಅವರು ನಿರ್ವಹಿಸಿದ ರೀತಿಯ ಬಗ್ಗೆ ಒಂದು ತನಿಖೆಗೆ ಆದೇಶ ನೀಡಬೇಕು ಎಂದು ಆಗ್ರಹಿಸಿದೆ.

ಸಾರ್ವಜನಿಕ ವಲಯದ ಬ್ಯಾಂಕುಗಳ ವಿಲೀನವನ್ನು ನಿಲ್ಲಿಸಬೇಕು –ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹ

ಭಾರತ ಸರಕಾರವು ವಿಜಯಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ ಮತ್ತು ದೇನಾ ಬ್ಯಾಂಕ್ ಈ ಮೂರು ರಾಷ್ಟ್ರೀಕೃತ ಬ್ಯಾಂಕುಗಳನ್ನು ವಿಲೀನಗೊಳಿಸಲು ತಕ್ಕುದಲ್ಲದ ತರಾತುರಿಯಿಂದ ಮುಂದೊತ್ತುತ್ತಿರುವುದರ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಆಳವಾದ ಆತಂಕವನ್ನು ವ್ಯಕ್ತಪಡಿಸಿದೆ. ಈ ನಿಟ್ಟಿನಲ್ಲಿ ಸರಕಾರ ಬ್ಯಾಂಕುಗಳ ನೌಕರರ, ಅಧಿಕಾರಿಗಳ ಮತ್ತು ಇಡೀ ಉದ್ದಿಮೆಯ ಸಾಮೂಹಿಕ ವಿರೋಧವನ್ನು ಉಪೇಕ್ಷಿಸುತ್ತಿದೆ ಎಂದು ಅದು ಹೇಳಿದೆ.

ಸಂಬಂಧಪಟ್ಟ ಬ್ಯಾಂಕುಗಳನ್ನು ಶಕ್ತಿಯುತಗೊಳಿಸಬೇಕು ಮತ್ತು ಕ್ರೋಢೀಕರಿಸಬೇಕು ಎಂಬ ಆಧಾರದಲ್ಲಿ ಬ್ಯಾಂಕುಗಳ ವಿಲೀನವನ್ನು ಸರಕಾರ ಸಮರ್ಥಿಸಿ ಕೊಳ್ಳುತ್ತಿದೆ. ಆದರೆ ವಾಸ್ತವವಾಗಿ,, ಇಂತಹ ವಿಲೀನ ಎಲ್ಲ ಮೂರು ಬ್ಯಾಂಕುಗಳನ್ನೂ ವಿಲೀನದ ನಂತರ ಮತ್ತಷ್ಟು ದುರ್ಬಲ ಗೊಳಿಸುತ್ತದೆ. ದೊಡ್ಡ ಕಾರ್ಪೊರೇಟ್ ಗುಂಪುಗಳು ಸಾಲ ಮರುಪಾವತಿಯಲ್ಲಿ ಉದ್ದೇಶಪೂರ್ವಕವಾಗಿ ಸುಸ್ತಿ ಮಾಡಿಕೊಂಡಿರುವುದರಿಂದಾಗಿಯೇ ಸಾರ್ವಜನಿಕ ವಲಯದ ಬ್ಯಾಂಕುಗಳ ಸಮಸ್ಯೆ ಹೊಮ್ಮಿರುವುದು. ಇದಕ್ಕೆ ಪರಿಹಾರ ಇರುವುದು ಈ ಸುಸ್ತಿದಾರ ಕಾರ್ಪೊರೇಟ್‌ಗಳಿಂದ ಅಪಾರ ಸಾಲ ಮೊತ್ತಗಳನ್ನು ದಂಡದೊಂದಿಗೆ ನೇರವಾಗಿ ವಸೂಲಿ ಮಾಡಲು ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳು ವುದರಲ್ಲಿದೆಯೇ ಹೊರತು ವಿಲೀನದ ವ್ಯರ್ಥ ಕಸರತ್ತುಗಳಿಂದ ಅಲ್ಲ ಎಂದು ಪೊಲಿಟ್‌ಬ್ಯುರೊ ಹೇಳಿದೆ. ಆದರೆ ಸರಕಾರ ಸುಸ್ತಿ ಮಾಡಿಕೊಂಡ ಕಾರ್ಪೊರೇಟ್‌ಗಳ ಬಗ್ಗೆ ಒಂದು ಸಂಪೂರ್ಣವಾಗಿ ಸಡಿಲವಾದ ನಿಲುವನ್ನು ಪ್ರದರ್ಶಿಸುತ್ತ ಬಂದಿದೆ. ಮತ್ತು ಐಬಿಸಿ(ದಿವಾಳಿ ಮತ್ತು ಪಾಪರ್ ಸಂಹಿತೆ) ವಿಧಾನದ ಮೂಲಕ ಸಾರ್ವಜನಿಕ ವಲಯದ ಬ್ಯಾಂಕುಗಳು ತಮಗೆ ಬಾಕಿ ಬರಬೇಕಾದ ಸಾಲದ ಮೊತ್ತಗಳಲ್ಲಿ ದೊಡ್ಡ ಪ್ರಮಾಣದ ಕಡಿತಗಳಿಗೆ ಒಪ್ಪುವಂತೆ ಬಲವಂತ ಮಾಡುತ್ತಿದೆ.

ಇಂತಹ ಬ್ಯಾಂಕ್ ವಿಲೀನಗಳು ಅವುಗಳ ಮೂಲ ಸಮಸ್ಯೆಗಳನ್ನು ಬಗೆಹರಿಸುವ ಬದಲು ವಾಸ್ತವವಾಗಿ ಹಲವಾರು ಬ್ಯಾಂಕ್ ಶಾಖೆಗಳನ್ನು ಅನಿವಾರ್ಯವಾಗಿ ಮುಚ್ಚುವುದರ ಮೂಲಕ ಬ್ಯಾಂಕುಗಳು ಕಾರ್ಯ ನಿರ್ವಹಿಸುವ ಪ್ರದೇಶಗಳನ್ನು ಹಿಂಡಿ ಹಿಪ್ಪೆ ಮಾಡುತ್ತವೆ, ಇದು ಉದ್ಯೋಗಾವಕಾಶಗಳನ್ನು ತೀವ್ರವಾಗಿ ಬಾಧಿಸುತ್ತದೆ. ಇದಲ್ಲದೆ ಬ್ಯಾಂಕಿಂಗ್ ಸೇವೆಗಳ ಲಭ್ಯತೆಯನ್ನು ಮತ್ತು ಹರಹನ್ನೂ ಕಡಿತಗೊಳಿಸುತ್ತದೆ. ಇದು ಮುಖ್ಯವಾಗಿ ದೂರ–ದೂರದ ಪ್ರದೇಶಗಳಲ್ಲಿ ಇರುವವರನ್ನೇ ಹೆಚ್ಚಾಗಿ ತಟ್ಟುತ್ತದೆ.

ಬ್ಯಾಂಕುಗಳ ವಿಲೀನದ ಇಂತಹ ಹಾನಿಕಾರಕ ಕಸರತ್ತನ್ನು ಸಿಪಿಐ(ಎಂ) ವಿರೋಧಿಸುವುದಾಗಿ ಹೇಳಿರುವ ಪೊಲಿಟ್ ಬ್ಯುರೊ ಇಂತಹ ನಡೆಗಳಿಗೆ ಮುಂದಾಗಬಾರದು ಎಂದು ಸರಕಾರಕ್ಕೆ ಕರೆ ನೀಡಿದೆ.

ಹಿಮಾಚಲ ಪ್ರದೇಶದ ಹಿರಿಯ ಸಿಪಿಐ(ಎಂ) ನೇತಾರ ಕಾಂ.ಮೊಹರ್ ಸಿಂಹ ನಿಧನ

ಸಿಪಿಐ(ಎಂ)ನ ಹಿಮಾಚಲ ಪ್ರದೇಶ ರಾಜ್ಯಸಮಿತಿಯ ಮಾಜಿ ಕಾರ್ಯದರ್ಶಿ ಹಾಗೂ ಮಾಜಿ ಕೇಂದ್ರ ಸಮಿತಿ ಸದಸ್ಯ ಮೊಹರ್ ಸಿಂಹ ಜನವರಿ 11ರಂದು ನಿಧನರಾಗಿದ್ದಾರೆ. ಅವರಿಗೆ 68 ವರ್ಷವಾಗಿತ್ತು.

ಇವರು ವಿದ್ಯಾರ್ಥಿ ದೆಸೆಯಲ್ಲಿಯೇ ರಾಜಕೀಯವನ್ನು ಪ್ರವೇಶಿಸಿದ್ದು ಹಿಮಾಚಲ ಪ್ರದೇಶದಲ್ಲಿ ವಿದ್ಯಾರ್ಥಿ ಚಳುವಳಿಯನ್ನು ಕಟ್ಟಿ ಬೆಳೆಸಿದವರು. ನಂತರ ಪಕ್ಷದ ಪ್ರಭಾವವನ್ನೂ ಈ ರಾಜ್ಯದಲ್ಲಿ ವಿಸ್ತರಿಸುವುದರಲ್ಲಿ ಒಂದು ಪ್ರಮುಖ ಪಾತ್ರ ವಹಿಸಿದ ಇವರು 1974ರಲ್ಲಿ ಸಿಪಿಐ(ಎಂ) ಸೇರಿದರು, 1977ರಲ್ಲಿ ಪೂರ್ಣಾವಧಿ ಕಾರ್ಯಕರ್ತರಾದರು. 1985ರಿಂದ 1991ರ ವರೆಗೆ ಹಂಗಾಮಿ ರಾಜ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ ಇವರು, 1991 ರಿಂದ 2004 ರವರೆಗೆ ರಾಜ್ಯ ಕಾರ್ಯದರ್ಶಿಯಾಗಿ ಚುನಾಯಿತರಾಗಿ ಪಕ್ಷಕ್ಕೆ ನೇತೃತ್ವ ನೀಡಿದರು. 1998ರಲ್ಲಿ 16ನೇ ಮಹಾಧಿವೇಶನದಲ್ಲಿ ಕೇಂದ್ರ ಸಮಿತಿಗೆ ಆಯ್ಕೆಯಾದ ಇವರು ಆ ಸ್ಥಾನದಲ್ಲಿ 2005 ರವರೆಗೂ ಮುಂದುವರೆದರು.

ಪಕ್ಷದ ಸದಸ್ಯರ ರಾಜಕೀಯ ಶಿಕ್ಷಣದಲ್ಲೂ ಇವರು ಪ್ರಮುಖ ಪಾತ್ರ ವಹಿಸಿದರು ಎನ್ನುತ್ತ ಸಿಪಿಐ(ಎಂ)



ಪೊಲಿಟ್‌ಬ್ಯುರೊ ಅವರಿಗೆ ಗೌರವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿದೆ, ಹಾಗೂ ಅವರ ಕುಟುಂಬದ ಸದಸ್ಯರಿಗೆ ಹಾರ್ದಿಕ ಸಂತಾಪಗಳನ್ನು ತಿಳಿಸಿದೆ.

ಕಾಂ.ಮೊಹರ್ ಸಿಂಹ ಅವರ ಅಪೇಕ್ಷೆಯಂತೆ ಅವರ ದೇಹವನ್ನು ಶಿಮ್ಲಾದ ಇಂದಿರಾ ಗಾಂಧಿ ಮೆಡಿಕಲ್ ಕಾಲೇಜಿಗೆ ಒಪ್ಪಿಸಲಾಗಿದೆ.

ಈಗ ವಿದ್ಯಾರ್ಥಿಗಳಿಂದ 'ದಿಲ್ಲಿ ಚಲೋ: ಫೆ. 18 ಮತ್ತು 19

"ಶಿಕ್ಷಣ ಉಳಿಸಿ, ಪ್ರಜಾಪ್ರಭುತ್ವ ಉಳಿಸಿ, ದೇಶ ಉಳಿಸಿ" ಆಂದೋಲನ

ದೇಶದ ರಾಜಧಾನಿ ದಿಲ್ಲಿಯಲ್ಲಿ ಕಾರ್ಮಿಕರು, ರೈತರು, ಮಹಿಳೆಯರು, ದಲಿತರ ಚಾರಿತ್ರಿಕ ಮತಪ್ರದರ್ಶನಗಳ ನಂತರ ಈಗ ಶಿಕ್ಷಣ ರಂಗದಲ್ಲಿನ ಜನಗಳ ಆಕ್ರೋಶವನ್ನು ಫೆಬ್ರುವರಿ 18 ಮತ್ತು 19 ರಂದು ಕಾಣಲಿದೆ. ದೇಶದ ಎಲ್ಲೆಡೆಗಳಿಂದ ವಿದ್ಯಾರ್ಥಿಗಳು ಒಂದು ಬೃಹತ್ 'ದಿಲ್ಲಿ ಚಲೋ'ಗೆ ಸಿದ್ಧರಾಗುತ್ತಿದ್ದಾರೆ. ಏಕೆಂದರೆ ಕಾರ್ಪೊರೇಟ್‌ಗಳನ್ನು ಬಿಟ್ಟು ದೇಶದ ಎಲ್ಲ ಜನವಿಭಾಗಗಳು ಮೋದಿ ಸರಕಾರದ ಧೋರಣೆಗಳಿಂದ ಸಂಕಷ್ಟಕ್ಕೀಡಾಗಿವೆ ಎಂದು ಜನವರಿ 16 ರಂದು ದಿಲ್ಲಿಯಲ್ಲಿ ಸಭೆ ಸೇರಿದ ಎಸ್‌ಎಫ್‌ಐ, ಎಐಎಸ್‌ಎಫ್, ಎಐಡಿಎಸ್‌ಒ, ಎಐಎಸ್‌ಬಿ ಮತ್ತು ಪಿಎಸ್‌ಯು ಈ ಐದು ವಿದ್ಯಾರ್ಥಿ ಸಂಘಟನೆಗಳ ಮುಖಂಡರು ಹೇಳಿದ್ದಾರೆ. ಇದಕ್ಕಾಗಿ ಎಲ್ಲ ರಾಜ್ಯಗಳಲ್ಲಿ ಶಿಕ್ಷಣ ರಂಗದಲ್ಲಿನ ಜ್ವಲಂತ ಪ್ರಶ್ನೆಗಳ ಬಗ್ಗೆ ಚರ್ಚೆ, ವಿಚಾರ ಸಂಕಿರಣಗಳು, ಸಮಾವೇಶಗಳು ಆರಂಭವಾಗುತ್ತಿವೆ ಎಂದು ಅವರು ಹೇಳಿದ್ದಾರೆ. "ಶಿಕ್ಷಣ ಉಳಿಸಿ, ಪ್ರಜಾಪ್ರಭುತ್ವ ಉಳಿಸಿ, ದೇಶ ಉಳಿಸಿ" ಎಂಬುದು ಈ ಪ್ರಚಾರಾಂದೋಲನದ ಘೋಷವಾಕ್ಯವಾಗಿದೆ.

ವಿದ್ಯಾರ್ಥಿ ಸಂಘಟನೆಗಳು ಮುಂದಿಟ್ಟಿರುವ ಕೇಂದ್ರ ಬೇಡಿಕೆಗಳು ಹೀಗಿವೆ:

1. ಕೆ.ಜಿ.ಯಿಂದ ಪಿ.ಜಿ. ವರೆಗೆ, ಅಂದರೆ ಪ್ರಾಥಮಿಕ–ಪೂರ್ವ ಘಟ್ಟದಿಂದ ಸ್ನಾತಕೋತ್ತರ ಹಂತದ ವರೆಗೆ ಒಂದು ದೇಶವ್ಯಾಪಿ ಸಂಪೂರ್ಣ ಸಾರ್ವಜನಿಕ ಸರ್ವಸಾಮಾನ್ಯ ಶಿಕ್ಷಣ ವ್ಯವಸ್ಥೆಯನ್ನು ಸ್ಥಾಪಿಸಬೇಕು.
2. ಶಿಕ್ಷಣದ ಮೇಲೆ ಸರಕಾರದ ವೆಚ್ಚವನ್ನು ಕನಿಷ್ಟ ಜಿಡಿಪಿಯ 6% ಕ್ಕೆ ಮತ್ತು ಕೇಂದ್ರ ಬಜೆಟಿನ 10% ಕ್ಕೆ ಏರಿಸಬೇಕು.
3. ಎಲ್ಲರಿಗೂ ಉದ್ಯೋಗದ ಭರವಸೆ ನೀಡಲು "ಭಗತ್‌ಸಿಂಗ್ ರಾಷ್ಟ್ರೀಯ ಉದ್ಯೋಗ ಖಾತ್ರಿ ಕಾಯ್ದೆ" (ಬಿಎನ್‌ಇಜಿಎ)ಯನ್ನು ತರಬೇಕು.
4. ಶಿಕ್ಷಣದ ಕೋಮುವಾದೀಕರಣ ನಿಲ್ಲಬೇಕು.
5. ಈಗಿರುವ ಮೀಸಲಾತಿಗಳನ್ನು ಸರಿಯಾಗಿ ಜಾರಗೊಳಿಸಬೇಕು ಮತ್ತು ಸರಕಾರೀ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಸಾಮಾಜಿಕ ನ್ಯಾಯ ಲಭ್ಯವಾಗುವಂತೆ ಮಾಡಬೇಕು.
6. ತಕ್ಷಣವೇ ಬಾಕಿ ಇಟ್ಟುಕೊಂಡಿರುವ ಎಲ್ಲ ವಿದ್ಯಾರ್ಥಿವೇತನಗಳಿಗೆ ಹಣ ಬಿಡುಗಡೆ ಮಾಡಬೇಕು ಮತ್ತು ವಂಚಿತ ಹಿನ್ನೆಲೆಗಳಿಂದ ಬರುವ ಸಂಶೋಧನಾ ವಿದ್ಯಾರ್ಥಿಗಳಿಗೆ ಹೆಚ್ಚು ಫೆಲೋಶಿಪ್‌ಗಳನ್ನು ಸ್ಥಾಪಿಸಬೇಕು.
7. ಶಿಕ್ಷಣದ ಒಕ್ಕೂಟ ಸ್ವರೂಪವನ್ನು ಕಾಪಾಡಬೇಕು ಮತ್ತು ಶಿಕ್ಷಣದ ಕೇಂದ್ರೀಕರಣವನ್ನು ಪ್ರತಿರೋಧಿಸಬೇಕು.
8. ಲಿಂಗ ತಾರತಮ್ಯವನ್ನು ಮತ್ತು ವಿದ್ಯಾರ್ಥಿನಿಯರ ಮೇಲೆ ಅತ್ಯಾಚಾರಗಳನ್ನು ನಿಲ್ಲಿಸಬೇಕು.

ಸಂಪಾದಕೀಯ

ಅಧಿಕಾರದಾಹದ ರಾಜಕಾರಣಕ್ಕೆ ಸರ್ಜರಿ ಬೇಕು

ಕರ್ನಾಟಕದಲ್ಲಿ ಮತ್ತೆ ಅಧಿಕಾರದಾಹದ ರಾಜಕಾರಣದ ನಗ್ನ ನರ್ತನ ಶುರುವಾಗಿದೆ. ಮೋದಿ–ಶಾ ಜೋಡಿ ಉತ್ತರ ಪ್ರದೇಶದ ಎಸ್.ಪಿ.–ಬಿ.ಎಸ್.ಪಿ. ಮೈತ್ರಿಕೂಟದ ಘೋಷಣೆಯಿಂದ ಕಂಗಾಲಾಗಿದ್ದಾರೆ. ಎಲ್ಲಿಂದ ಮುಂದಿನ ಸರಕಾರ ರಚಿಸಲು ಸೀಟುಗಳನ್ನು ಹೊಂಚುವುದು, ಎಲ್ಲಿ ಇನ್ನಷ್ಟು ಸೀಟುಗಳು ನಷ್ಟವಾಗಬಹುದು ಎಂದು ಲೆಕ್ಕ ಹಾಕುತ್ತಿದ್ದಾರೆ. ಕರ್ನಾಟಕದಲ್ಲೂ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿ ಮತ್ತು ಅದರ ಸರಕಾರ ಅವರಿಗೆ ಮುಳುವಾಗಿರುವುದರಿಂದ, ಈ ಮೈತ್ರಿ ಒಡೆಯಬೇಕು ಎಂಬುದು ಅವರ ಮುಖ್ಯ ಉದ್ದೇಶ. ಈ ಸರಕಾರವನ್ನು ಹೇಗಾದರೂ ಉರುಳಿಸಿದರೆ ಮೈತ್ರಿ ಸಹ ಉಳಿಯುವುದಿಲ್ಲ ಎಂಬುದು ಅವರ ಲೆಕ್ಕಾಚಾರ. ಆದ್ದರಿಂದ ಮೈತ್ರಿ ಸರಕಾರ ರಚನೆಯಾದಂದಿನಿಂದ 'ಆಪರೇಷನ್' ಮಾಡಲು ಸದಾ ಸಿದ್ಧರಿರುವ ಯೆಡಿಯೂರಪ್ಪನವರಿಗೆ ಹಸಿರು ನಿಶಾನೆ ತೋರಿಸಿದ್ದಾರೆ ಎಂದು ಹೇಳಲಾಗಿದೆ. 'ಆಪರೇಶನ್ ಕಮಲ'ದ ಸೂಚನೆ ಸಿಕ್ಕಕೂಡಲೇ ಅದರ ಭೀತಿಯಲ್ಲಿರುವ ಕಾಂಗ್ರೆಸ್–ಜೆಡಿ(ಎಸ್) ನಾಯಕರು ಬಿಜೆಪಿ ಶಾಸಕರ ಮೇಲೆ 'ಆಪರೇಶನ್; ಮಾಡುವ ಸಾಧ್ಯತೆಯಿರುವುದರಿಂದ ಜನವರಿ 10 ರಂದು ಎಲ್ಲಾ ಬಿಜೆಪಿ ಶಾಸಕರನ್ನು ರಾಷ್ಟ್ರೀಯ ಸಮಾವೇಶದ ಹೆಸರಲ್ಲಿ ದೆಹಲಿಗೆ ಕರೆದುಕೊಂಡು ಹೋಗಿ ವೈಭವಿ ಪಂಚತಾರಾ ಹೊಟೆಲೊಂದರಲ್ಲಿ ಕೂಡಿಡಲಾಯಿತು. ಸಂಕ್ರಾಂತಿಯ ಹೊತ್ತಿಗೆ 'ಆಪರೇಶನ್' ಮುಗಿದು ಬಿಜೆಪಿ ಸರಕಾರದ ಒಳ್ಳೆಯ ಸುದ್ದಿ ಕೊಡಬಹುದು ಎಂದು ಅವರಿಗೆ ಆಶ್ವಾಸನೆ ಕೊಡಲಾಯಿತು. ಆದರೆ ಒಂದು ವಾರವಾದರೂ 'ಆಪರೇಶನ್' ನಡೆಯುತ್ತಲೇ ಇತ್ತು.

ವಿಧಾನಸಭೆಯ ಒಟ್ಟು ಸಂಖ್ಯಾಬಲ 224. ಮೈತ್ರಿಕೂಟದ ಬಲ 120 (ಕಾಂಗ್ರೆಸ್– 80, ಜೆಡಿಎಸ್ – 37, ಪಕ್ಷೇತರ –2, ಬಿಎಸ್ಪಿ – 1). ಬಿಜೆಪಿ ಸದಸ್ಯರ ಬಲ 104. ಇಬ್ಬರು ಪಕ್ಷೇತರರ ಬೆಂಬಲ ಪಡೆದರೆ ಮತ್ತು 12 ಮೈತ್ರಿ ಶಾಸಕರು (ಮುಂದೆ ಬಿಜೆಪಿ ಸೇರಿ ಅಧಿಕಾರ ಪಡೆಯುವ ಮತ್ತು ಭಾರೀ ಹಣದ ಭರವಸೆ ಮೇಲೆ) ರಾಜೀನಾಮೆ ಕೊಟ್ಟು, ಸರಕಾರ ಉರುಳಿಸುವುದು ಬಿಜೆಪಿಯ ತಂತ್ರವಾಗಿತ್ತು. ಈ ತಂತ್ರದ ಸುಳಿವು ಸಿಕ್ಕ ಮೇಲೆ ಮೈತ್ರಿಕೂಟ ಸಹ ಪ್ರತಿತಂತ್ರ ಹೂಡಲಾರಂಭಿಸಿತು. ಬಿಜೆಪಿಯ ಆರು ಶಾಸಕರಿಂದ ರಾಜೀನಾಮೆ ಕೊಡಿಸುವುದು, ಕಾಂಗ್ರೆಸ್–ಜೆಡಿ(ಎಸ್) ಪ್ರತಿತಂತ್ರವಾಗಿತ್ತು.

ಬಿಜೆಪಿ ತನ್ನ 'ಆಪರೇಶನ್' ನಿಧಾನ ಜಾರಿಗೆ ತೊಡಗಿದಂತೆ ಕಾಂಗ್ರೆಸ್ ಅತೃಪ್ತರನ್ನು ಸಮಾಧಾನ ಪಡಿಸುವ ಕೆಲಸಕ್ಕೆ ಮುಂದಾಯಿತು. ಗೆರೆ ದಾಟಿದರೆ ಕ್ರಮ ಜರುಗಿಸುವ ಎಚ್ಚರಿಕೆಯನ್ನೂ ಕೊಡಲಾಯಿತು. ಈ ನಡುವೆ ಬಿಜೆಪಿಯ ಸಂಫರ್ಕದಲ್ಲಿ 10–12 ಶಾಸಕರು ಇದ್ದಾರೆ ಎಂದೆಲ್ಲಾ ಸುದ್ದಿ ಹರಡಲಾರಂಭಿಸಿತು. ಬಿಜೆಪಿಯ ಈ ಪ್ರಯತ್ನಕ್ಕೆ ತೆರೆ ಎಳೆಯುವ ಪ್ರಯತ್ನವಾಗಿ ಜನವರಿ 18ರಂದು ಕಾಂಗ್ರೆಸ್ ಶಾಸಕರ ಸಭೆ ಕರೆಯಲಾಯಿತು. ಈ ಸಭೆಯಲ್ಲಿ ಕಾಂಗ್ರೆಸ್ ನ 79 ಶಾಸಕರಲ್ಲಿ 75 ಹಾಜರಾಗಿದ್ದು, 4 ಶಾಸಕರು ಮಾತ್ರ ಗೈರು ಹಾಜರಾಗಿದ್ದಾರೆ. ಇವರಲ್ಲಿ ಒಬ್ಬರು ಅನಾರೋಗ್ಯದ, ಇನ್ನೊಬ್ಬರು ಕೋರ್ಟು ಕೆಲಸದ ಕಾರಣ ತಿಳಿಸಿದ್ದಾರೆ. ಇನ್ನಿಬ್ಬರು ಯಾವುದೇ ಕಾರಣ ಕೊಟ್ಟಿಲ್ಲ. ನಾಲ್ಕೂ ಶಾಸಕರಿಗೆ ಅವರ ಗೈರು ಹಾಜರಿಗೆ ಕಾರಣ ಕೇಳಿ ಶೋ ಕಾಸ್ ಕೊಡುವುದಾಗಿ ಸಿದ್ಧರಾಮಯ್ಯ ಹೇಳಿದ್ದಾರೆ. ಕಾರಣ ಸಮಾಧಾನಕರವಾಗಿರದಿದ್ದರೆ ಶಿಸ್ತುಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ಕಾಂಗ್ರೆಸ್ ಶಾಸಕರಿಂದ ರಾಜೀನಾಮೆ ಕೊಡಿಸುವ ಪ್ರಯತ್ನ ಸಫಲವಾಗುವ ಸಾಧ್ಯತೆ ಕಡಿಮೆಯಾಗುತ್ತಿದ್ದಂತೆ ವಿಧಾನಸಭೆ ಸೇರಿದಾಗ ಸರಕಾರವನ್ನು ಬೀಳಿಸುವ ತಂತ್ರಕ್ಕೆ ಬಿಜೆಪಿ ಮುಂದಾಗಿದೆ ಎಂದು ಹೇಳಲಾಗಿದೆ. ಗೈರು ಹಾಜರಾದ 4 ಶಾಸಕರು ಮತ್ತೂ 3 ಮೈತ್ರಿ ಶಾಸಕರು ಸದನದಲ್ಲಿ ಸರಕಾರದ ವಿರುದ್ಧ ಮತ ಹಾಕುವ ಹೊಸ ತಂತ್ರ ಹೆಣೆದಿದೆ ಎಂದು ಹೇಳಲಾಗಿದೆ. ಈ ಸೂಚನೆ ಸಿಗುತ್ತಿದ್ದಂತೆ ಕಾಂಗ್ರೆಸ್ ತನ್ನ ಶಾಸಕರನ್ನು ಸಭೆಯಿಂದ ನೇರವಾಗಿ ಬೆಂಗಳೂರಿನ ರೆಸಾರ್ಟಿಗೆ ಒಯ್ದಿದೆ. ಜನವರಿ 19ರಂದು ಬೆಂಗಳೂರಿಗೆ ಮರಳಲಿದ್ದ ಬಿಜೆಪಿ ಶಾಸಕರು ಗುರುಗ್ರಾಮದಲ್ಲೇ ಉಳಿಯಲಿದ್ದಾರೆ. ಅಂದರೆ ಪೂರ್ಣ ಪ್ರಮಾಣದ ರೆಸಾರ್ಟ್ ರಾಜಕೀಯ ಮರಳಿದೆ.

ಈ ಅಧಿಕಾರದಾಹದ ರಾಜಕಾರಣ ರಾಜ್ಯದಲ್ಲಿ ಇಷ್ಟು ಉಲ್ಬಣಗೊಳ್ಳುವುದಕ್ಕೆ ಮತ್ತು ರಾಜ್ಯದಲ್ಲಿ ರಾಜಕೀಯ ಅಸ್ಥಿರತೆ ತಲೆದೋರುವುದಕ್ಕೆ ಬಿಜೆಪಿಯೇ ಪ್ರಮುಖ ಕಾರಣವೆನ್ನುವ ಬಗ್ಗೆ ಸಂಶಯವೇ ಇಲ್ಲ. ಮೋದಿ–ಶಾ ನಾಯಕತ್ವದಲ್ಲಿ ಸಂವಿಧಾನ ಹಾಗೂ ಕಾನೂನುಬದ್ಧ ಆಡಳಿತ, ರಾಜಕಾರಣದ ವಿರುದ್ಧವೇ ಬಿಜೆಪಿ ನಡೆದುಕೊಳ್ಳುತ್ತಿದೆ. ಕರ್ನಾಟಕದ ಜನತೆ ಬಿಜೆಪಿಗೆ ಸರಕಾರ ರಚಿಸಲು ಜನಾದೇಶ ನೀಡಿಲ್ಲ. ಆದ್ದರಿಂದ ಸಂವಿಧಾನ–ಕಾನೂನುಗಳ ಪ್ರಕಾರ ಜವಾಬ್ದಾರಿಯುತ ವಿರೋಧ ಪಕ್ಷದ ಕೆಲಸ ಮಾಡುವುದನ್ನು ಬಿಟ್ಟು, ಪದೇ ಪದೇ ಹಣ, ಕೇಂದ್ರದಲ್ಲಿ ಅಧಿಕಾರದ ದುರ್ಬಳಕೆ ಮಾಡಿ ಅಧಿಕಾರಕ್ಕೆ ಬರಲು ಪ್ರಯತ್ನಿಸುತ್ತಿದೆ. 95 ಬಿಜೆಪಿ ಶಾಸಕರು ಪ್ರತಿನಿಧಿಸುವ 84 ತಾಲ್ಲೂಕುಗಳಲ್ಲಿ ಬರಗಾಲ ಕವಿದಿದೆ. ರಾಜ್ಯ ಸರ್ಕಾರದ ಸಚಿವ ಸಂಪುಟ ಉಪಸಮಿತಿಗಳು ಬರ ಅಧ್ಯಯನದಲ್ಲಿ ನಿರತವಾಗಿದೆ. ಈ ಸಂದರ್ಭದಲ್ಲಿ ಸ್ಥಳೀಯ ಶಾಸಕರು ಕ್ಷೇತ್ರದಲ್ಲಿದ್ದು ಅದನ್ನು ಚುರುಕುಗೊಳಿಸುವ ಕೆಲಸ ಮಾಡಬೇಕಿತ್ತು. ಆದರೆ, ಈ ತಂಡಗಳು ಬರುವ ವೇಳೆಗೆ, ಬರ ಪರಿಹಾರ ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ದೊಡ್ಡ ದನಿಯಲ್ಲಿ ಕೂಗುವ ಬಿಜೆಪಿ ಶಾಸಕರು ಗುರುಗ್ರಾಮದ ವೈಭವೋಪೇತ ಹೊಟೆಲ ರೆಸಾರ್ಟುಗಳಲ್ಲಿ ಮಜಾ ಮಾಡುತ್ತಿದ್ದಾರೆ. ಅನೈತಿಕವಾಗಿ ಅಪ್ರಜಾಸತ್ತಾತ್ಮಕವಾಗಿ ಸರಕಾರ ಉರುಳಿಸುವ ಕೆಲಸದಲ್ಲಿ ನಿತರರಾಗಿದ್ದಾರೆ. 2008ರಿಂದ ಬಿಜೆಪಿ ಕರ್ನಾಟಕದ ರಾಜಕಾರಣದ ಮಟ್ಟವನ್ನು ಸತತವಾಗಿ ಪಾತಾಳಕ್ಕಿಳಿಸುತ್ತಿದೆ.

ಇದರಲ್ಲಿ ಕಾಂಗ್ರೆಸ್, ಜೆಡಿ(ಎಸ್) ಗಳ ಪಾತ್ರ ಸಹ ಇದೆ. ಕಾಂಗ್ರೆಸ್ ಶಾಸಕರ ಅತಿಯಾದ ಅಧಿಕಾರದಾಹ ಇಲ್ಲದೆ, ಅವರು ಹಣದ ಆಮಿಷಕ್ಕೆ ಬಲಿಬೀಳದಿದ್ದರೆ ಬಿಜೆಪಿಗೆ ಅದರ ಅನೈತಿಕ ರಾಜಕಾರಣ ನಡೆಸಲು ಸಾಧ್ಯವಾಗುತ್ತಿರಲಿಲ್ಲ. 2008ರಲ್ಲಿ ರೆಸಾರ್ಟ್ ರಾಜಕಾರಣ ಆರಂಭಿಸುವುದರಲ್ಲಿ ಜೆಡಿ(ಎಸ್)ಸಹ ಬಿಜೆಪಿಯ ಜತೆಗಿತ್ತು ಎಂದು ಮರೆಯುವಂತಿಲ್ಲ. ಈಗಲೂ ಕಾಂಗ್ರೆಸ್–ಜೆಡಿ(ಎಸ್) ಗಳ ನಡುವೆ ಲೋಕಸಭೆಯ ಸೀಟುಗಳ ಹಂಚಿಕೆಯ ಬಗೆಗಿನ ಸಂಘರ್ಷದ ಲಾಭವನ್ನೂ ಬಿಜೆಪಿ ಪಡೆಯುತ್ತಿದೆ. ಮೈತ್ರಿ ಸರಕಾರ ರಚಿಸಿದ ಮೇಲೆ ರೈತರ ಸಾಲಮನ್ನಾ, ಬೆಳೆಗಳಿಗೆ ಲಾಭದಾಯಕ ಬೆಲೆ, ಬರ ಪರಿಹಾರ, ಭೂಮಿ–ವಸತಿ ಹಂಚಿಕೆ ಮುಂತಾದ ಜನಪರ ಕಾರ್ಯಕ್ರಮಗಳನ್ನು ತುರ್ತಾಗಿ ಪ್ರಾಮಾಣಿಕವಾಗಿ ಜಾರಿ ಮಾಡಲು ಮುಂದಾಗಿದ್ದರೆ, ಬಿಜೆಪಿಯನ್ನು ರಾಜಕೀಯವಾಗಿ ಎದುರಿಸಬಹುದಿತ್ತು. ಮೈತ್ರಿಕೂಟದ ಶಾಸಕರೂ ಸದಾ ತಮ್ಮ ಅಧಿಕಾರದಾಹದಿಂದ ಸರಕಾರವನ್ನು ಅಸ್ಥಿರತೆಯತ್ತ ತಳ್ಳುತ್ತಿದ್ದಾರೆ. ಪರಿಣಾಮಕಾರಿ ಆಡಳಿತ ಕೊಡುವುದರಲ್ಲಿ ವಿಫಲರಾಗಿದ್ದಾರೆ.

ಈ ಸಾರ್ವತ್ರಿಕ ಅಧಿಕಾರದಾಹಕ್ಕೆ ಕಾರಣ ತಿಳಿಯಲು ದೂರ ಹೋಗಬೇಕಾಗಿಲ್ಲ. ಈ ಮೂರೂ ಪಕ್ಷಗಳು ಬೂರ್ಜ್ವಾ–ಭೂಮಾಲಕ ವರ್ಗಗಳ ಪಕ್ಷಗಳಾಗಿದ್ದು ತಮ್ಮ ಹಿತ ಮತ್ತು ವರ್ಗಹಿತ ಕಾಯುವುದಷ್ಟೇ ಅವರ ಅಜೆಂಡಾ. ಆದ್ದರಿಂದ ದುಡಿಯುವ ಜನರ ಹಕ್ಕೊತ್ತಾಯಗಳನ್ನು ಮಂಡಿಸುವ ಸಾಧಿಸುವ ಹೋರಾಟಗಳ ಒತ್ತಡದಿಂದ ಮಾತ್ರ ಇವರನ್ನು ದಾರಿಗೆ ತರಲು ಸಾಧ್ಯ. ಅವರ ಅಧಿಕಾರದಾಹಕ್ಕೆ ಸರ್ಜರಿ ಮಾಡುವುದು ಸಾಧ್ಯ. •



ಕೃಪೆ: ಪಿ. ಮಹಮ್ಮದ್

ಮುಖ್ಯಮಂತ್ರಿಗಳ ಜತೆ ಆದಿವಾಸಿಗಳ ಸಭೆ

ಎಸ್.ವೈ. ಗುರುಶಾಂತ್

ಕರ್ನಾಟಕದ ಆದಿವಾಸಿ ಸಮುದಾಯಗಳ ಪ್ರಮುಖ ಸಮಸ್ಯೆಗಳ ಕುರಿತು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಇದೇ ಜನವರಿ 11, 2019 ರಂದು ವಿಧಾನಸೌಧದ ಸಭಾಂಗಣದಲ್ಲಿ ಜರುಗಿದ ಉನ್ನತ ಮಟ್ಟದ ಸಭೆ ಅತ್ಯಂತ ಯಶಸ್ವಿ ಸಭೆ. ರಾಜ್ಯದ ವಿವಿಧ ಮೂಲ ಆದಿವಾಸಿ ಸಮುದಾಯಗಳ 27 ಪ್ರತಿನಿಧಿಗಳು, ಬಹುತೇಕ ಪಶ್ಚಿಮ ಘಟ್ಟದ ಅರಣ್ಯ ಪ್ರದೇಶ ವ್ಯಾಪ್ತಿಯ ಜಿಲ್ಲೆಗಳಿಂದ ಭಾಗವಹಿಸಿದ್ದರು. ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಂ.ಸಮಿತಿಯ ಪದಾಧಿಕಾರಿಗಳು, ಸಮಿತಿಯ ಸದಸ್ಯರು, ವಿವಿಧ ಸಮುದಾಯಗಳ ಪ್ರತಿನಿಧಿಗಳುಳ್ಳ ರಾಜ್ಯ ನಿಯೋಗವು ಮಾನ್ಯ ಮುಖ್ಯಮಂತ್ರಿ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಯವರಿಗೆ ಮನವಿ ಪತ್ರ ಸಲ್ಲಿಸಿತು. ನಿಯೋಗದ ಪರವಾಗಿ ಶ್ರೀ ಜಿತೇಂದ್ರ ಚೌಧುರಿ, ಎಸ್.ವೈ.ಗುರುಶಾಂತ್, ವೈ. ಕೆ.ಗಣೇಶ್, ಶ್ರೀಧರ ಕೆ.ನಾಡ, ಜೆ.ಆರ್.ಪ್ರೇಮಾ, ಸುಂದರ ಮಲೆಕುಡಿಯ, ಜಯಾನಂದ ಇರುಳಿಗರ ಕೃಷ್ಣಮೂರ್ತಿ, ಜಯಕುಮಾರ್ ಹಸಲರು, ಮಂಜುನಾಥ್ ಹಸಲರು ಮುಂತಾದವರು ಮನವಿ ಪತ್ರವನ್ನು ನೀಡಿದರು.



ಮುಖ್ಯಮಂತ್ರಿಗಳೊಂದಿಗೆ ಸಭೆ ಸಕಾರಾತ್ಮಕ ಹೆಜ್ಜೆ

ಈ ಸಭೆಗೆ ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್‌ನ ರಾಷ್ಟ್ರೀಯ ಸಂಚಾಲಕರು, ಸಂಸದರು, ಮಾಜಿ ಸಚಿವರಾದ ಶ್ರೀ ಜಿತೇಂದ್ರ ಚೌಧುರಿಯವರು ಭಾಗವಹಿಸಿ, ನಿಯೋಗದ ನೇತೃತ್ವ ವಹಿಸಿದ್ದರು. ವಿಶೇಷವೆಂದರೆ ಕಳೆದ 2018 ಆಗಸ್ಟ್ ನಲ್ಲಿ ನಿಯೋಗ ಭೇಟಿಯಾಗಿ ಚರ್ಚಿಸಿದಾಗ ಮುಂದಿನ ಉನ್ನತ ಮಟ್ಟದ ಸಭೆಗೆ ಬರಬೇಕೆಂದು, ಆದಿವಾಸಿಗಳ ಪ್ರಶ್ನೆಗಳನ್ನು ಇತ್ಯರ್ಥ ಪಡಿಸಲು ಅವರ ಅನುಭವ ಅಗತ್ಯವೆಂದೂ ಸ್ವತಃ ಮುಖ್ಯಮಂತ್ರಿ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರೇ ಶ್ರೀ ಚೌಧುರಿಯವರಿಗೆ ಆಹ್ವಾನಿಸಿದ್ದರು. ಆ ಸಭೆಯ ಬಳಿಕ ಧರ್ಮಸ್ಥಳಕ್ಕೆ ಸಿ.ಎಂ. ಭೇಟಿ ನೀಡಿದಾಗ ಆದಿವಾಸಿ ಪ್ರಶ್ನೆಗಳ ಬಗ್ಗೆ, ಇತ್ತೀಚೆಗೆ ನಡೆದ ಸಭೆ ಬಗ್ಗೆ ಪ್ರಸ್ತಾಪಿಸಿದ ಬಳಿಕ ಅದರ ಫಲಶ್ರುತಿಯಾಗಿ ಬಾಂಜಾರು ಪ್ರದೇಶಕ್ಕೆ ಜಿಲ್ಲಾಧಿಕಾರಿಗಳು ಮತ್ತು ಇತರೆ ಅಧಿಕಾರಿಗಳು ಭೇಟಿ ನೀಡಿ ಸುಮಾರು ಒಂದು ಕೋಟಿಗೂ ಅಧಿಕ ಮೊತ್ತದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ.

ಈ ಸಭೆಗೆ ಸರಕಾರದ ಅರಣ್ಯ, ಕಂದಾಯ, ಸಮಾಜ ಕಲ್ಯಾಣ, ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಪರಿಶಿಷ್ಟ ವರ್ಗಗಳ ಇಲಾಖೆಯ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆಯ ಎಸ್.ಸಿ.ಪಿ– ಎಸ್.ಟಿ.ಪಿ. ಘಟಕದ ವಿಶೇಷ ಸಲಹೆಗಾರರೂ, ಎಸ್.ಟಿ. ಕಲ್ಯಾಣ ಇಲಾಖೆ ನಿರ್ದೇಶಕರು, ಅರಣ್ಯ ಸಂರಕ್ಷಣಾಧಿಕಾರಿಗಳು,

ಪುಟ 5 ಕ್ಕೆ

ದೇಶದ ಕಾನೂನುಗಳ ತಾಯಿ ಸಂವಿಧಾನ: ನ್ಯಾ. ದಾಸ್.

– ವಾಸುದೇವ ಉಚ್ಚಿಲ್ –



ಮಂಗಳೂರು: ದೇಶದಲ್ಲಿರುವ ಎಲ್ಲ ಕಾನೂನುಗಳ ತಾಯಿ ಸಂವಿಧಾನ. ಈ ತಾಯಿಯನ್ನು ರಕ್ಷಿಸಿದರೆ ಮಾತ್ರವೇ ದೇಶ ಸರಿದಾರಿಯಲ್ಲಿ ಇರಲು ಸಾಧ್ಯ. ಆದರೆ, ಸಂವಿಧಾನವನ್ನು ಏಕೆ ಓದಬೇಕು? ಅದನ್ನು ಏಕೆ ಅರ್ಥಮಾಡಿಕೊಳ್ಳಬೇಕು ಎಂದು ಕೆಲವರು ಪ್ರಶ್ನೆ ಮಾಡುತ್ತಿದ್ದಾರೆ. ಸಂವಿಧಾನ ಎಂಬುದು ಕತೆ, ಕಾದಂಬರಿ ಅಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ರೂಪಿಸಿದ ಮತ್ತು ಅದನ್ನು ರಕ್ಷಿಸುತ್ತಿರುವ ಕಾರ್ಯಕ್ರಮ ಎಂಬುದಾಗಿ ನಿವೃತ್ತ ನ್ಯಾಯಮೂರ್ತಿ ಎಚ್. ಎನ್.ನಾಗಮೋಹನ ದಾಸ್ ಹೇಳಿದರು.

ಅವರು ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಜನವರಿ 12 ರಂದು ಸಮುದಾಯ ಮಂಗಳೂರು ಮತ್ತು ಸಂವಿಧಾನ ಓದು ದ.ಕ. ಜಿಲ್ಲಾ ಸಮಿತಿ ವತಿಯಿಂದ ಏರ್ಪಡಿಸಲಾಗಿದ್ದ 'ಸಂವಿಧಾನ ಓದು ಕಾರ್ಯಾಗಾರ'ದಲ್ಲಿ ಪ್ರಧಾನ ಸಂಪನ್ಮೂಲ ವ್ಯಕ್ತಿಯಾಗಿ ದಿಕ್ಸೂಚಿ ಭಾಷಣ ಮಾಡಿದರು.

ಕಳೆದ 69 ವರ್ಷಗಳಲ್ಲಿ ದೇಶದಲ್ಲಿ ಆಗಿರುವ ಎಲ್ಲಾ ಸುಧಾರಣೆಗಳಿಗೂ ಸಂವಿಧಾನವೇ ಕಾರಣ. ಪಾಳೆಗಾರಿಕೆ ಪದ್ಧತಿಯನ್ನು ಕಿತ್ತುಹಾಕಿ, ಸಮಾನತೆ ತಂದ ಕೀರ್ತಿಯೂ ನಮ್ಮ ಸಂವಿಧಾನಕ್ಕೆ ಸಲ್ಲಬೇಕು. ಸ್ವಾತಂತ್ರ್ಯಪೂರ್ವದಲ್ಲಿ ದೇಶವು 600ಕ್ಕೂ ಹೆಚ್ಚು ರಾಜರು, ಪಾಳೆಯಗಾರರ ಕೈಯಲ್ಲಿ ಹಂಚಿಹೋಗಿತ್ತು. ಇಡೀ ದೇಶವನ್ನು ಒಗ್ಗೂಡಿಸಿದ್ದು ಸಂವಿಧಾನ ಎಂದರು.

ಹಿಂದೆ ನಮ್ಮ ರಾಷ್ಟ್ರದಲ್ಲಿ ಸಮಾನತೆ ಇರಲಿಲ್ಲ. ದೋಬಿಯ ಮಗ ದೋಬಿಯಾಗಿ, ರೈತನ ಮಗ ರೈತನಾಗಿ, ಪಾಳೆಯಗಾರನ ಮಗ ಪಾಳೆಯಗಾರನಾಗಿ ಮುಂದುವರಿಯಬೇಕಿತ್ತು. ಜಾತಿಯೇ ಉದ್ಯೋಗವನ್ನು ನಿರ್ಧರಿಸುತ್ತಿತ್ತು. ಒಂದೇ ಸ್ಮಶಾನದಲ್ಲಿ ಎಲ್ಲಾ ಜಾತಿಯ ಜನರ ಹೆಣ ಸುಡುವುದಕ್ಕೆ ಅವಕಾಶವಿರಲಿಲ್ಲ. ಚಹಾ ಮಾರುತ್ತಿದ್ದ ಹುಡುಗ ಪ್ರಧಾನಿಯಾಗುವುದಕ್ಕೆ, ರೈತನ ಮಗ ನ್ಯಾಯಮೂರ್ತಿಯಾಗುವುದಕ್ಕೆ ಕಾರಣವಾದದ್ದು ನಮ್ಮ ಸಂವಿಧಾನ ಎಂದು ಪ್ರತಿಪಾದಿಸಿದರು.

ಎಲ್ಲಾ ದೇಶಗಳಲ್ಲೂ ಜನರು ಸಂವಿಧಾನ ಬದ್ಧ ಆಡಳಿತ ಬಯಸುತ್ತಾರೆ. ಭಾರತದಲ್ಲಿ ಸಂವಿಧಾನವನ್ನು ಅರ್ಥಮಾಡಿಸುವ ಕೆಲಸ ಹಿಂದಿನ ದಶಕಗಳಲ್ಲಿ ನಡೆದಿಲ್ಲ. ಅದರ ಪರಿಣಾಮವಾಗಿ ಜನರಲ್ಲಿ ಹಲವು ಪ್ರಶ್ನೆಗಳು ಉಳಿದಿವೆ. ಅದಕ್ಕಾಗಿಯೇ ಸಂವಿಧಾನದ ಅರಿವು ಉಂಟುಮಾಡುವ ಅಭಿಯಾನಗಳ ಅಗತ್ಯವಿದೆ ಎಂಬುದಾಗಿ ನ್ಯಾಎಚ್. ಎನ್.ನಾಗಮೋಹನದಾಸ್ ವಿವರಿಸಿದರು.

ಕಾರ್ಯಾಗಾರವನ್ನು ದ.ಕ.ಜಿಲ್ಲಾ ಸರಕಾರೀ ಪ್ಲೀಡರ್ ಉದಯಾನಂದ ಎ ಅವರು ಉದ್ಘಾಟಿಸಿದರು. ಅವರು ಮಾತನಾಡುತ್ತಾ, ಭಾರತದಲ್ಲಿ ಸಂವಿಧಾನವೇ ನಮಗೆ ಗೀತೆ, ಬೈಬಲ್, ಕುರ್‌ಆನ್ ಎಲ್ಲವೂ ಆಗಬೇಕು. ಧರ್ಮ ವೈಯುಕ್ತಿಕ ಆಚರಣೆಗೆ ಸೀಮಿತವಾಗಿರಬೇಕು. ಅದು ಪ್ರಚಾರದ ಸೊತ್ತು ಆಗಬಾರದು ಮತ್ತು ಘರ್ಷಣೆಯ ವಸ್ತುವೂ ಆಗಬಾರದು ಎಂದು ತಿಳಿಸಿದರು.

ರಾಜ್ಯ ಸಂವಿಧಾನ ಓದು ಅಭಿಯಾನದ ಸಂಚಾಲಕಿ ಹಾಗೂ ಸಮುದಾಯ ಕರ್ನಾಟಕದ ಹಿರಿಯ ಕಾರ್ಯಕರ್ತೆ ವಿಮಲ ಕೆ.ಎಸ್. ಪ್ರಾಸ್ತಾವಿಕವಾಗಿ ಮಾತನಾಡಿ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಇಂಥ ಕಾರ್ಯಾಗಾರಗಳನ್ನು ನಡೆಸಿ ಅಲ್ಲಿ ಗುರುತಿಸಲ್ಪಟ್ಟ ಕಾರ್ಯಕರ್ತರಿಂದ ಊರುರುಗಳಲ್ಲಿಯೂ ಸಂವಿಧಾನ ಅರಿವು ಮೂಡಿಸುವ ಕಾರ್ಯಕ್ರಮವನ್ನು ವಿಸ್ತರಿಸಲಾಗುವುದೆಂದು ವಿವರಿಸಿದರು.

ಅಭಿಯಾನದ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ನ್ಯಾಯವಾದಿ ಯಶವಂತ ಮರೋಳಿ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಮಿತಿ ಉಪಾಧ್ಯಕ್ಷರುಗಳಾದ ನಿವೃತ್ತ ಪ್ರಾಂಶುಪಾಲ ಡಾ।ಎನ್.ಇಸ್ಮಾಯಿಲ್ ಹಾಗೂ ನಿವೃತ್ತ ಪ್ರಾಧ್ಯಾಪಕ ಪ್ರೊ.ಕೆ.ರಾಜೇಂದ್ರ ಉಡುಪ ವೇದಿಕೆಯಲ್ಲಿದ್ದರು. ಸಮುದಾಯ ಮಂಗಳೂರು ಹಾಗೂ ಅಭಿಯಾನದ ಜಿಲ್ಲಾ ಕಾರ್ಯದರ್ಶಿ ಮನೋಜ್ ವಾಮಂಜೂರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಣೆ ಮಾಡಿದರು. ವಾಸುದೇವ ಉಚ್ಚಿಲ ವಂದಿಸಿದರು.

ಬಳಿಕ ದೃಶ್ಯ ನಿರೂಪಣೆ, ವಾದ–ಸಂವಾದಗಳೊಂದಿಗೆ ನ್ಯಾ. ಎಚ್.ಎನ್.ನಾಗಮೋಹನ ದಾಸ್ ಅವರು ಕಾರ್ಯಾಗಾರವನ್ನು ನಡೆಸಿಕೊಟ್ಟರು. ಉಪನ್ಯಾಸಕರು, ನ್ಯಾಯವಾದಿಗಳು, ಸಾಮಾಜಿಕ ಕಾರ್ಯಕರ್ತರನ್ನೊಳಗೊಂಡ 125 ಮಂದಿ ಸಾರ್ವಜನಿಕರು, 225 ವಿದ್ಯಾರ್ಥಿಗಳು ಒಟ್ಟಾಗಿ 350 ಮಂದಿ ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.



ಕಾನೂನಾತ್ಮಕವಾಗಿ ಸಿಗಬೇಕಾದ ಕೂಲಿ ಕಾರ್ಮಿಕರಿಗೆ ಸಿಗಬೇಕು : ಮೀನಾಕ್ಷಿಸುಂದರಂ

ಅಂಕೋಲಾ: ಸರಕಾರವೇ ನೇಮಿಸಿರುವ ಕಾರ್ಮಿಕ ಆಯೋಗ ನಿಗದಿಗೊಳಿಸಿರುವ ಕಾರ್ಮಿಕ ಇಲಾಖೆ ಪ್ರಕಟಿಸಿರುವ ಕಾನೂನಾತ್ಮಕವಾಗಿ ಸಿಗಬೇಕಾದ ಕನಿಷ್ಠ ಕೂಲಿ ಕಾರ್ಮಿಕರಿಗೆ ಆಡಳಿತ ಮಂಡಳಿಯವರು ನೀಡಬೇಕು. ಇಲ್ಲದಿದ್ದರೆ ಕನಿಷ್ಠ ಕೂಲಿಗಾಗಿ ಕಾರ್ಮಿಕರು ಹೋರಾಟ ನಡೆಸಬೇಕಾಗುತ್ತದೆ. ಕಾರ್ಮಿಕರನ್ನು ಗುಲಾಮರ ಹಾಗೆ ದುಡಿಸಿಕೊಳ್ಳುವುದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲವೆಂದು ಸಿಐಟಿಯು ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಮೀನಾಕ್ಷಿ ಸುಂದರಂ ತಿಳಿಸಿದ್ದಾರೆ. ಅವರು ರವಿವಾರ ಅಂಕೋಲಾದಲ್ಲಿ ನೇವಲ್ ಬೇಸ್ ಗುತ್ತಿಗೆ ಕಾರ್ಮಿಕರ ಯೂನಿಯನ್ (ರಿ) ಉದ್ಘಾಟಿಸಿ ಮಾತನಾಡುತ್ತಿದ್ದರು.

ಅವರು ಮಾತನಾಡುತ್ತ ಸಂಸತ್‌ನಲ್ಲಿ 'ವೇತನಗಳ ಕುರಿತು ಕಾರ್ಮಿಕ ಸಂಹಿತೆ ಮಸೂದೆ' ಮಂಡಿಸಲಾಗಿದೆ. ಇದರಿಂದ ಕಾರ್ಮಿಕರು ಇನ್ನಷ್ಟು ಅಭದ್ರರಾಗಲಿದ್ದಾರೆ. ಖಾಯಂ ಸ್ವರೂಪದ ಕೆಲಸ ಇಲ್ಲದಂತಾಗಿ ಎಲ್ಲ ಕಡೆ ಗುತ್ತಿಗೆ ಕಾರ್ಮಿಕರಿಂದಲೆ ಕೆಲಸ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ. ಕಾರ್ಮಿಕ ಹಕ್ಕುಗಳನ್ನು ದಮನ ಮಾಡಲು ಕೇಂದ್ರ ಸರಕಾರ ಹೊರಟಿದೆ ಎಂದರು.

ಯೂನಿಯನ್ ಅಧ್ಯಕ್ಷ ಶಾಂತಾರಾಮ ನಾಯಕ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾರ್ಮಿಕರಿಗೆ ಪಿ.ಎಫ್., ಇ.ಎಸ್.ಐ. ಮತ್ತು ಉದ್ಯೋಗದ ಭದ್ರತೆ ಒದಗಿಸಬೇಕೆಂದರು. ಪ್ರಧಾನ ಕಾರ್ಯದರ್ಶಿ ಲೋಕೇಶ ಶೇಡಗೇರಿ ಸ್ವಾಗತಿಸಿದರು. ವೇದಿಕೆ ಮೇಲೆ ಪದಾಧಿಕಾರಿಗಳಾದ ಗೌರೀಶ ಟಿ. ನಾಯಕ, ಸಂತೋಷ ನಾಯ್ಕ, ಶಿವರಾಮ ಆಚಾರಿ, ಅಭಯ ಗುರವ ಮತ್ತು ಸಿಐಟಿಯು ತಾಲೂಕಾಧ್ಯಕ್ಷ ಎಚ್.ಬಿ. ನಾಯಕ ಉಪಸ್ಥಿತರಿದ್ದರು.

– ಶಾಂತಾರಾಮ ನಾಯಕ್

ಮೀನುಗಾರರ ಪತ್ತೆ ಗಂಭೀರವಾಗಿ ಪರಿಗಣಿಸಲು ಆಗ್ರಹ

ಉಡುಪಿ ಜಿಲ್ಲೆಯ ಮಲ್ಪೆ ಬಂದರಿನಿಂದ ಹೊರಟ 8 ಮಂದಿ ಮೀನುಗಾರರ ಬಗ್ಗೆ ಡಿಸೆಂಬರ್ 16 ರಿಂದ ಯಾವುದೇ ಸುಳಿಯು ಇಲ್ಲವಾದ್ದರಿಂದ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಪತ್ತೆಕಾರ್ಯಕ್ಕೆ ಬೇಕಾದ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಉಡುಪಿ ಜಿಲ್ಲಾ ಮೀನುಗಾರರು ಮತ್ತು ಮೀನು ಕಾರ್ಮಿಕರ ಸಂಘದ ಅಧ್ಯಕ್ಷರಾದ ಶ್ರೀಯುತ ಕೆ. ಶಂಕರ್ ಮತ್ತು ಮೀನುಗಾರರ ಮುಖಂಡರಾದ ಶ್ರೀಯುತ ವಾಸು ಕಾಂಚನ್‌ರವರು ಒತ್ತಾಯಿಸಿರುತ್ತಾರೆ.




ಗದಗ


ಅಂಗನವಾಡಿ ಜಿಲ್ಲಾ ಸಮ್ಮೇಳನಗಳು

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಗದಗ ಜಿಲ್ಲಾ ಪ್ರಥಮ ಸಮ್ಮೇಳನವನ್ನು ಅಂಗನವಾಡಿ ನೌಕರರ ರಾಜ್ಯಾಧ್ಯಕ್ಷರಾದ ಕಾಮ್ರೇಡ್ ಎಸ್ ವರಲಕ್ಷ್ಮಿಯವರು ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿರುವುದು.

ಯಾದಗಿರಿ ಜಿಲ್ಲೆಯ ಅಂಗನವಾಡಿ ನೌಕರರ 3ನೇ ಜಿಲ್ಲಾ ಸಮ್ಮೇಳನ ಯಾದಗಿರಿಯ ಚರ್ಚ್ ಹಾಲ್ ನಲ್ಲಿ ನಡೆಯಿತು ಜನವರಿ30–31 ಫೆಬ್ರವರಿ1 ರಂದು ಬೀದರ್ ಬಸವಕಲ್ಯಾಣ ದಲ್ಲಿ ನಡೆಯುವ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ 7ನೇ ರಾಜ್ಯ ಸಮ್ಮೇಳನ ಯಶಸ್ವಿ ಮಾಡಲು ಕರೆನೀಡಲಾಯಿತು.



ಯಾದಗಿರಿ



ನಾವು ಇಲ್ಲಿಗೆ ಬಂದಿರುವುದು ಸಾಯಲಿಕ್ಕಲ್ಲ

(We have not come here to Die)

ರೋಹಿತ್ ವೆಮುಲ ಅವರ 'ಸಾಂಸ್ಥಿಕ ಹತ್ಯೆ' ನಡೆದು ಇದೇ ಜನವರಿ 17 ರಂದು ಮೂರು ವರ್ಷಗಳು ಕಳೆದಿವೆ. ಅವರನ್ನು ಅರ್ಥಪೂರ್ಣವಾಗಿ ನೆನೆಸಿಕೊಳ್ಳುವುದರ ಭಾಗವಾಗಿ ಅವರ ಬಗ್ಗೆ ತೆಗೆಯಲಾದ ಡಾಕ್ಯುಮೆಂಟರಿ ಫಿಲಂನ್ನು ತೋರಿಸುವ ಕಾರ್ಯಕ್ರಮವನ್ನು (ಪ್ರಮುಖವಾಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ) ದೇಶದಾದ್ಯಂತ ಹಮ್ಮಿಕೊಳ್ಳಲಾಗಿದೆ. 110 ಮಿನಿಟುಗಳ ಈ ಡಾಕ್ಯುಮೆಂಟರಿ ಫಿಲಂ ನ್ನು ದೀಪಾ ಧನರಾಜ್ ಅವರು ನಿರ್ದೇಶಿಸಿದ್ದಾರೆ. ಜನವರಿ 17 ರಂದು ಒಂದೇ ದಿನ ದೇಶದಾದ್ಯಂತ ಹಲವಾರು ನಗರಗಳಲ್ಲಿ ಚಿತ್ರ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು. ಬೆಂಗಳೂರಿನಲ್ಲಿ ಸೇರಿದಂತೆ ಮುಂದೆಯೂ ಇಂತಹ ಹಲವು ಚಿತ್ರ ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗಿದೆ.

ರೋಹಿತ್ ವೇಮುಲ ಮರುಹುಟ್ಟು ಪಡೆಯಬೇಕಾಗಿತ್ತು

ರೋಹಿತ್ ವೇಮುಲನ ಬಗ್ಗೆ ಒಂದು ಸಣ್ಣ ಟಿಪ್ಪಣಿ ಬರೆಯಲು ಕೂತಾಗಲೆಲ್ಲಾ ರೋಹಿತನ ಮುಖ, ಆತನು ಬರೆದ ಡೆತ್ ನೋಟ್ ಕಲೆಸಿಕೊಂಡು ಕಣ್ಮುಂದೆ ನಿಲ್ಲುತ್ತದೆ. ಇದಕ್ಕೆ ಪದಗಳು ಸಿಗುತ್ತಿಲ್ಲ.

...ಸಾಯುವ ಕ್ಷಣಗಳಲ್ಲಿ ಬರೆದ ಆ ಡೆತ್ ನೋಟನ್ನು ರೋಹಿತ್ ಯಾರಿಗೆ ಬರೆದ? ಓದಿದರೆ ಈ ಭೂಮಿ ಉದ್ದೇಶಿಸಿ ಮಾತಾಡುತ್ತಿದ್ದಾನೆ ಅನ್ನಿಸುತ್ತದೆ. ಅವನು ಸತ್ತು, ಆ ಸಾವಿಗೆ ಯಾರು ಕಾರಣರಲ್ಲ ಎಂದು ಹೇಳುವ ರೋಹಿತ್ ಈಗ ಬದುಕುತ್ತಿರುವವರಿಗೆ ಅಂದರೆ ನಾಳೆ ಸಾಯುವವರಿಗೆ ಅಣುಕಿಸುತ್ತಿದ್ದಾನೊ ಅಥವಾ ಸಾಂತ್ವನ ಹೇಳುತ್ತಿದ್ದಾನೊ?

ತನ್ನ ಸಾವಿಗೆ ಯಾರು ಕಾರಣರಲ್ಲ ಎಂದು ಬರೆದ ರೋಹಿತನು ಡಿಸೆಂಬರ್ 18, 2015ರಲ್ಲಿ ಉಪಕುಲಪತಿಗೆ ಬರೆದ ಪತ್ರದಲ್ಲಿ–

1) "ಎಲ್ಲಾ ದಲಿತ ವಿದ್ಯಾರ್ಥಿಗಳಿಗೂ ಅವರ ಪ್ರವೇಶಾತಿಯ ಸಮಯದಲ್ಲಿ 10 ಮಿಲಿಗ್ರಾಂ ಸೋಡಿಯಂ ಆಕ್ಸೈಡ್ ಕೊಡಿ. ಅಂಬೇಡ್ಕರನ್ನು ಓದಬೇಕು ಅನ್ನಿಸಿದಾಗ ಅವರಿಗೆ ಅದನ್ನು ತಿನ್ನಲು ಸೂಚನೆ ನೀಡಿ",
2) "ಒಂದು ಒಳ್ಳೆಯ ಹಗ್ಗವನ್ನು ಎಲ್ಲಾ ದಲಿತ ವಿದ್ಯಾರ್ಥಿಗಳ ಕೊಠಡಿಗೆ ನಿಮ್ಮ ಗೆಳೆಯರಾದ ಮಹಾನ್ ವಾರ್ಡನ್ ಅವರಿಗೆ ಹೇಳಿ ಸರಬರಾಜು ಮಾಡಿಸಿ."

ಈ ಮಾತುಗಳಲ್ಲಿ ರೋಹಿತನ ಅಗ್ನಿಪರ್ವತದಿಂದ ಹೊಮ್ಮುವ ಲಾವರಸದಂಥ ಮಾತುಗಳಲ್ಲಿ ಆತನ ಸಾವಿನ ಕಾರಣ ಅಡಗಿ ಕೂತಿದೆ.

ಆದರೂ ತನ್ನ ಸಾವಿಗೆ ಯಾರೂ ಕಾರಣರಲ್ಲ ಎಂದು ಬರೆದು ನೇಣಿಗೆ ಜೀವ ಕೊಡುವ ರೋಹಿತನ ಪ್ರಜ್ಞೆ ಹೇಗಿರಬಹುದು? ತನ್ನ ಸುತ್ತಲೂ ಜಗತ್ತು ಹೇಗೆ ಕಂಡಿರಬಹುದು? ಈ ಜಾತಿ ಈ ಮತ ಈ ಸುಳ್ಳು, ಈ ತಾರತಮ್ಯ ವಂಚನೆಗಳಲ್ಲಿ ಬದುಕು ಸವೆಸುತ್ತಿರುವ ತನ್ನ ಸುತ್ತಲ ಸಮೂಹವು ಕ್ಷುದ್ರಜೀವಿಗಳು, ಹುಳುಗಳು ಎಂದು ಅನ್ನಿಸದಿದ್ದರೆ ತನ್ನ ಸಾವಿಗೆ ಯಾರೂ ಕಾರಣರಲ್ಲ ಎಂದು ಬರೆಯಲು ರೋಹಿತನಿಗೆ ಸಾಧ್ಯವಾಗುತ್ತಿತ್ತೇ? ಅದಕ್ಕೇ ಆತನಿಗೆ ಈ ಬದುಕು ಅಸಹ್ಯ ಅನ್ನಿಸಿರಬೇಕು. ಸಹ್ಯ ಮಾಡಿಕೊಳ್ಳಲು ಆತ ಆಕಾಶಕ್ಕೆ ನೆಗೆದು ಬಿಡುತ್ತಾನೇನೊ.

ಹೀಗಿದ್ದೂ, ಭಾರತವನ್ನಾಳುವ ಸಂಸತ್ತಿನಲ್ಲಿ ಕೇಂದ್ರ ಮಾನವ ಸಂಪನ್ಮೂಲ ಸಚಿವೆ ಸ್ಮೃತಿ ಇರಾನಿಯವರು "ರೋಹಿತ್ ತನ್ನ ಸಾವಿಗೆ ಯಾರೂ ಕಾರಣರಲ್ಲ ಎಂದು ಬರೆದಿದ್ದಾನೆ" ಎಂದು ಹೇಳಿ ಅದು ಸಾಲದೆ ಸುಳ್ಳಿನ ಹೂಮಾಲೆ ಕಟ್ಟಿ ಸಂಸತ್ತನ್ನೇ ಕುಬ್ಜಗೊಳಿಸಿಬಿಟ್ಟರು. ನಾಚಿಕೆಯನ್ನೇ ಕೊಂದುಬಿಟ್ಟರು. ಸಂಸತ್ತನ್ನು ಸಂವೇದನಾಹೀನ ಕುಷ್ಠ ಜೀವಿಗಳ ಸಂತೆ ಮಾಡಿಬಿಟ್ಟರು.

ಇರಲಿ,

ವಿದೇಶಗಳಲ್ಲಿ ಉನ್ನತ ವ್ಯಾಸಂಗ ಪೂರೈಸಿ ಅಂಬೇಡ್ಕರ್, 1917ರಲ್ಲಿ ಭಾರತದ ಬರೋಡಾಕ್ಕೆ ಬಂದು ಎಲ್ಲೂ ಮನೆ ಸಿಗದೆ ಕೊನೆಗೆ ಪಾರ್ಸಿ ಹೋಟೆಲಿನಲ್ಲಿ ಸುಳ್ಳು ಜಾತಿ ಹೇಳಿ ಉಳಿದುಕೊಂಡಿದ್ದಾಗ ಮಹರ್ ಎಂದು ಗೊತ್ತಾಗಿ ಹೋಟೆಲ್ನಿಂದ ಅಂಬೇಡ್ಕರನ್ನು ಅವಮಾನಕರವಾಗಿ ಹೊರ ಹಾಕಲ್ಪಟ್ಟ ಆ ದಿಕ್ಕೆಟ್ಟ ಸಂದರ್ಭದ ಬಗ್ಗೆ ಅಂಬೇಡ್ಕರ್ ಬರೆಯುತ್ತಾ "ನನ್ನ ತಲೆ ಖಾಲಿಯಾಗಿತ್ತು" ಎನ್ನುತ್ತಾರೆ. ವೇಮುಲನು ತನ್ನ ಡೆತ್ನೋಟ್ ನಲ್ಲಿ "ಈ ನಿಮಿಷದಲ್ಲಿ ನಾನು... ಖಾಲಿಯಾಗಿದ್ದೇನೆ" ಎಂದು ಬರೆದಿದ್ದಾನೆ. ಆ ಖಾಲಿಯಾದ ಜರ್ಝರಿತ ಆ ಅಮಾನವೀಯ ಸ್ಥಿತಿಯನ್ನೂ ಸಂಭಾಳಿಸಿಕೊಂಡು ಅಂಬೇಡ್ಕರ್ ಮರುಹುಟ್ಟು ಪಡೆಯುತ್ತಾರೆ. ಧಾರಣಾಶಕ್ತಿಯನ್ನು ಕೂಡಿಸಿಕೊಂಡು ವಿಷಕಂಠನಂತಾಗುತ್ತಾರೆ. ಆದರೆ ವೇಮುಲ, ಅಂಬೇಡ್ಕರ್ರ ಶೇಕಡ ಹತ್ತರಷ್ಟನ್ನೂ ಅನುಭವಿಸದ ವೇಮುಲ, ತನ್ನ ಅಸಹಾಯಕ ಸಮುದಾಯಕ್ಕೆ ಬೆಳಕಾಗಬೇಕಿದ್ದ ವೇಮುಲನು ಅಂಬೇಡ್ಕರ್ರಂತೆ ಮರುಹುಟ್ಟು ಪಡೆಯಬೇಕಾಗಿತ್ತು, ಪಡೆಯಬೇಕಾಗಿತ್ತು ಅಂತ ಅವನ ಮುಖ ನೆನಪಾದಾಗಲೆಲ್ಲಾ ಅನ್ನಿಸುತ್ತದೆ.

– ದೇವನೂರ ಮಹಾದೇವ

('ರೋಹಿತ್ ವೇಮುಲ ಎಂಬ ನಕ್ಷತ್ರ' ಎಂಬ ಪುಸ್ತಕಕ್ಕೆ ಬರೆದ ಮುನ್ನುಡಿಯಿಂದ)

ಕೃಪೆ: ದಿನೇಶ್ ಅಮೀನ್ ಮಟ್ಟು ಅವರ ಫೇಸ್ ಬುಕ್ ಪೋಸ್ಟ್

●

ಮುಖ್ಯಮಂತ್ರಿಗಳ ಜತೆ ಆದಿವಾಸಿಗಳ ಸಭೆ...... ಪುಟ 3 ರಿಂದ

ಸಂಬಂಧಿಸಿದ ವಿವಿಧ ಇಲಾಖೆಗಳ ಇತರೆ ಅಧಿಕಾರಿಗಳೂ ಪಾಲ್ಗೊಂಡಿದ್ದರು.

ಬವಣೆಗಳ ಅಹವಾಲು

ರಾಜ್ಯ ಮಟ್ಟದ ಬೇಡಿಕೆಗಳು ಮತ್ತು ಜಿಲ್ಲಾವಾರು ಪ್ರಶ್ನೆಗಳ ವಿವರವಾದ ಮನವಿ ಪತ್ರಗಳನ್ನು ಸಲ್ಲಿಸಲಾಯಿತು. ಪ್ರಮುಖ ಬೇಡಿಕೆಗಳನ್ನು ರಾಜ್ಯ ಸಹ ಸಂಚಾಲಕರಾದ ಎಸ್.ವೈ.ಗುರುಶಾಂತ್ ರವರು ಒಂದೊಂದಾಗಿ ವಿವರಿಸಿದರು.

ಆದಿವಾಸಿಗಳ ಬದುಕಿಗೆ ನೆಲೆ ಕಲ್ಪಿಸಬಹುದಾದ ಬಹು ನಿರೀಕ್ಷಿತ ಅರಣ್ಯ ಹಕ್ಕುಗಳ ಕಾಯ್ದೆ–2006 ರ ಜಾರಿ ಕರ್ನಾಟಕದಲ್ಲಿ ಅತ್ಯಂತ ಶೋಚನೀಯ, ಇದಕ್ಕೆ ಸರಕಾರದ ನಿರ್ಲಕ್ಷ ಬಹು ಮುಖ್ಯ ಕಾರಣ ಎಂಬ ಅಂಶವನ್ನು ಎತ್ತಿ ತೋರಿಸಲಾಯಿತು. ಕಾಯ್ದೆಯ ಪ್ರಕಾರ ಹಾಕಲಾದ ಕ್ಲೇಮುಗಳ ಅರ್ಜಿಗಳನ್ನು ಎಂತಹುದೋ ನೆಪಗಳನ್ನು ಒಡ್ಡಿ ಬಹುತೇಕ ತಿರಸ್ಕರಿಸಿಲಾಗಿದೆ. ದೊರೆತಿರುವ ಭೂಮಿಯೂ ಅತ್ಯಲ್ಪ. ಮನೆ ಕಟ್ಟಿಕೊಂಡ ಒಂದೆರಡು ಸೆಂಟ್ ಜಾಗವನ್ನೇ ಕಾಯ್ದೆಯ ಜಾರಿ ಎಂದು ಘೋಷಿಸಲಾಗಿದೆ. ಕೊಡಗು, ಮೈಸೂರು ಜಿಲ್ಲೆಗಳನ್ನು ವ್ಯಾಪಿಸಿರುವ ನಾಗರಹೊಳೆ, ಶಿವಮೊಗ್ಗ ಜಿಲ್ಲೆಯ ಕೊಡಚಾದ್ರಿ, ದಕ್ಷಿಣ ಕನ್ನಡ ಜಿಲ್ಲೆಯ ನೆರಿಯ ಮತ್ತಿತರೆ ಪ್ರದೇಶಗಳು, ರಾಮನಗರ ಇತ್ಯಾದಿ.. ಹೀಗೆ ಆದಿವಾಸಿಗಳು ಪಡೆದ ಭೂಮಿಯಲ್ಲಿ ಕೃಷಿ ಅಭಿವೃದ್ಧಿ ಪಡಿಸಲು ಸರಕಾರಿ, ಸಹಕಾರಿ ಬ್ಯಾಂಕ್‌ಗಳಿಂದ ಸಾಲ ಪಡೆಯಲು, ಬುಡಕಟ್ಟು ಅಭಿವೃದ್ಧಿ ಯೋಜನೆಗಳ ಬಳಕೆಗೂ ಅವಕಾಶ ಇಲ್ಲವಾಗಿದೆ. ಕಾರಣ ಆ ಭೂಮಿಗೆ ಪಟ್ಟ ಇಲ್ಲ ಎಂಬುದು ಒಂದು ನೆಪ. ಸಮುದಾಯ ಹಕ್ಕುಗಳನ್ನು ಕೇಳಿದವರ ಮೇಲೆಯೇ ಸುಳ್ಳು ಮೊಕದ್ದಮೆ ಹೂಡಿ ಬೆದರಿಸುವುದು, ಕಾಡಿನ ಉತ್ಪನ್ನಗಳ ಸಂಗ್ರಹಕ್ಕೆ ಅಡ್ಡಿ ಮಾಡುವುದು ಮತ್ತು ಆ ಹಕ್ಕನ್ನು ಕಂಟ್ರಾಕ್ಟ್‌ದಾರರಿಗೆ ಕೊಟ್ಟಿರುವುದು!

ಹಾಗೇ ಆದಿವಾಸಿಗಳ ಭೂಮಿ ಬಲಾಢ್ಯರ ವಶದಲ್ಲಿರುವುದನ್ನು ಗಮನಕ್ಕೆ ತರಲಾಯಿತು. ಅರಣ್ಯ ಹಕ್ಕುಗಳ ಕಾಯ್ದೆಯಡಿಯಲ್ಲಿ ಮತ್ತೇ ಅರ್ಜಿ ಹಾಕಲು ಅವಕಾಶ ನೀಡಬೇಕೆಂದು ಆಗ್ರಹಿಸಲಾಯಿತು.

ಸ್ವಚ್ಛಂದವಾಗಿ ಬೆಳೆದ ಆದಿವಾಸಿಗಳಿಗೆ ಈಗ ವಸತಿ ಪ್ರಶ್ನೆಯೂ ಗಂಭೀರ. ಇದು ದಾಸ್ಯದ ಬದುಕಿಗೆ ಕಾರಣವೂ ಆಗಿದೆ. ಆದಿವಾಸಿಗಳಿಗೆ ವಸತಿ ಕಲ್ಪಿಸುವಲ್ಲಿ ಅತ್ಯಂತ ಅವೈಜ್ಞಾನಿಕ, ಅಸಮರ್ಪಕ ನೀತಿ, ವ್ಯವಸ್ಥೆಗಳೂ ಇವೆ. ಪುನರ್ವಸತಿ ಮಾಡಿರುವಲ್ಲಿ ಹತ್ತಾರು ಸಮಸ್ಯೆಗಳು ಸೃಷ್ಟಿಯಾಗಿವೆ. ಅರಣ್ಯದಲ್ಲಿ ವಾಸಿಸುವವರಿಗೆ ಹಕ್ಕುಪತ್ರ ಕೊಡುವುದಿಲ್ಲ. ಅಂತಹವರಿಗೆ 94 ಸಿ ಅಡಿಯಲ್ಲಿ ಹಕ್ಕು ಪತ್ರ ನೀಡಬೇಕು. ಸೈಟು ಮತ್ತು ಮನೆ ಕಟ್ಟಲು ಸಹಾಯಧನ ನೀಡುವುದೂ ಒಳಗೊಂದು ಮುಖ್ಯವಾಗಿ ಆದಿವಾಸಿಗಳ ವಸತಿ ಪ್ರಶ್ನೆಯನ್ನು ಇತ್ಯರ್ಥಗೊಳಿಸಲು ಸಮಗ್ರ ನೀತಿ ಮತ್ತು ಜಾರಿಯ ಅಗತ್ಯಗಳನ್ನು ಮನವರಿಕೆ ಮಾಡಲಾಯಿತು.

ಈ ಪ್ರಶ್ನೆಗಳಿಗೆ ಸಂಘಟನೆ ಮಾಡಿದ ಸಲಹೆ ಎಂದರೆ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನದ ಸಮಗ್ರ ವಿಮರ್ಶೆ ನಡೆದು ಜಾರಿಯಲ್ಲಿ ಇರುವ ಅಡ್ಡಿಗಳು ಮತ್ತು ನಿರ್ಲಕ್ಷ್ಯತನವನ್ನು ಗುರುತಿಸಿ ಭೂಮಿ ಮತ್ತು ಸಮುದಾಯ ಹಕ್ಕುಗಳನ್ನು ನೀಡಲು ಕ್ರಮ ವಹಿಸಬೇಕು ಎಂಬ ಬೇಡಿಕೆಯನ್ನು ಮುಖ್ಯಮಂತ್ರಿಗಳು ಒಪ್ಪಿದರು. ವಸತಿ ಪ್ರಶ್ನೆಗೆ ಸಂಬಂಧಿಸಿ ಸಮಗ್ರ ಹಾಗೂ ನಿರ್ದಿಷ್ಟ ಯೋಜನೆ, ಕಾರ್ಯಕ್ರಮವನ್ನು ಆದ್ಯತೆಯಾಗಿ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿಗಳು ತಿಳಿಸಿ ಆ ದೆಸೆಯಲ್ಲಿ ಕಾರ್ಯ ಪ್ರವೃತ್ತರಾಗುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಹಕ್ಕು ಕಾಯ್ದೆಯಡಿಯಲ್ಲಿರುವ ಆದಿವಾಸಿ ಫಲಾನುಭವಿಗಳಿಗೆ ಸಾಲ ಸೌಲಭ್ಯ ನೀಡಿಕೆ, ಅಭಿವೃದ್ಧಿ ಯೋಜನೆಗಳ ಜಾರಿಗೆ ಯಾವುದೇ ಅಡ್ಡಿ ಪಡಿಸಲು ಬರುವುದಿಲ್ಲ ಎಂದು ತಿಳಿಸಿದ ಕಾಂ.ಚೌಧುರಿಯವರು ಅದಕ್ಕಾಗಿ ಇರುವ ಕಾಯ್ದೆಯ ಅಂಶಗಳನ್ನು ತಿಳಿಸಿದರು. ಈ ಬಗ್ಗೆ ಸೂಕ್ತ ನಿರ್ದೇಶನವನ್ನು ನೀಡುವುದಾಗಿ ಅಧಿಕಾರಿಗಳು ತಿಳಿಸಿದರು.

ಆದಿವಾಸಿಗಳ ಶಿಕ್ಷಣ, ಉದ್ಯೋಗದ ಸಮಸ್ಯೆಗಳನ್ನು ವಿವರಿಸಲಾಯಿತಲ್ಲದೇ ಪ್ರಸಕ್ತ ಸ್ಥಿತಿ ಬಗ್ಗೆ ವಿವರವಾದ ಅಧ್ಯಯನವನ್ನು ನಡೆಸಲು ಅಧ್ಯಯನ ಸಮಿತಿ ರಚಿಸಿ ಕ್ರಮ ವಹಿಸುವುದು, ಆಶ್ರಮ ಶಾಲೆಯಲ್ಲಿರುವ ಗುತ್ತಿಗೆ ಆಧಾರದಲ್ಲಿರುವ ಶಿಕ್ಷಕರ ಖಾಯಂಗೊಳಿಸುವುದು, ಆ ಶಾಲೆಗಳನ್ನು ಮೇಲ್ದರ್ಜೆಗೆ ಏರಿಸುವುದು, ಮೀಸಲಾತಿ ಪ್ರಮಾಣವನ್ನು ಶೇ.8.1 ಕ್ಕೆ ಹೆಚ್ಚಿಸುವುದು, ಅಳಿವಿನಂಚಿನಲ್ಲಿರುವ ಆದಿವಾಸಿಗಳ ರಕ್ಷಣೆಗೆ ವಿಶೇಷ ಯೋಜನೆ, ಆದಿವಾಸಿಗಳು ಅಧಿಕವಿರುವ ಪ್ರದೇಶಗಳನ್ನು ಷೆಡ್ಯೂಲ್ 5 ಮತ್ತು 6 ನೆಯ ಪರಿಚ್ಛೇದಕ್ಕೆ ಸೇರಿಸುವುದು, ಮುಂತಾದವುಗಳನ್ನು ಮಂಡಿಸಲಾಯಿತು. ಎಸ್.ಟಿ. ಪಟ್ಟಿಗೆ ಕುಣಬಿ, ಕುಂಬ್ರಿ ಮರಾಠಿ, ಗೌಳಿ, ಹಾಲಕ್ಕಿ ಸಮುದಾಯಗಳನ್ನು ಸೇರಿಸಲು ಅಗತ್ಯ ಕ್ರಮ ವಹಿಸಲು ಆಗ್ರಹಿಸಲಾಯಿತು. ವಿಶೇಷವಾಗಿ ಕುಣಬಿ ಸಮುದಾಯದ ಬಗ್ಗೆ ಸ್ಪಷ್ಟನೆ ಕೇಳಿರುವ ಕೇಂದ್ರ ಸರಕಾರದ ಜೊತೆ ಅಗತ್ಯ ಮಾಹಿತಿ ನೀಡಿ ಅದನ್ನು ಸಂಸತ್ತಿನಲ್ಲಿ ಅಂಗೀಕರಿಸುವುಂತೆ ಮಾಡಲು ಕ್ರಮ ವಹಿಸಲು ಒತ್ತಾಯಿಸಲಾಯಿತು.

ವಿವಿಧ ಜಿಲ್ಲೆಗಳಲ್ಲಿ ಹೂಡಲಾಗಿರುವ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂತೆಗೆಯಲು ಆಗ್ರಹಿಸಲಾಯಿತು. ವಿಠ್ಠಲ ಮಲೆಕುಡಿಯ ಮತ್ತವರ ತಂದೆಯವರ ಮೇಲಿನ ಕೇಸ್, ಸುಂದರ ಮಲೆಕುಡಿಯ ಮತ್ತು ಅವರ ಕುಟುಂಬದ ಮೇಲೆ ಭೂದಾಹಿ ಭೂಮಾಲೀಕ ಮತ್ತಾತನ ಕುಟುಂಬದವರು ನಡೆಸಿದ ದಾಳಿ ಕೇಸ್‌ನಲ್ಲಿ ಮರುಪರಿಶೀಲನಾ ಅರ್ಜಿ ಸಲ್ಲಿಕೆ, ಆ ಕುಟುಂಬಕ್ಕೆ ನೆರವು ಹೊಸನಗರ ತಾಲೂಕಿನ ಬೆನ್ನಟ್ಟೆಯ ಮರಿಯ ಹಸಲರು ಅವರ ಮೇಲೆ ನಡೆದ ದೌರ್ಜನ್ಯ ಪ್ರಕರಣದಲ್ಲಿ ಇವರ ಮೇಲೆಯೇ ಹೂಡಲಾದ ಕೇಸ್ ಹಿಂಪಡೆಯಲು, ಅದೇ ತಾಲೂಕಿನ ಅಡಂಗದೋದೂರು ಗ್ರಾಮದ ಪ್ರದೀಪ ಮತ್ತು ಗೋವಿಂದ ಹಸಲರು ಅವರ ನಿವೇಶನ ಅನಧಿಕೃತವೆಂದು ಉಪ ತಹಶೀಲ್ದಾರರು ಹೂಡಿರುವ ಮೊಕದ್ದಮೆ, ಬಾಂಜಾರು ಮಲೆ ಕುಡಿಯ ಪ್ರದೇಶದಲ್ಲಿ ಸರಕಾರ ಮತ್ತು ಯಾನೆಪೋಯಾ ಹಾಗೂ ಆದಿವಾಸಿಗಳ ನಡುವಿನ ವ್ಯಾಜ್ಯ ಸುಪ್ರಿಂ ಕೋರ್ಟ್‌ನಲ್ಲಿದ್ದು ಅದರ ಪರಿಹಾರ, ಪಾಂಡವಪುರ ಹಾಗೂ ನಾಗಮಂಗಲದ ಹಕ್ಕಿ ಪಿಕ್ಕಿ ಸಮುದಾಯದ ಪ್ರಶ್ನೆಗಳು, ವಿಶೇಷವಾಗಿ ನಾಗಮಂಗಲದಲ್ಲಿ ಅವರ ಸ್ಮಶಾನ ಭೂಮಿ ಹಕ್ಕು, ಹೀಗೆ ನಿರ್ದಿಷ್ಟ ಪ್ರಕರಣಗಳನ್ನು ಬಗೆ ಹರಿಸಲು ಒತ್ತಾಯಿಸಲಾಯಿತು. ಜಿಲ್ಲೆಗಳ ಮುಖಂಡರು ಸಾಂದರ್ಭಿಕವಾಗಿ ತಮ್ಮ ಬವಣೆಗಳನ್ನು ಸಭೆಯ ಗಮನಕ್ಕೆ ತಂದರು.

ಸ್ಪಂದನ

ಜಿಲ್ಲೆಗಳಲ್ಲಿರುವ ಇಂತಹ ಒಟ್ಟು ಪ್ರಶ್ನೆಗಳನ್ನು ಆಲಿಸಿ ಪರಿಹಾರ ನೀಡಲು ಜಿಲ್ಲೆಗಳಲ್ಲಿ **'ಆದಿವಾಸಿ ಅದಾಲತ್'** ಗಳನ್ನು ನಡೆಸಲು ಆಗ್ರಹಿಸಲಾಯಿತು. ಇದನ್ನು ಒಪ್ಪಿದ ಮುಖ್ಯಮಂತ್ರಿಗಳು ಇದೇ ಜನವರಿ 31 ರಂದು ಮೈಸೂರಿನ ಹುಣಸೂರಿನಲ್ಲಿ ಸುತ್ತಲಿನ ಜಿಲ್ಲೆಗಳ ಸಮುದಾಯಗಳ ಪ್ರತಿನಿಧಿಗಳನ್ನು ಆಹ್ವಾನಿಸಿ ವಿಸ್ತೃತ ಸಭೆ ನಡೆಸುವುದಾಗಿ ಪ್ರಕಟಿಸಿದರು. ಇದೇ ಮಾದರಿಯಲ್ಲಿ ಕರಾವಳಿ, ರಾಮನಗರ, ಉತ್ತರ ಕನ್ನಡ, ಶಿವಮೊಗ್ಗ ಗಳಲ್ಲಿಯೂ ಸಂಬಂಧಿಸಿದ ಸಚಿವರು, ಸರಕಾರದ ಅಧಿಕಾರಿಗಳನ್ನು ಒಳಗೊಂಡು ಸಭೆ ನಡೆಸುವುದಾಗಿ ಹೇಳಿದರು.

ಈ ಸಭೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅದ್ಯಕ್ಷರಾದ ಕಾಂ.ಜಿ.ಸಿ.ಬಯ್ಯಾರೆಡ್ಡಿ, ಕ.ಪ್ರಾಂ. ಕೃಷಿ ಕೂಲಿಕಾರರ ಸಂಘದ ರಾಜ್ಯ ಅದ್ಯಕ್ಷರಾದ ಕಾಂ.ನಿತ್ಯಾನಂದಸ್ವಾಮಿ ಯವರು ಹಾಜರಿದ್ದು ಚರ್ಚೆಗೆ ಸಹಾಯ ನೀಡಿದರು. ಈ ಸಭೆಯಲ್ಲಿ ದೊರೆತ ಭರವಸೆಗಳು ಈಡೇರುವ ಆಶಯವನ್ನು ಸಂಘವು ವ್ಯಕ್ತಪಡಿಸಿದ್ದು ಈ ಬಗ್ಗೆ ಜನರಲ್ಲಿ ಪ್ರಚಾರಾಂದೋಲನ ನಡೆಸಲು ಮತ್ತು ಹೋರಾಟ ಮುಂದುವರಿಸಲು ಕರೆ ನೀಡಲಾಗಿದೆ. ●

ಅತಿಥಿ ಅಂಕಣ



ಪ್ರೊ. ಟಿ. ಆರ್. ಚಂದ್ರಶೇಖರ

ಮೇಲುಜಾತಿಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10 ಮೀಸಲಾತಿ ಎಷ್ಟು ಸರಿ?

ಸಾಂವಿಧಾನಿಕ ಮೀಸಲಾತಿಯು ಸಾಮಾಜಿಕ ಹಿಂದುಳಿದಿರುವಿಕೆಗೆ ಮಾತ್ರ ಅನ್ವಯವಾಗುವಂತಹ ಕ್ರಮವಾಗಿದೆ. ಆರ್ಥಿಕ ನೆಲೆಯಲ್ಲಿ ಈ ಸೌಲಭ್ಯ ನೀಡುವುದು ಸಂವಿಧಾನಾತ್ಮಕ ಸೂತ್ರದ ಉಲ್ಲಂಘನೆಯಾಗುತ್ತದೆ. ಈ ಮೀಸಲಾತಿಯನ್ನು ಸಾಮುದಾಯಿಕವಾಗಿ ನೀಡಲಾಗುತ್ತಿದೆ. ಈಗ ವ್ಯಕ್ತಿ/ಕುಟುಂಬ ಸಂಬಂಧಿ ಮೀಸಲಾತಿಯನ್ನು ನೀಡುವುದು ಆಚರಣೆಯಲ್ಲಿರುವ ಕ್ರಮಗಳನ್ನು ಮೀರುವಂತಹದ್ದಾಗುತ್ತದೆ. ಮೀಸಲಾತಿಯು ವ್ಯಕ್ತಿಗತ ಅಸಮಾನತೆ ನಿವಾರಣೆ ಕ್ರಮವಲ್ಲ. ಇದು ಸಾಮಾಜಿಕ ಅಸಮಾನತೆಯ ವಿರುದ್ಧದ ಅಸ್ತ್ರವಾಗಿದೆ. ಆರ್ಥಿಕ ಸ್ಥಿತಿಗತಿಯು ಸಾಮಾಜಿಕ ಸ್ಥಿತಿಗತಿಯಂತೆ ಸ್ಥಿರವಾದ/ಸ್ಥಿತ್ಯಂತರಕ್ಕೆ ಒಳಗಾಗದ ಸಂಗತಿಯಲ್ಲ. ಹಾಗಾದರೆ ಈ ಸೌಲಭ್ಯವನ್ನು ಪಡೆಯುವುದಕ್ಕೆ ನಿಗದಿಪಡಿಸಿರುವ ವರಮಾನ ಮಾನದಂಡಕ್ಕೆ ಸಂಬಂಧಿಸಿದಂತೆ ಫಲಾನುಭವಿಗಳ ಯಾವ ವರ್ಷದ ವರಮಾನವನ್ನು ಆಧಾರವಾಗಿ ತೆಗೆದುಕೊಳ್ಳಲಾಗುತ್ತದೆ ಎಂಬ ಪ್ರಶ್ನೆ ನಮ್ಮ ಮುಂದಿದೆ.

'ಹಿಂದುಳಿದ ಮತ್ತು ಮೇಲುಜಾತಿ' ಎನ್ನುವ ಪದಪುಂಜವೇ ಅಸಂಬದ್ಧವಾಗಿ ಕಾಣುತ್ತದೆ. ಜಾತಿ ಶ್ರೇಣಿಯಲ್ಲಿ ಇವರೆಲ್ಲ ಮುಂದುವರಿದಿದ್ದಾರೆ. ಆದರೆ ಇವರಲ್ಲಿ ಆರ್ಥಿಕವಾಗಿ (ವರ್ಗ ಸಂಬಂಧದ ದೃಷ್ಟಿಯಿಂದ) ದುರ್ಬಲರಾಗಿರುವ ಜನರಿದ್ದಾರೆ ಎಂದು ಹೇಳಲಾಗುತ್ತಿದೆ. ಈ ವರ್ಗವನ್ನು ಮತ್ತು 'ಹಿಂದುಳಿದ ಮತ್ತು ಕೆಳಜಾತಿ' ಸಮುದಾಯಗಳನ್ನು ಮೀಸಲಾತಿಯ ದೃಷ್ಟಿಯಿಂದ ಸಮಾನವಾದ ನೆಲೆಯಲ್ಲಿ ಪರಿಭಾವಿಸಿಕೊಳ್ಳುವುದು ಸೈದ್ಧಾಂತಿಕವಾಗಿ ಸರಿಯಲ್ಲ. ಜಾತಿ ಮತ್ತು ವರ್ಗದ ನೆಲೆಗಳೆರಡರಲ್ಲಿಯೂ ದುಸ್ಥಿತಿಯನ್ನು ಅನುಭವಿಸುತ್ತಿರುವವರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿಯನ್ನು ಸಂವಿಧಾನಾತ್ಮಕವಾಗಿ [ಪರಿಚ್ಛೇದ 15(4) ಮತ್ತು ಪರಿಚ್ಛೇದ 16(4)] ನೀಡಲಾಗಿದೆ. ಈ ಸೌಲಭ್ಯವನ್ನು ಪಡೆಯುತ್ತಿರುವ ಪರಿಶಿಷ್ಟ ಜಾತಿ (ಪ.ಜಾ – ಶೇ.15), ಪರಿಶಿಷ್ಟ ಪಂಗಡ (ಪ.ಪಂ. – ಶೇ.7.5) ಮತ್ತು ಒಬಿಸಿ(ಶೇ.27) ಸಮುದಾಯಗಳು ಸಂವಿಧಾನಾತ್ಮಕ ಪರಿಭಾಷೆಯಲ್ಲಿ ಸಾಮಾಜಿಕವಾಗಿ ಹಿಂದುಳಿದವರಾಗಿದ್ದಾರೆ.

ಆದರೆ ಪ್ರಸ್ತುತ ಸರ್ಕಾರವೇನು ಶೇ.10ರಷ್ಟು ಮೀಸಲಾತಿಯನ್ನು ಆರ್ಥಿಕವಾಗಿ ಹಿಂದುಳಿದ ಮೇಲುಜಾತಿಗಳಿಗೆ ನೀಡುವುದಕ್ಕೆ ಕ್ರಮವನ್ನು ತೆಗೆದುಕೊಂಡಿದೆಯೋ ಅವರು ಸಂವಿಧಾನಾತ್ಮಕ ಸಾಮಾಜಿಕ ಹಿಂದುಳಿದ ಪರಿಭಾಷೆಯ ಚೌಕಟ್ಟಿಗೆ ಸೇರುವುದಿಲ್ಲ. ಸಂವಿಧಾನವು ಸಾಮಾಜಿಕ ಹಿಂದುಳಿದಿರುವಿಕೆಯನ್ನು ಮಾತ್ರ ಮನ್ನಿಸಿದೆಯೇ ವಿನಾ ಆರ್ಥಿಕ ಹಿಂದುಳಿದಿರುವಿಕೆಯನ್ನಲ್ಲ. ಮೇಲಾಗಿ ಆರ್ಥಿಕ ಹಿಂದುಳಿದಿರುವಿಕೆ/ಮುಂದುವರಿದಿರುವಿಕೆ ಎಂಬುದು ಸಂದರ್ಭ ಸ್ಪಂದಿಯಾದ ಸಂಗತಿಯಾಗಿದೆ. ಒಂದು ಸಂದರ್ಭದಲ್ಲಿ ಆರ್ಥಿಕವಾಗಿ ಮುಂದುವರಿದ ಸ್ಥಿತಿಯಲ್ಲಿರುವ ವ್ಯಕ್ತಿ/ಕುಟುಂಬ ಮತ್ತೊಂದು ಸಂದರ್ಭದಲ್ಲಿ ಆರ್ಥಿಕವಾಗಿ ದುಸ್ಥಿತಿ ಅನುಭವಿಸುತ್ತಿರಬಹುದು. ಉದಾ. ಉತ್ತಮ ಮಳೆ ಬೆಳೆಯಿದ್ದಾಗ ರೈತರ ಸ್ಥಿತಿಯು ಸಮೃದ್ಧವಾಗಿರುತ್ತದೆ. ಅವರ ವಾರ್ಷಿಕ ವರಮಾನ ಸಂಬಂಧಿಸಿದ ವರ್ಷದಲ್ಲಿ ರೂ. 8 ಲಕ್ಷ ಮೀರಿರಬಹುದು. ಆದರೆ ಮಳೆ–ಬೆಳೆ ವಿಫಲವಾದಾಗ ರೈತರ ಸ್ಥಿತಿಯು ಕುಸಿಯುತ್ತದೆ. ಈಗ ವರಮಾನ ರೂ. 8 ಲಕ್ಷಕ್ಕಿಂತ ಕಡಿಮೆಯಾಗಬಹುದು. ಮೇಲುಜಾತಿಯ ಜನರು ದುಸ್ಥಿತಿಯಲ್ಲಿದ್ದಾಗ ಅವರಿಗೆ ಮೀಸಲಾತಿ ನೀಡಿ ಅವರ ಸ್ಥಿತಿಯು ಸಮೃದ್ಧವಾದಾಗ ಮೀಸಲಾತಿಯನ್ನು ವಾಪಸ್ಸು ಪಡೆಯಬಹುದೇ? ಆರ್ಥಿಕವಾಗಿ ಹಿಂದುಳಿದ ಮೇಲು ಜಾತಿಗಳಿಗೆ ಮೀಸಲಾತಿ ನೀಡುವುದಕ್ಕೆ ಸಂಬಂಧಿಸಿದಂತೆ ಇಂತಹ ಅನೇಕ ಸಮಸ್ಯೆಗಳಿವೆ.

ಆರ್ಥಿಕ ಸ್ಥಿತಿಗತಿಯು ಸಾಮಾಜಿಕ ಸ್ಥಿತಿಗತಿಯಂತೆ ಸ್ಥಿರವಾದ/ಸ್ಥಿತ್ಯಂತರಕ್ಕೆ ಒಳಗಾಗದ ಸಂಗತಿಯಲ್ಲ. ಹಾಗಾದರೆ ಈ ಸೌಲಭ್ಯವನ್ನು ಪಡೆಯುವುದಕ್ಕೆ ನಿಗದಿಪಡಿಸಿರುವ ವರಮಾನ ಮಾನದಂಡಕ್ಕೆ ಸಂಬಂಧಿಸಿದಂತೆ ಫಲಾನುಭವಿಗಳ ಯಾವ ವರ್ಷದ ವರಮಾನವನ್ನು ಆಧಾರವಾಗಿ ತೆಗೆದುಕೊಳ್ಳಲಾಗುತ್ತದೆ ಎಂಬ ಪ್ರಶ್ನೆ ನಮ್ಮ ಮುಂದಿದೆ. ಚಾಲ್ತಿ ವರ್ಷದ ವರಮಾನವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆಯೋ ಅಥವಾ ಹಿಂದಿನ ಹತ್ತು ವರ್ಷಗಳ ಸರಾಸರಿ ವರಮಾನವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆಯೋ ಎಂಬ ಪ್ರಶ್ನೆಯಿದೆ.

ಈಗ ಸಂವಿಧಾನಾತ್ಮಕವಾಗಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಹಾಗೂ ಜನತಾಂತ್ರಿಕ ಸಂಸ್ಥೆಗಳಲ್ಲಿ ಸ್ಥಾನವನ್ನು ಮೀಸಲಿಡುವ ಕ್ರಮವೇನು ಜಾರಿಯಲ್ಲಿದೆಯೋ ಆ ಸಮುದಾಯಗಳಲ್ಲಿ ಆರ್ಥಿಕ ಬಂಡವಾಳದ ಕೊರತೆಯ ಜೊತೆಯಲ್ಲಿ ಸಾಮಾಜಿಕ ಬಂಡವಾಳದ ಗೈರುಹಾಜರಿಯನ್ನು ಕಾಣುತ್ತೇವೆ. ಆದರೆ ಆರ್ಥಿಕವಾಗಿ ಹಿಂದುಳಿದ ಮೇಲುಜಾತಿಗಳಲ್ಲಿ ಆರ್ಥಿಕ ಬಂಡವಾಳ ಕೊರತೆಯಿರಬಹುದು. ಆದರೆ ಅಲ್ಲಿ ಸಾಮಾಜಿಕ ಬಂಡವಾಳ ಸಮೃದ್ಧವಾಗಿದೆ. 'ಮೇಲುಜಾತಿ' ಎನ್ನುವುದು ಒಂದು ಸಾಮಾಜಿಕ ಬಂಡವಾಳದ ಸಂಗತಿಯಾಗಿದೆ. ಅನೂಚಾನವಾಗಿ ಪಡೆದುಕೊಂಡು ಬರುತ್ತಿರುವ ಉನ್ನತ ಅಕ್ಷರ ಸಂಪತ್ತು ಮತ್ತೊಂದು ಸಾಮಾಜಿಕ ಬಂಡವಾಳದ ಸಂಗತಿಯಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಆರ್ಥಿಕ ಹಿಂದುಳಿದಿರುವಿಕೆಯು ವ್ಯಕ್ತಿಗತ/ಕುಟುಂಬ ಸಂಬಂಧಿಯಾದುದಾದರೆ ಸಾಮಾಜಿಕ ಹಿಂದುಳಿದಿರುವಿಕೆಯು ಸಾಮುದಾಯಿಕವಾದುದು. ಉದಾಹರಣೆಗೆ ಅಸ್ಪೃಶ್ಯತೆಯು ವ್ಯಕ್ತಿ/ಕುಟುಂಬ ಸಂಬಂಧಿ ಸಂಗತಿಯಲ್ಲ. ಅದು ಸಮುದಾಯಕ್ಕೆ ಸಂಬಂಧಿಸಿದ ಕಳಂಕ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸರ್ಕಾರವು ಜಾರಿಗೆ ತರುತ್ತಿರುವ ಆರ್ಥಿಕ ದುರ್ಬಲ ವರ್ಗಕ್ಕೆ ಶೇ.10 ರಷ್ಟು ಮೀಸಲಾತಿ ನೀಡುವ ಕ್ರಮವನ್ನು ಪರಿಗಣಿಸಬೇಕಾಗುತ್ತದೆ. ನಮ್ಮ ಸಂವಿಧಾನದಲ್ಲಿ ಪ.ಜಾ, ಪ.ಪಂ. ಮತ್ತು ಒಬಿಸಿ ಸಮುದಾಯಗಳಿಗೆ ನೀಡುತ್ತಿರುವ ಮೀಸಲಾತಿಯು ಸಾಮಾಜಿಕ ನ್ಯಾಯದ ಸಂಗತಿಯೇ ವಿನಾ ಬಡತನ ನಿವಾರಣೆಯ ಸಂಗತಿಯಲ್ಲ. ಆರ್ಥಿಕವಾಗಿ ಹಿಂದುಳಿದ ಮೇಲುಜಾತಿಗಳಿಗೆ ನೀಡುತ್ತಿರುವ ಮೀಸಲಾತಿಯ ಮೂಲದಲ್ಲಿ ಬಡತನ ನಿವಾರಣೆಯ ಉದ್ದೇಶವಿದೆ. ನಮ್ಮ ಪ್ರಜಾತಾಂತ್ರಿಕ ಸಂಸ್ಥೆಗಳಲ್ಲಿ (ಸಂಸತ್ತು, ವಿಧಾನಸಭೆ, ಸ್ಥಳಿಯ ಸರ್ಕಾರಗಳು) ಪ್ರಾತಿನಿಧ್ಯವನ್ನು ಪಡೆಯಲು ಸಾಧ್ಯವಿಲ್ಲವೋ ಅಂತಹ ಪ.ಜಾ, ಪ.ಪಂ. ಮತ್ತು ಒಬಿಸಿ ಸಮುದಾಯಗಳಿಗೆ ಸ್ಥಾನಗಳ ಮೀಸಲಾತಿ ನೀಡಲಾಗಿದೆ. ಆದರೆ ಆರ್ಥಿಕವಾಗಿ ದುರ್ಬಲವಾದ ಮೇಲುಜಾತಿಗಳು ಪ್ರಜಾತಾಂತ್ರಿಕ ಸಂಸ್ಥೆಗಳಲ್ಲಿ ತಮ್ಮ ಜನಸಂಖ್ಯೆಯ ಪ್ರಮಾಣಕ್ಕಿಂತ ಹೆಚ್ಚಿನ ಪ್ರಾತಿನಿಧ್ಯ ಪಡೆದಿದ್ದಾವೆ. ಆದರೆ ಪ.ಜಾ ಮತ್ತು ಪ.ಪಂಗಳ ಸಂದರ್ಭದಲ್ಲಿ ಅವುಗಳಿಗೆ ಪ್ರಾತಿನಿಧ್ಯವನ್ನು ಸಂವಿಧಾನಾತ್ಮಕ ಮೀತಿ ಮೀರುವುದಾಗಿಲ್ಲ.


ಮೇಲುಜಾತಿಗಳಿಗೆ ಆರ್ಥಿಕ ಹಿಂದುಳಿದಿರುವಿಕೆಯನ್ನು ಆಧಾರ ಮಾಡಿಕೊಂಡು ಉದ್ಯೋಗದಲ್ಲಿ ಮತ್ತು ಶಿಕ್ಷಣದಲ್ಲಿ ಶೇ.10 ರಷ್ಟು ಮೀಸಲಾತಿ ನೀಡುವುದು ಸಾಂವಿಧಾನಿಕ ನೈತಿಕತೆ ಮತ್ತು ಸಾಮಾಜಿಕ ನ್ಯಾಯಗಳಿಗೆ ಸಂಬಂಧಿಸಿದ ಸೂತ್ರಗಳ ಉಲ್ಲಂಘನೆಯಾಗುತ್ತದೆ. ಯಾವ ಸಮುದಾಯಗಳಿಗೆ ಘನತೆಯಿಂದ ಬದುಕಲು ಅವಕಾಶವಿರಲಿಲ್ಲವೋ ಅವುಗಳಿಗೆ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರು ಸಂವಿಧಾನಾತ್ಮಕವಾಗಿ ನೀಡಿದ ಸಾಮಾಜಿಕ ನ್ಯಾಯದ ಒಂದು ಕೊಡುಗೆ ಮೀಸಲಾತಿ. ಆದರೆ ಈಗ ಆರ್ಥಿಕವಾಗಿ ಹಿಂದುಳಿದಿರುವ ಮೇಲುಜಾತಿಗಳಿಗೆ ನೀಡುತ್ತಿರುವ ಮೀಸಲಾತಿಗೆ ಕೇವಲ ರಾಜಕೀಯ ಅವಕಾಶವಾದಿತನವನ್ನು ಬಿಟ್ಟು ಬೇರಾವುದೇ ಸೈದ್ಧಾಂತಿಕ ನೆಲೆ ಎನ್ನುವುದಿಲ್ಲ. ಕೇಂದ್ರ ಸರ್ಕಾರವು ತರಾತುರಿಯಲ್ಲಿ ತೆಗೆದುಕೊಳ್ಳುತ್ತಿರುವ ಕ್ರಮ ಕೇವಲ ರಾಜಕೀಯ ಅವಕಾಶವಾದಿತನ ಮಾತ್ರವಲ್ಲ. ಇದು ಒಂದು ಚುನಾವಣಾ (ಕು)ತಂತ್ರವೂ ಆಗಿದೆ. ಮುಂದಿನ ಎರಡು ಮೂರು ತಿಂಗಳಲ್ಲಿ ಬರುವ ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಶೇ.10 ರಷ್ಟು ಮೀಸಲಾತಿಯನ್ನು ಮೇಲುಜಾತಿಗಳಿಗೆ ನೀಡುವುದಕ್ಕೆ ಸರ್ಕಾರ ಮುಂದಾಗಿದೆ. ಡಾ. ಬಿ. ಆರ್. ಅಂಬೇಡ್ಕರ್ ಅವರು ಸೈದ್ಧಾಂತಿಕವಾಗಿ ಸಕಾರಾತ್ಮಕ ತಾರತಮ್ಯ (ಅಫರ್‌ಮೇಟಿವ್ ಡಿಸ್ಕ್ರಿಮಿನೇಶನ್) ಕ್ರಮದಲ್ಲಿ ಸಂವಿಧಾನದಲ್ಲಿ ಪ.ಜಾ, ಮತ್ತು ಪ.ಪಂ.ಗಳಿಗೆ ಮೀಸಲಾತಿ ನೀಡುವ ಅವಕಾಶ ಒದಗಿಸಿದ್ದಕ್ಕೆ ರಾಜಕೀಯ ಅವಕಾಶವಾದಿತನ ಅಥವಾ ಚುನಾವಣಾ ತಂತ್ರವೆನ್ನುವುದೇನಿರಲಿಲ್ಲ. ಇದೊಂದು ಕ್ರಾಂತಿಕಾರಕ ಸಿವಿಲೈಸೇಶನಲ್ ಕ್ರಮವಾಗಿದೆ. ಪ್ರಸ್ತುತ ಸರ್ಕಾರವು ಆರ್ಥಿಕವಾಗಿ ದುರ್ಬಲ ಮೇಲುಜಾತಿಗಳಿಗೆ ಶೇ.10 ರಷ್ಟು ಮೀಸಲಾತಿಯನ್ನು ನೀಡುವ ಉದ್ದೇಶಕ್ಕಾಗಿ ಸಂವಿಧಾನವನ್ನೇ ಬದಲಾಯಿಸಲಾಗಿದೆ(ಸಂವಿಧಾನದ 124ನೆಯ ತಿದ್ದುಪಡಿ). ಅನೇಕರು ವಾದಿಸುತ್ತಿರುವಂತೆ ಇದು ಸರ್ವೋಚ್ಚ ನ್ಯಾಯಾಲಯದ ಸಂವಿಧಾನಾತ್ಮಕ ಪರಿಶೀಲನೆಯಲ್ಲಿ ಗೆದ್ದು ಬರುವುದು ಅನುಮಾನ. ಇದಕ್ಕಿಂತ ಮುಖ್ಯವಾಗಿ ಈಗಾಗಲೆ ಹೇಳಿರುವಂತೆ ಮೇಲುಜಾತಿಗಳಿಗೆ ಜನತಾಂತ್ರಿಕ ಸಂಸ್ಥೆಗಳಲ್ಲಿ ಪ್ರಾತಿನಿಧ್ಯದ ಕೊರತೆಯ ಸಮಸ್ಯೆಯಿಲ್ಲ. ಒಂದು ವೇಳೆ ಪ್ರಾತಿನಿಧ್ಯಕ್ಕೆ ಮೀಸಲಾತಿ ನೀಡಿರದಿದ್ದರೆ ಪ.ಜಾ. ಮತ್ತು ಪ.ಪಂ.ಗಳಿಗೆ ಸಂಸತ್ತಿನಲ್ಲಿ ಮತ್ತು ವಿಧಾನಸಭೆಗಳಲ್ಲಿ ಸ್ಥಾನವೇ ದೊರೆಯುತ್ತಿರಲಿಲ್ಲ.

ಸರ್ಕಾರವು ಜಾರಿಗೊಳಿಸುತ್ತಿರುವ ಮೇಲುಜಾತಿಗೆ ಶೇ.10 ರಷ್ಟು ಮೀಸಲಾತಿ ಮಸೂದೆಯಲ್ಲಿ ಮೇಲುಜಾತಿ ಎನ್ನುವ ಪದವನ್ನು ಪ್ರಜ್ಞಾಪೂರ್ವಕವಾಗಿ ಬಳಸಿಲ್ಲ. ಅಲ್ಲಿ ಆರ್ಥಿಕವಾಗಿ ದುರ್ಬಲ ಗುಂಪು (ಎಕನಾಮಿಕಲಿ ವೀಕರ್ ಸೆಕ್ಷನ್) ಎನ್ನುವ ಪದವನ್ನು ಬಳಸಲಾಗಿದೆ. ಅಂದರೆ ಸರ್ಕಾರಕ್ಕೆ ತಾನು ಜಾರಿಗೊಳಿಸುತ್ತಿರುವ ಕ್ರಮದ ಮೂಲದಲ್ಲಿ ಆರ್ಥಿಕ ಸಂಗತಿಯಿದೆಯೇ ವಿನಾ ಜಾತಿ ಸಂಗತಿಯಲ್ಲ ಎಂಬುದನ್ನು ಜಗಜ್ಜಾಹೀರು ಮಾಡುವ ಉದ್ದೇಶವಿದ್ದಂತೆ ಕಾಣುತ್ತದೆ. ಆದರೆ ಸೂಕ್ಷ್ಮವಾಗಿ ಸರ್ಕಾರದ ಕ್ರಮವನ್ನು ಪರಿಗಣಿಸಿದರೆ ಅದೊಂದು ಜಾತಿಮೂಲ ಕ್ರಮ, ಮತಬ್ಯಾಂಕಿನ ಕ್ರಮ ಎನ್ನುವುದು ಬಹಿರಂಗವಾಗುತ್ತದೆ.

ಈ ಶೇ.10 ರಷ್ಟು ಮೀಸಲಾತಿಗೆ ಅರ್ಹರಾರು ಎನ್ನುವುದಕ್ಕೆ ನಿಗದಿಪಡಿಸಿರುವ ವರಮಾನದ ಮಾನದಂಡದಲ್ಲಿಯೂ ಸಮಸ್ಯೆಯಿದೆ. ಈ ಕ್ರಮದ ಪ್ರಕಾರ ಯಾರ ವರಮಾನ ವಾರ್ಷಿಕ ರೂ. 8 ಲಕ್ಷಕ್ಕಿಂತ ಕಡಿಮೆಯಿರುತ್ತದೋ ಅವರು ಶೇ.10 ಮೀಸಲಾತಿ ಸೌಲಭ್ಯಕ್ಕೆ ಅರ್ಹರಾಗುತ್ತಾರೆ. ಯಾರ ದಿನದ ವರಮಾನ ರೂ.2222.22 ರಷ್ಟಿರುತ್ತದೋ ಅವರನ್ನು ಆರ್ಥಿಕವಾಗಿ ದುರ್ಬಲರು/ಬಡವರು ಎಂದು ಹೇಗೆ ಪರಿಗಣಿಸುವುದು? ಈಗಾಗಲೆ ಬಡತನದ ರೇಖೆ ಎಂಬ ಮಾನದಂಡ ಚಾಲ್ತಿಯಲ್ಲಿದೆ. ಅದನ್ನು ಬಿಟ್ಟು ಈಗ ಬೇರೊಂದು ಬಡತನದ ಪರಿಭಾವನೆಯನ್ನು ಹುಟ್ಟು ಹಾಕಲಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿನಿಯಮದಲ್ಲಿ ದಿನದ ಕೂಲಿ ರೂ 150 ರಿಂದ ರೂ.200ವರೆಗಿದೆ.

ಪ್ರಸ್ತುತ ಸರ್ಕಾರವು ತೆಗೆದುಕೊಂಡಿರುವ ಕ್ರಮವು ರಾಜಕೀಯ ಅವಕಾಶವಾದಿತನದ್ದು ಮತ್ತು ಚುನಾವಣಾ ತಂತ್ರ ಎಂದು ಕರೆಯುವುದಕ್ಕೆ ಮತ್ತೊಂದು ಕಾರಣವೂ ಇದೆ. ನಮ್ಮ ದೇಶದಲ್ಲಿ 1991ರಿಂದ ಜಾರಿಯಲ್ಲಿರುವ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ಪರಿಣಾಮವಾಗಿ ಸಾರ್ವಜನಿಕ ಉದ್ದಿಮೆಗಳು ನಗಣ್ಯವಾಗುತ್ತಾ ಖಾಸಗಿ ಉದ್ದಿಮೆಗಳು ಯಾಜಮಾನ್ಯ ಸ್ಥಾನ ಪಡೆದುಕೊಳ್ಳುತ್ತಿವೆ. ಸಾರ್ವಜನಿಕ ಕ್ಷೇತ್ರದಲ್ಲಿ ಉದ್ಯೋಗದ ಅವಕಾಶಗಳು ತೀವ್ರಗತಿಯಲ್ಲಿ ಕುಗ್ಗುತ್ತಿವೆ (ಕೇಂದ್ರ ಸರ್ಕಾರವು ಸಾರ್ವಜನಿಕ ಉದ್ದಿಮೆಯಾದ ಎಚ್‌ಎಎಲ್‌ಗೆ ಉತ್ಪಾದನಾ ಅವಕಾಶಗಳನ್ನು ನೀಡುವುದಕ್ಕೆ ಪ್ರತಿಯಾಗಿ ಖಾಸಗಿ ಅಂಬಾನಿ ಕಂಪನಿಗಳಿಗೆ ನೀಡುತ್ತಿದೆ). ಖಾಸಗಿ ಕ್ಷೇತ್ರದಲ್ಲಿ ಉದ್ಯೋಗಕ್ಕೆ ಸಂಬಂಧಿಸಿದಂತೆ ಮೀಸಲಾತಿಗೆ ಅವಕಾಶವಿಲ್ಲ. ಅಂದಮೇಲೆ ಮೀಸಲಾತಿ ಚೌಕಟ್ಟಿನಲ್ಲಿ

ಪುಟ 10 ಕ್ಕೆ



ಕೃಪೆ : ಮಂಜಲ್

ಕರಾಳ ಕಾನೂನುಗಳ ದುರುಪಯೋಗವನ್ನು ನಿಲ್ಲಿಸಲು
‘ದೇಶದ್ರೋಹ’ದ ಕಾಯ್ದೆ ರದ್ದಾಗಬೇಕು





ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಸಂಘದ (ಜೆಎನ್‌ಯುಎಸ್‌ಯು) ಹಿಂದಿನ ಅಧ್ಯಕ್ಷ ಕನ್ಹಯ್ಯಾ ಕುಮಾರ್ ಮತ್ತು ಇತರ ಒಂಬತ್ತು ಮಂದಿ ವಿರುದ್ಧ ದೆಹಲಿ ಪೋಲೀಸರು ನ್ಯಾಯಾಲಯಕ್ಕೆ ಆರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಿದ್ದಾರೆ. ಜೆಎನ್‌ಯು ಕ್ಯಾಂಪಸ್‌ನಲ್ಲಿ ಪ್ರತಿಭಟನೆಯೊಂದರ ವೇಳೆ ದೇಶವಿರೋಧಿ ಘೋಷಣೆ ಕೂಗಿದ್ದಾರೆ ಎನ್ನಲಾದ ಕಟ್ಟುಕತೆಯ ಪ್ರಕರಣ ನಡೆದು ಸುಮಾರು ಮೂರು ವರ್ಷಗಳ ನಂತರ ಪೋಲೀಸರು ಈ ಕ್ರಮವನ್ನು ಕೈಗೊಂಡಿದ್ದಾರೆ.

ಬಿಜೆಪಿ ಸರಕಾರದ ಪ್ರತೀಕಾರದ ಧೋರಣೆಯಿಂದಾಗಿ ಬ್ರಿಟಿಷ್ ವಸಾಹತುಶಾಹಿ ಆಳರಸರು ಮಾಡಿದ ಕಾನೂನಾದ ‘ರಾಜದ್ರೋಹ’ದ ಆರೋಪವನ್ನು(ಭಾರತೀಯ ದಂಡ ಸಂಹಿತೆ ಅಥವ ಐಪಿಸಿ 124ಎ ಸೆಕ್ಷನ್) ಪೋಲೀಸರು ಬಳಸಿದ್ದಾರೆ. ಈ ಇದನ್ನು ಸ್ವಾತಂತ್ರ್ಯ ಹೋರಾಟದ ನಾಯಕರ ವಿರುದ್ಧ ವಸಾಹತುಶಾಹಿಗಳು ಒಂದು ಅಸ್ತ್ರವಾಗಿ ಬಳಸುತ್ತಿದ್ದರು. ಇಂಥದ್ದೊಂದು ಕಲಮು ದಂಡ ಸಂಹಿತೆಯಲ್ಲಿ ಸ್ವಾತಂತ್ರ್ಯ ಬಂದ ಬಳಿಕವೂ ಮುಂದುವರಿದಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ತಮ್ಮ ವರ್ಗ ಹಿತಾಸಕ್ತಿಗಳ ರಕ್ಷಣೆಗಾಗಿ ಅಂದಿನ ಕಾಂಗ್ರೆಸ್ ನಾಯಕರು ಅದನ್ನು ಮುಂದುವರಿಸಲು ನಿರ್ಧರಿಸಿದ್ದೇ ಇದಕ್ಕೆ ಕಾರಣ.

ಸ್ವಾತಂತ್ರ್ಯ ಹೋರಾಟದ ನಾಯಕರ ವಿರುದ್ಧ ವಸಾಹತುಶಾಹಿಗಳು ಒಂದು ಅಸ್ತ್ರವಾಗಿ ಬಳಸುತ್ತಿದ್ದರು. ಇಂಥದ್ದೊಂದು ಕಲಮು ದಂಡ ಸಂಹಿತೆಯಲ್ಲಿ ಸ್ವಾತಂತ್ರ್ಯ ಬಂದ ಬಳಿಕವೂ ಮುಂದುವರಿದಿರುವುದು ನಾಚಿಕೆಗೇಡಿನ ಸಂಗತಿ. ತಮ್ಮ ವರ್ಗ ಹಿತಾಸಕ್ತಿಗಳ ರಕ್ಷಣೆಗಾಗಿ ಇದು ಉಳಿದುಕೊಂಡಿದೆ. ಕಾನೂನು ಪುಸ್ತಕದಲ್ಲಿ ಇದು ಇರುವವರೆಗೂ, ಸುಪ್ರೀಂ ಕೋರ್ಟ್‌ನ ನಿರ್ದೇಶನಗಳ ಹೊರತಾಗಿಯೂ, ಅಧಿಕಾರದಲ್ಲಿರುವವರು ಅದರ ದುರುಪಯೋಗವನ್ನು ಮಾಡಿಯೇ ತೀರುತ್ತಾರೆ. ಹಾಗಾಗಿ, ಐಪಿಸಿಯಿಂದ ಇದನ್ನು ರದ್ದು ಮಾಡುವುದು ಅತ್ಯಗತ್ಯವಾಗಿದೆ. ಇದು ಅಸಮ್ಮತಿಯನ್ನು ಮತ್ತು ರಾಜಕೀಯ ವಿರೋಧವನ್ನು ದಮನಿಸಲು ಕರಾಳ ಕಾನೂನುಗಳನ್ನು ದುರುಪಯೋಗ ಪಡಿಸಿಕೊಳ್ಳುವುದನ್ನು ನಿಲ್ಲಿಸುವಲ್ಲಿ ಮೊದಲ ಹೆಜ್ಜೆಯಾಗಿದೆ. *


ಪ್ರಕಾಶ್ ಕಾರಟ್



ರಾಜಕೀಯ ವಿರೋಧಿಗಳು ಮತ್ತು ಜನಪರ ಹೋರಾಟಗಳಲ್ಲಿ ತೊಡಗಿರುವವರನ್ನು ಗುರಿಯಾಗಿಸಿಕೊಂಡು ಪೋಲೀಸ್ ಮತ್ತು ವಿವಿಧ ಸರಕಾರಗಳು ದೇಶದ್ರೋಹದ ಈ ಕಲಮನ್ನು ಬೇಕಾಬಿಟ್ಟಿಯಾಗಿ ಬಳಸಿಕೊಳ್ಳುತ್ತಾ ಬಂದಿವೆ. ಬಿಜೆಪಿ ಅಧಿಕಾರದಲ್ಲಿರುವ ಅಸ್ಸಾಮ್‌ನಲ್ಲಿ ಕೇವಲ ಒಂದು ವಾರದ ಹಿಂದೆಯಷ್ಟೆ, ಒಬ್ಬ ಪ್ರಮುಖ ಬುದ್ಧಿಜೀವಿ ಹಿರೇನ್ ಗೊಹೈನ್, ರಾಜಕೀಯ ಕಾರ್ಯಕರ್ತ ಅಖಿಲ್ ಗೊಗೊಯ್ ಮತ್ತು ಪತ್ರಕರ್ತ ಮಂಜಿತ್ ಮಹಾಂತ ಅವರ ವಿರುದ್ಧ ಪೋಲೀಸರು ದೇಶದ್ರೋಹದ ಪ್ರಕರಣವನ್ನು ದಾಖಲಿಸಿದ್ದಾರೆ. ಸಂಸತ್ತಿನಲ್ಲಿ ಪೌರತ್ವ (ತಿದ್ದುಪಡಿ) ಮಸೂದೆಯನ್ನು ಮಂಡಿಸುವುದರ ವಿರುದ್ಧವಾಗಿ ಸಾರ್ವಜನಿಕ ಭಾಷಣಗಳನ್ನು ಮಾಡಿದ್ದೇ ಈ ಮೂವರು ಮಾಡಿದ ಅಪರಾಧವಾಗಿದೆ.

ಹಿರೇನ್ ಗೋಹೇನ್– ತೇಲ್ತುಂಬ್ಡೆ





ದೇಶದ್ರೋಹದ ಕಲಮು, ಅಂದರೆ ಸೆಕ್ಷನ್ 124ಎ ತುಂಬಾ ಕರಾಳವಾದುದಾಗಿದೆ. “ಕಾನೂನಿನ ಮೂಲಕ ಸ್ಥಾಪನೆಯಾಗಿರುವ ಸರಕಾರದ ವಿರುದ್ಧ ದ್ವೇಷವನ್ನು ಅಥವಾ ತಿರಸ್ಕಾರವನ್ನು ಉಂಟುಮಾಡುವುದು ಅಥವ ಉಂಟುಮಾಡುವ ಪ್ರಯತ್ನಗಳು, ಅಥವಾ ಅಸಂತುಷ್ಟಿಯನ್ನು ಪ್ರಚೋದಿಸುವುದು, ಅಥವ ಪ್ರಚೋದಿಸಲು ಪ್ರಯತ್ನಿಸುವುದು” ದೇಶದ್ರೋಹದ ಕೃತ್ಯ ಎಂದು ಇದು ನಿರೂಪಿಸುತ್ತದೆ. ಮೋದಿ ಆಡಳಿತದಡಿಯಲ್ಲಿ, ಯಾರೇ ಆದರೂ ಸರಕಾರವನ್ನು ವಿರೋಧಿಸುವುದನ್ನು ಅಥವಾ ಪ್ರಧಾನಿಯನ್ನು ಟೀಕಿಸುವುದನ್ನು ದೇಶ–ವಿರೋಧಿ ಎಂದು ಪರಿಗಣಿಸಲಾಗುತ್ತದೆ, ಹೀಗಾಗಿ ಅವರು ದೇಶದ್ರೋಹಕ್ಕಾಗಿ ಶಿಕ್ಷಾರ್ಹರಾಗುತ್ತಾರೆ.

1962ರ ಕೇದಾರನಾಥ ಸಿಂಗ್ ಪ್ರಕರಣದಲ್ಲಿ ಈ ಕಲಮನ್ನು ಸುಪ್ರೀಂ ಕೋರ್ಟ್ ಸೀಮಿತಗೊಳಿಸಿ ಹಿಂಸಾಚಾರ ಅಥವಾ ಹಿಂಸಾಚಾರಕ್ಕೆ ಸುವ್ಯಕ್ತ ಪ್ರಚೋದನೆ ನೀಡಿದ್ದಲ್ಲಿ ಮಾತ್ರವೇ ಇದು ಅನ್ವಯವಾಗುತ್ತದೆ ಎಂದು ನಿರ್ದಿಷ್ಟವಾಗಿ ಹೇಳಿದ್ದರೂ, ದಂಡ ಸಂಹಿತೆಯಲ್ಲಿನ ಈ ದೇಶದ್ರೋಹದ ಕಲಮನ್ನು ಈಗಲೂ ಬೇಕಾಬಿಟ್ಟಿಯಾಗಿ ಬಳಸಲಾಗುತ್ತಿದೆ. ಸ್ವಲ್ಪ ಸಮಯದ ಹಿಂದೆ ಚಿತ್ರಮಂದಿರವೊಂದರಲ್ಲಿ ರಾಷ್ಟ್ರಗೀತೆ ನುಡಿಸುವಾಗ ಎದ್ದು ನಿಲ್ಲಲಿಲ್ಲ ಎಂದು ಹೇಳಿ ಕೆಲವು ಜನರನ್ನು ಬಂಧಿಸಿ ಅವರ ವಿರುದ್ಧ ದೇಶದ್ರೋಹದ ಆರೋಪವನ್ನು ಹೊರಿಸಲಾಯಿತು.

ದೇಶದ್ರೋಹ ಸಂಬಂಧಿತ ಈ 124ಎ ಸೆಕ್ಷನ್ ಕಾನೂನು ಪುಸ್ತಕದಲ್ಲಿ ಇರುವವರೆಗೂ, ಸುಪ್ರೀಂ ಕೋರ್ಟ್‌ನ ನಿರ್ದೇಶನಗಳ ಹೊರತಾಗಿಯೂ, ಅಧಿಕಾರದಲ್ಲಿರುವವರು ಅದರ ದುರುಪಯೋಗವನ್ನು ಮಾಡಿಯೇ ತೀರುತ್ತಾರೆ. ಹಾಗಾಗಿ, ಐಪಿಸಿಯಿಂದ ದೇಶದ್ರೋಹ ಕುರಿತ ಈ ಸೆಕ್ಷನ್‌ಅನ್ನು ತೆಗೆದುಹಾಕುವುದು ಅತ್ಯಗತ್ಯವಾಗಿದೆ.

ಅದೇ ರೀತಿ ರಾಷ್ಟ್ರೀಯ ಭದ್ರತಾ ಕಾನೂನು (ಎನ್‌ಎಸ್‌ಎ) ಮತ್ತು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾನೂನು (ಯುಎಪಿಎ) ಮುಂತಾದ ಮುನ್ನೆಚ್ಚರಿಕೆ ಕ್ರಮವಾಗಿ ಬಂಧಿಸಲು ಅವಕಾಶ ನೀಡುವ ಹಾಗೂ ಜಾಮೀನು ಸಿಗದಂಥ ಕಾನೂನುಗಳನ್ನು ಕೂಡ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ಇತ್ತೀಚೆಗೆ ಉತ್ತರ ಪ್ರದೇಶದ ಬುಲಂದ್‌ಷಹರ್‌ನಲ್ಲಿ ಗೋಹತ್ಯೆ ಪ್ರಕರಣವೊಂದರ ಮೂವರು ಆರೋಪಿಗಳನ್ನು ಎನ್‌ಎಸ್‌ಎ ಅಡಿ ಬಂಧಿಸಲಾಯಿತು. ಅದೇ ಹೊತ್ತಿಗೆ, ಅದೇ ಪ್ರಕರಣದಲ್ಲಿ ಪೋಲೀಸ್ ಅಧಿಕಾರಿ ಸುಬೋಧ್ ಸಿಂಗ್‌ರನ್ನು ಹತ್ಯೆ ಮಾಡಿದ ಆರೋಪಿಗಳ ವಿರುದ್ಧ ಎನ್‌ಎಸ್‌ಎ ಅನ್ವಯ ಕ್ರಮ ಕೈಗೊಂಡಿಲ್ಲ. ತಥಾಕಥಿತ ಎಲ್ಗಾರ್ ಪರಿಷತ್ ಪಿತೂರಿ ಪ್ರಕರಣದಲ್ಲಿ ಬಂಧಿತರಾದ ಎಂಟು ನಾಗರಿಕ ಹಕ್ಕುಗಳ ಕಾರ್ಯಕರ್ತರು ಇನ್ನೂ ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಅವರನ್ನು ಯುಎಪಿಎ ನಿಯಮಗಳನ್ವಯ ಬಂಧಿಸಿರುವುದೇ ಇದಕ್ಕೆ ಕಾರಣ.

ಅಸಮ್ಮತಿಯನ್ನು ಮತ್ತು ರಾಜಕೀಯ ವಿರೋಧವನ್ನು ದಮನಿಸಲು ಕರಾಳ ಕಾನೂನುಗಳನ್ನು ದುರುಪಯೋಗಪಡಿಸಿಕೊಳ್ಳುವುದು ನಿಲ್ಲಬೇಕು. ದೇಶದ್ರೋಹದ ಕಲಮನ್ನು ರದ್ದು ಮಾಡುವುದು ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿದೆ.

ಅನು: ವಿಶ್ವ

ಅಸಮ್ಮತಿ ವ್ಯಕ್ತಪಡಿಸುವವರ ಬೇಟೆಯನ್ನು ನಿಲ್ಲಿಸಿ –ಸಿಪಿಐ(ಎಂ) ಪೊಲಿಟ್‌ಬ್ಯುರೊ

ದಲಿತರು ಮತ್ತು ಇನ್ನಿತರ ದಮನಿತ ಸಮುದಾಯಗಳ ಚಳುವಳಿಗಳನ್ನು ಬೆಂಬಲಿಸುವ ಬುದ್ಧಿಜೀವಿಗಳು ಮತ್ತು ಸಕ್ರಿಯ ಕಾರ್ಯಕರ್ತರ ಮೇಲೆ ದುಷ್ಟರೀತಿಯಲ್ಲಿ ಗುರಿಯಿಡುವ ಮೋದಿ ಸರಕಾರ ಮತ್ತು ರಾಜ್ಯಗಳ ಬಿಜೆಪಿ ಸರಕಾರಗಳ ಕೆಲಸ ತೀವ್ರಗೊಳ್ಳುತ್ತಿದೆ. **ಭೀಮ –ಕೋರೆಗಾಂವ್ ಕೇಸಿನಲ್ಲಿ ಹೆಸರಾಂತ ಬುದ್ಧಿಜೀವಿ ಆನಂದ ತೇಲ್ತುಂಬ್ಡೆ ಯವರೊಡನೇ ವರ್ತಿಸುತ್ತಿರುವ ರೀತಿ ಇದನ್ನು ದೃಢಪಡಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.** ತೇಲ್ತುಂಬ್ಡೆಯವರ ಮೇಲೆ ಈ ಕೇಸಿನಲ್ಲಿ ಸುಳ್ಳು ಆರೋಪ ಹೊರಿಸಲಾಗಿದೆ. ಆ ಘಟನೆಯ ಸ್ಥಳದಲ್ಲಿ ಅವರು ಇರಲೇ ಇಲ್ಲ. ಇವರು ಒಬ್ಬ ಹಿರಿಯ ಪ್ರಾಧ್ಯಾಪಕರು ಮತ್ತು ವಿಮರ್ಶಾತ್ಮಕ ಪ್ರಶಂಸೆ ಗಳಿಸಿರುವ ಹಲವು ಕೃತಿಗಳ ಲೇಖಕರೂ ಆಗಿದ್ದಾರೆ.


ಈ ಹಿಂದೆ ಈ ಸರಕಾರಗಳ ಧೋರಣೆಗಳನ್ನು/ಚಟುವಟಿಕೆಗಳನ್ನು ಟೀಕಿಸುವ ಮತ್ತು ಅಸಮ್ಮತಿಯ ದನಿಯೆತ್ತಿದವರ ಮೇಲೆ ‘ನಗರ ನಕ್ಸಲೀಯರು’ ಎಂಬ ಮಿಥ್ಯಾರೋಪದ ಹಣೆ ಪಟ್ಟಿ ಹಚ್ಚಿ ಇಂತಹ ದಾಳಿಗಳು ನಡೆದಿವೆ. ಅಸ್ಸಾಂನ ಗೌರವಾನ್ವಿತ ಹಿರಿಯ ಬುದ್ಧಿಜೀವಿ ಹಿರೇನ್ ಗೋಹೆನ್ ಮತ್ತಿತರರ ಮೇಲೆ ಅವರು ಪೌರತ್ವ ತಿದ್ದುಪಡಿ ಮಸೂದೆಯನ್ನು ವಿರೋಧಿಸಿದ್ದಕ್ಕಾಗಿ ರಾಷ್ಟ್ರದ್ರೋಹದ ಆರೋಪ ಹೊರಿಸಲಾಗಿದೆ. ಎಂದಿರುವ ಸಿಪಿಐ(ಎಂ) **ಪೊಲಿಟ್‌ಬ್ಯುರೊ ಸಾರ್ವಜನಿಕ ಬುದ್ಧಿಜೀವಿಗಳು ಮತ್ತು ಕಾರ್ಯಕರ್ತರಿಗೆ ಇಂತಹ ಕಿರುಕುಳ ಕೊಡುತ್ತಿರುವುದನ್ನು ಖಂಡಿಸಿದೆ, ಆನಂದ್ ತೇಲ್ತುಂಬ್ಡೆಯವರ ವಿರುದ್ಧ ಹಾಕಿರುವ ಸುಳ್ಳು ಕೇಸನ್ನು ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿದೆ.**

ಪ್ರತಿಭಟನೆಗಳಿಗೆ ಡಿಎಸ್‌ಎಂಎಂ ಕರೆ

ದಲಿತ ಶೋಷಣ ಮುಕ್ತಿ ಮಂಚ್(ಡಿಎಸ್‌ಎಂಎಂ) ಕೂಡ ಡಾ. ತೇಲ್ತುಂಬ್ಡೆಯವರ ಮೇಲೆ ಎಫ್‌ಐಆರ್ ಹಾಕಿರುವುದನ್ನು ಬಲವಾಗಿ ಖಂಡಿಸುತ್ತ ಈ ಜನಪ್ರಿಯ ಬುದ್ಧಿಜೀವಿ ಮತ್ತು ದಲಿತ ಹಕ್ಕುಗಳ ಕಾರ್ಯಕರ್ತರಲ್ಲದೆ ವರವರ ರಾವ್ ಮತ್ತಿತರರ ಮೇಲೂ ಭೀಮ–ಕೋರೆಗಾಂವ್ ಘಟನೆಯ ನೆಪದಲ್ಲಿ ಕೇಸುಗಳನ್ನು ಹಾಕಲಾಗಿದೆ ಎಂದು ನೆನಪಿಸಿದೆ. ವಾಸ್ತವವಾಗಿ ಈ ಘಟನೆಯಲ್ಲಿ ನೋವುಂಡವರು ದಲಿತರು, ಅವರ ಮೇಲೆ ಹಿಂಸಾಚಾರ ನಡೆಸಿದವರ ವಿರುದ್ಧ ಈ ಸರಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎನ್ನುತ್ತ ಇದರ ವಿರುದ್ಧ ಪ್ರತಿಭಟನೆ ನಡೆಸಿ ಡಾ. ತೇಲ್ತುಂಬ್ಡೆ ಮತ್ತಿತರ ಎಲ್ಲ ಬುದ್ಧಿಜೀವಿಗಳ ಮೇಲಿನ ಆಪಾದನೆಗಳನ್ನು ರದ್ದು ಮಾಡಬೇಕು ಎಂದು ಆಗ್ರಹಿಸಬೇಕೆಂದು ತನ್ನ ಘಟಕಗಳಿಗೆ ಕರೆ ನೀಡಿದೆ. ಎಲ್ಲ ಪ್ರಜಾಪ್ರಭುತ್ವಾದಿ ಶಕ್ತಿಗಳೂ ಪ್ರಧಾನ ಮಂತ್ರಿಗಳ ಕಚೇರಿಗೆ ಮತ್ತು ಮಹಾರಾಷ್ಟ್ರ ಸರಕಾರಕ್ಕೆ ಈ ಕುರಿತು ಅರ್ಜಿಗಳನ್ನು ಕಳಿಸಬೇಕು ಎಂದೂ ಅದು ಕರೆ ನೀಡಿದೆ.

ವ್ಯಂಗ್ಯಚಿತ್ರ: ಗೋಕುಲ್,
ಡೆಕ್ಕನ್ ಕ್ರಾನಿಕಲ್





ಕೃಪೆ: ಆರ್. ಪ್ರಸಾದ್



ಕೃಪೆ: ಕೇಶವ್, ದಿ ಹಿಂದೂ

ಶೇಕಡಾ ಹತ್ತು ಮೀಸಲಾತಿ: ಯಾರಿಗೆ ಪ್ರಯೋಜನ?

–ಪ್ರಕಾಶ್ ಕಾರಟ್

ಮೋದಿ ಸರ್ಕಾರವು ಸಾಮಾನ್ಯ ವರ್ಗದ ಆರ್ಥಿಕವಾಗಿ ದುರ್ಬಲವಾಗಿರುವ ವಿಭಾಗದವರಿಗೆ 10% ಮೀಸಲಾತಿ ನೀಡುವ ಒಂದು ಸಂವಿಧಾನ ತಿದ್ದುಪಡಿಗೆ ಸಂಸತ್ತಿನಲ್ಲಿ ಅಂಗೀಕಾರ ಪಡೆದಿದೆ. ಸಾಮಾನ್ಯ ವರ್ಗ ಅಂದರೆ ಪರಿಶಿಷ್ಟ ಜಾತಿ(ಎಸ್.ಸಿ), ಪರಿಶಿಷ್ಟ ಬುಡಕಟ್ಟು(ಎಸ್.ಟಿ) ಮತ್ತು ಇತರೆ ಹಿಂದುಳಿದ ವರ್ಗ(ಒಬಿಸಿ)ಗಳಲಲಿ ಇಲ್ಲದವರು.

ಹತಾಶೆಯ ವಾಸನೆ–ಚುನಾವಣಾ ತಂತ್ರ

ಆ ಸಂವಿಧಾನ ತಿದ್ದುಪಡಿ ಮಸೂದೆಯನ್ನು ತರಾತುರಿಯಲ್ಲಿ ಅಂಗೀಕರಿಸಲಾಯಿತು. ಕೇಂದ್ರ ಸಚಿವ ಸಂಪುಟದ ತೀರ್ಮಾನದಿಂದ ಹಿಡಿದು ಎರಡೂ ಸದನಗಳಲ್ಲಿ ಅಂಗೀಕಾರದ ತನಕ ಕೇವಲ ಮೂರು ದಿನಗಳ ಅವಧಿಯಲ್ಲಿ ಅದು ನಡೆದುಹೋಯಿತು. ನಿಸ್ಸಂಶಯವಾಗಿ, ಇನ್ನು ಕೇವಲ ಕೆಲವೇ ವಾರಗಳಷ್ಟು ದೂರವಿರುವ ಲೋಕಸಭಾ ಚುನಾವಣೆಯತ್ತ ಕಣ್ಣಿಟ್ಟುಕೊಂಡೇ ಅದನ್ನು ಮಾಡಲಾಗಿದೆ.

ಈ ನಡೆಯಲ್ಲಿ ಹತಾಶೆಯ ವಾಸನೆಯೂ ಬಡಿಯುತ್ತಿದೆ. ರಾಜಾಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢ ಈ ಮೂರು ರಾಜ್ಯಗಳಲ್ಲಿನ ಚುನಾವಣಾ ಸೋಲು ಸಹಜವಾಗಿಯೇ ಬಿಜೆಪಿಯನ್ನು ಎದೆಗುಂದಿಸಿದೆ ಮತ್ತು ಅದು ಕಳೆದುಕೊಂಡ ನೆಲೆಯನ್ನು ಹಿಂದಕ್ಕೆ ಪಡೆಯುವ ದಾರಿ ಹುಡುಕುತ್ತಿದೆ. ಆಳವಾಗುತ್ತಿರುವ ಕಾರ್ಷಿಕ ಬಿಕ್ಕಟ್ಟು ಮತ್ತು ಏರುತ್ತಿರುವ ನಿರುದ್ಯೋಗ ಹೆಚ್ಚಿನ ಸಂಖ್ಯೆಯ ಜಾತಿ ಗುಂಪುಗಳನ್ನು ಮೀಸಲಾತಿಗಾಗಿ ಒತ್ತಾಯಿಸುವಂತೆ ಮಾಡುತ್ತಿವೆ. ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಉದ್ಯೋಗದಲ್ಲಿ 10% ಮೀಸಲಾತಿಯನ್ನು ಹೊಸದಾಗಿ ಕಲ್ಪಿಸುವ ಮೂಲಕ ಮೋದಿ ಸರ್ಕಾರವು ಅವುಗಳನ್ನು ತುಷ್ಟೀಕರಿಸಬಹುದು ಎಂಬ ಆಶಾಭಾವನೆ ಹೊಂದಿದೆ.

ಸಾಮಾನ್ಯ ವರ್ಗದ ಬಡವರಿಗೆ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮೀಸಲಾತಿಯನ್ನು ನೀಡುವ ಪ್ರಶ್ನೆ ಹೊಸದೇನಲ್ಲ. ಒಬಿಸಿಯವರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವ ಮಂಡಲ್ ಆಯೋಗದ ಶಿಫಾರಸುಗಳನ್ನು 1990ರಲ್ಲಿ ವಿ.ಪಿ.ಸಿಂಗ್ ನೇತೃತ್ವದ ರಾಷ್ಟ್ರೀಯ ರಂಗ(ನ್ಯಾಷನಲ್ ಫ್ರಂಟ್)ವು ಜಾರಿ ಮಾಡಲು ತೀರ್ಮಾನ ಮಾಡಿದಾಗ ಆ ಪ್ರಶ್ನೆ ಮೇಲೆದ್ದಿತ್ತು. ಈ ತೀರ್ಮಾನವು ತೀವ್ರ ಒಡಕಿಗೆ ಮತ್ತು ಉಗ್ರ ಹೋರಾಟಕ್ಕೆ ಕಾರಣವಾಯಿತು. ಈ ಒಬಿಸಿಗಳಿಗೆ ಮೀಸಲಾತಿ ನೀಡುವುದರ ವಿರುದ್ಧ, ವಿಶೇಷವಾಗಿ ಉತ್ತರ ಭಾರತದ ಮೇಲ್ಜಾತಿ ಜನರ ವಿಷಕಾರಿ ಚಳುವಳಿ ನಡೆಯಿತು.

ಒಬಿಸಿಗಳು ಸಾಮಾಜಿಕವಾಗಿ ತಾರತಮ್ಯಕ್ಕೆ ಒಳಗಾಗಿದ್ದರಿಂದ ಸಂವಿಧಾನದ ಪ್ರಕಾರ "ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಾಗುತ್ತಾರೆ" ಎಂಬ ಆಧಾರದಲ್ಲಿ ಈ ಒಬಿಸಿಗಳಿಗೆ ಮೀಸಲಾತಿಯನ್ನು ಸಿಪಿಐ(ಎಂ) ಎತ್ತಿಹಿಡಿಯಿತು. ಆದಕಾರಣ, ಎಸ್.ಸಿ ಮತ್ತು ಎಸ್.ಟಿ.ಗಳಂತೆ ಒಬಿಸಿಗಳಿಗೂ ಮೀಸಲಾತಿ ಅಗತ್ಯವಿದೆ.

ಆದರೆ, ಮಂಡಲ ಆಯೋಗದಿಂದ ಭಿನ್ನವಾಗಿ, ಒಬಿಸಿ ಮೀಸಲಾತಿಯು ಒಳಗೇ ಆರ್ಥಿಕ ಮಾನದಂಡ ಇರಬೇಕು ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿತು. ಏಕೆಂದರೆ, ಜಮೀನು ಮತ್ತಿತರ ಸಂಪನ್ಮೂಲಗಳನ್ನು ಹೊಂದಿದ ಕೆಲವರು ಉತ್ತಮ ಸ್ಥಿತಿಯಲ್ಲಿರುವವರಿಂದಾಗಿ ಒಬಿಸಿಯ ಒಳಗಡೆಯೇ ದೊಡ್ಡ ಭಿನ್ನತೆ ಇದೆ. ಈ ಕೋಮುಗಳಲ್ಲಿರುವ ನಿಜವಾಗಿಯೂ ನಿರ್ಗತಿಕರಾದವರು ಈ ಮೀಸಲಾತಿಯ ಪ್ರಯೋಜನ ಪಡೆಯಬೇಕೆಂತಾದರೆ, ಆಗ ಉತ್ತಮ ಸ್ಥಿತಿಯಲ್ಲಿರುವವರಿಂದ ಅಂಥವರನ್ನು ಪ್ರತ್ಯೇಕಿಸಲು ಆರ್ಥಿಕ ಮಾನದಂಡ ಅತ್ಯಗತ್ಯ.

ಎಸ್.ಸಿ ಮತ್ತು ಎಸ್ಟಿ ವಿಷಯದಲ್ಲಿ, ಯಾವುದೇ ಆರ್ಥಿಕ ಮಾನದಂಡವಿಲ್ಲದ ಮೀಸಲಾತಿಯನ್ನು ಸಿಪಿಐ(ಎಂ) ದೃಢವಾಗಿ ಬೆಂಬಲಿಸುತ್ತದೆ. ಏಕೆಂದರೆ, ಅವರು ಶತಶತಮಾನಗಳಿಂದ ಜಾತಿವ್ಯವಸ್ಥೆಯಲ್ಲಿ ಸಾಮಾಜಿಕವಾಗಿ ತುಳಿತಕ್ಕೊಳಗಾಗಿದ್ದಾರೆ ಮತ್ತು ಇವತ್ತಿಗೂ ಅದು ಮುಂದುವರಿಯುತ್ತಿದೆ.

ಕರ್ಪೂರಿ ಠಾಕೂರ್ ಸೂತ್ರ

ಆ ಕಾಲದಲ್ಲಿ ಸಿಪಿಐ(ಎಂ) ಹೊಸದಾಗಿ ತೆಗೆದುಕೊಂಡ ನಿಲುವಲ್ಲ ಅದು. ಅದಕ್ಕೂ ಮುಂಚೆಯೇ, ಕೇರಳದಲ್ಲಿ ಇ.ಎಂ.ಎಸ್ ನಂಬೂದಿರಿಪಾಡ್ ನೇತೃತ್ವದ ಸಂಯುಕ್ತ ರಂಗ(ಯುನೈಟೆಡ್ ಫ್ರಂಟ್) ಸರ್ಕಾರವು ಮೀಸಲಾತಿಗಳ ಪ್ರಶ್ನೆಯನ್ನು ಪರಿಶೀಲಿಸುವ ಸಲುವಾಗಿ ನೆಟ್ಟೂರ್ ದಾಮೋದರನ್ ನೇತೃತ್ವದ ಆಯೋಗವೊಂದನ್ನು ಸ್ಥಾಪಿಸಿತ್ತು. ಈ ಆಯೋಗ ಸಲ್ಲಿಸಿದ ವರದಿಯಲ್ಲಿ ಒಬಿಸಿ ಒಳಗಡೆಯೇ ಆರ್ಥಿಕ ಮಾನದಂಡದ ಮೀಸಲಾತಿ ಪ್ರಾರಂಭಿಸಬೇಕೆಂದು ಶಿಫಾರಸು ಮಾಡಲಾಗಿತ್ತು. ಆ ಸಮಯದಲ್ಲಿ, ರಾಜ್ಯ ವಿಧಾನಸಭೆಯಲ್ಲಿ ಈ ವರದಿಯ ಚರ್ಚೆಯಾದಾಗ ಸಿಪಿಐ(ಎಂ) ಮಾತ್ರ ಅದನ್ನು ಬೆಂಬಲಿಸಿತ್ತು. 1978ರಲ್ಲಿ, ಕರ್ಪೂರಿ ಠಾಕೂರ್ ಸರ್ಕಾರ ಬಿಹಾರದಲ್ಲಿ ಒಬಿಸಿ ಮೀಸಲಾತಿಯನ್ನು ಘೋಷಣೆ ಮಾಡಿದಾಗ, ಪ್ರಬಲ ಮೀಸಲಾತಿ ವಿರೋಧಿ ಚಳುವಳಿ ನಡೆಯುತ್ತಿತ್ತು. ಆ ಸಮಯದಲ್ಲಿ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಇಎಂಎಸ್ ನಂಬೂದಿರಿಪಾಡ್ ಮತ್ತು ಲೋಹಿಯಾವಾದಿಯಾಗಿದ್ದ ಕರ್ಪೂರಿ ಠಾಕೂರ್ ನಡುವೆ ಮಾತುಕತೆಗಳಾದವು. ಈ ಮಾತುಕತೆಗಳ ಫಲವಾಗಿ ಮೀಸಲಾತಿ ಸೂತ್ರವೊಂದು ಸಿದ್ಧವಾಯಿತು, ಅದೇ ಕರ್ಪೂರಿ ಠಾಕೂರ್ ಸೂತ್ರ ಎಂದು ಪ್ರಸಿದ್ಧವಾಯಿತು.

ಕೆಲವು ಹಿಂದುಳಿದ ವರ್ಗಗಳಿಗೆ ಮೀಸಲಾತಿಯ ಒಳಗಡೆಯೇ ಆರ್ಥಿಕ ಮಾನದಂಡದ ಮೀಸಲಾತಿ ಮಾದರಿಯನ್ನು ಬಿಹಾರಿನಲ್ಲಿ ಎರಡು ಪಟ್ಟಿಗಳನ್ನು ಹೊಂದುವ ಮೂಲಕ ತರಲಾಗಿದೆ. ಮೊದಲ ಅನುಬಂಧದಲ್ಲಿ 12% ಮೀಸಲಾತಿಯನ್ನು ಆರ್ಥಿಕ ಮಾನದಂಡವಿಲ್ಲದೇ ತೀರ ಹಿಂದುಳಿದ ವರ್ಗದವರಿಗೆ ನೀಡಿದರೆ, ಎರಡನೇ ಅನುಬಂಧದಲ್ಲಿ 8% ಮೀಸಲಾತಿಯನ್ನು ಆರ್ಥಿಕ ಮಾನದಂಡದೊಂದಿಗೆ ಇತರ ಹಿಂದುಳಿದ ವರ್ಗಗಳಿಗೆ ನೀಡಲಾಗಿದೆ. ಮುಂದುವರಿದು, 3% ಮೀಸಲಾತಿಯನ್ನು ಮಹಿಳೆಯರಿಗೆ ಮತ್ತು 3% ಮೀಸಲಾತಿಯನ್ನು ಮುಂದುವರಿದ ವರ್ಗಗಳ ಬಡವರಿಗೆ ನೀಡಲಾಗಿದೆ. ವಿ.ಪಿ.ಸಿಂಗ್ ಸರ್ಕಾರ ಒಬಿಸಿ ಮೀಸಲಾತಿಯನ್ನು ಘೋಷಣೆ ಮಾಡುವಾಗಲೇ ಒಂದು ದಶಕದಿಂದ ಈ ವ್ಯವಸ್ಥೆ ಬಿಹಾರಿನಲ್ಲಿ ಜಾರಿಯಲ್ಲಿತ್ತು.

ಸಿಪಿಐ(ಎಂ) ನಿಲುವು

1990ರಲ್ಲಿ ಒಬಿಸಿ ಮೀಸಲಾತಿ ಕುರಿತು ಸಿಪಿಐ(ಎಂ) ತನ್ನ ನಿಲುವನ್ನು ಈ ಕೆಳಗಿನಂತೆ ನಿರೂಪಿಸಿತು:

ಅ) ಉತ್ತಮ ಸ್ಥಿತಿಯಲ್ಲಿ ಇರುವವರನ್ನು ಹೊರತುಪಡಿಸಿ ಆರ್ಥಿಕ ಮಾನದಂಡದ 27% ಮೀಸಲಾತಿಯನ್ನು ಒಬಿಸಿಯವರಿಗೆ ನೀಡಬೇಕು. ಒಂದೊಮ್ಮೆ ಹುದ್ದೆಗಳು ಬಡ ವಿಭಾಗದವರಿಂದ ತುಂಬಲಾಗದಿದ್ದರೆ, ಆಗ ಒಬಿಸಿ ವರ್ಗದೊಳಗಡೆಯವರಿಗೆ ಆ ಹುದ್ದೆಗಳು ಸಿಗಬೇಕು.

ಆ) ಕೆಲವು ಭಾಗದ ಮೀಸಲಾತಿಯನ್ನು (ಶೇಕಡಾ 5 ರಿಂದ 10 ರವರೆಗೆ) ಸಾಮಾನ್ಯ ವರ್ಗದ ಬಡವರಿಗೆ ನೀಡಬೇಕು.


ಇ) ಮೀಸಲಾತಿಯು ಒಂದು ಸೀಮಿತ ಪರಿಹಾರವನ್ನು ಮಾತ್ರ ನೀಡಬಲ್ಲುದು ಮತ್ತು ಅದು ಮೂಲ ಸಮಸ್ಯೆಗಳಾದ ಹಿಂದುಳಿದಿರುವಿಕೆ ಹಾಗೂ ನಿರುದ್ಯೋಗಗಳಿಗೆ ಪರಿಹಾರವಲ್ಲ ಎಂದು ಸಿಪಿಐ(ಎಂ) ಸ್ಪಷ್ಟಪಡಿಸುತ್ತದೆ. ಜನಸಮುದಾಯದ ಸರ್ವತೋಮುಖ ಏಳಿಗೆಗಾಗಿ ಮತ್ತು ಉದ್ಯೋಗ ಸೃಷ್ಟಿಗೆ ಆಮೂಲಾಗ್ರ ಭೂಸುಧಾರಣೆ, ಸಂಪತ್ತಿನ ಕೇಂದ್ರೀಕರಣವನ್ನು ಮುರಿಯುವುದು ಮತ್ತು ಸಮತೋಲದ ಆರ್ಥಿಕ ಬೆಳವಣಿಗೆ ಆಗಬೇಕು.

ಈ) ಜಾತಿ ತಾರತಮ್ಯ, ಹೊರಗಿಡುವಿಕೆ ಮತ್ತು ಒಂದು ಸಮರ್ಥಕ ಕ್ರಮವಾಗಿ ಮೀಸಲಾತಿ ಕುರಿತು ವ್ಯವಹರಿಸುವಾಗ ಒಂದು ವರ್ಗ ದೃಷ್ಟಿಕೋನವೂ ಸಿಪಿಐ(ಎಂ)ಗೆ ಇದೆ. ಜಾತಿ ವರ್ಗೀಕರಣವನ್ನು ಶಾಶ್ವತಗೊಳಿಸುವ ಮತ್ತು ಜಾತಿಯಾಧಾರಿತ ಅಸ್ಮಿತೆಯ ರಾಜಕಾರಣದ ಸಾಧನವಾಗಿ ಬಂಡವಾಳಶಾಹಿ ಪಕ್ಷಗಳು ಮೀಸಲಾತಿಯನ್ನು ಬಳಸುತ್ತವೆ. ದಮನಿತ ಜಾತಿಗಳ ಕೆಲವು ಸಂಘಟನೆಗಳು ಕೂಡ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಸಂಕುಚಿತವಾಗಿ ಉದ್ಯೋಗದಲ್ಲಿನ ಮೀಸಲಾತಿಗೆ ಸೀಮಿತಗೊಳಿಸಲು ಯತ್ನಿಸುತ್ತವೆ.

ದುಡಿಯುವ ಜನರನ್ನು ಮತ್ತು ಎಲ್ಲಾ ಜಾತಿ ಮತ್ತು ಕೋಮುಗಳ ಬಡವರನ್ನು ಒಂದುಗೂಡಿಸುವುದೇ ಸಿಪಿಐ(ಎಂ)ನ ಪರಮಗುರಿ. ಈ ಹಾದಿಯಲ್ಲಿ ಮಾತ್ರ ಈಗಿರುವ ದಮನಕಾರಿ ಸಮಾಜೋ ಆರ್ಥಿಕ ವ್ಯವಸ್ಥೆಯ ವಿರುದ್ಧ ಹೋರಾಡಲು ಸಾಧ್ಯ. ಎಲ್ಲಾ ಜಾತಿಯ ಬಡವರ ನಡುವೆ ಐಕ್ಯತೆ ಸಾಧಿಸಲು ಮತ್ತು ಮೀಸಲಾತಿ ಪ್ರಶ್ನೆಯ ಹುಟ್ಟುಹಾಕುವ ವಿಭಜನೆಗಳನ್ನು ಮೀರಿ ಹೋಗಲು ಸಾಮಾನ್ಯ ವರ್ಗದ ಬಡವರಿಗೂ ಒಂದು ಭಾಗ ಮೀಸಲಾತಿಯನ್ನು ನೀಡಬೇಕೆಂದು ಸಿಪಿಐ(ಎಂ) ಪ್ರತಿಪಾದಿಸುತ್ತದೆ.

10% ಮೀಸಲಾತಿ ದಮನಿತ ಜಾತಿಗಳ ಮೀಸಲಾತಿಯನ್ನು ದುರ್ಬಲಗೊಳಿಸುವ ಷಡ್ಯಂತ್ರವೇ?


ಎಲ್ಲಾ ಸರ್ಕಾರಿ ವಲಯಗಳಲ್ಲಿ ಮತ್ತು ಉನ್ನತ ಶಿಕ್ಷಣದಲ್ಲಿ ಎಸ್.ಸಿ., ಎಸ್.ಟಿ. ಮತ್ತು ಒಬಿಸಿ ಕೋಟಾಗಳನ್ನು ತುಂಬಲು ವಿಚಾರದಲ್ಲಿ ಮೋದಿ ಸರ್ಕಾರದ ನಿರಾಶಾದಾಯಕ ದಾಖಲೆಯಿಂದಾಗಿ, ಸಾಮಾನ್ಯ ವರ್ಗಕ್ಕೆ ಇತ್ತೀಚಿನ 10% ಮೀಸಲಾತಿಯು ದಮನಿತ ಜಾತಿಗಳ ಮೀಸಲಾತಿಯನ್ನು ದುರ್ಬಲಗೊಳಿಸಲು ಮಾಡುತ್ತಿರುವ ಒಂದು ಷಡ್ಯಂತ್ರವೇನೋ ಎಂಬ ಸಂಶಯಕ್ಕೆ ಎಡೆಮಾಡಿಕೊಟ್ಟಿದೆ. ಜಾತಿ ಆಧಾರಿತ ಮೀಸಲಾತಿಗೆ ಆರ್.ಎಸ್.ಎಸ್. ವಿರೋಧ ಇರುವುದರಿಂದ ಆ ಸಂಶಯ ಇನ್ನೂ ಗಟ್ಟಿಯಾಗುತ್ತಿದೆ.



ಕೇವಲ 10% ರಿಝರ್ವ್ ಉಳಿದಿರುವುದು –ಕೃಪೆ: ಗೋಕುಲ್, ಡೆಕ್ಕನ್ ಕ್ರಾನಿಕಲ್

ನಿಜವಾಗಿಯೂ ವಂಚಿತರು ಮತ್ತು ಬಡವರಿಗಾಗಿ ಅಲ್ಲ

2018ರಲ್ಲೇ ಅದಾಗಲೇ ಇದ್ದ 1.1 ಕೋಟಿ ಉದ್ಯೋಗ ನಷ್ಟವಾಗಿರುವ ನಿರಾಶಾದಾಯಕ ಸಂಗತಿಯನ್ನು ಜನರಿಂದ ಮರೆಮಾಚಲೇಬೇಕಾದ ತುರ್ತು ಬಿಜೆಪಿ ಸರ್ಕಾರಕ್ಕೆ ಇತ್ತು. "ಆರ್ಥಿಕವಾಗಿ ದುರ್ಬಲರಾಗಿರುವ ವಿಭಾಗದವರಿಗೆ" 10% ಮೀಸಲಾತಿ ಕಲ್ಪಿಸಿದ ಮೋದಿ ಸರ್ಕಾರದ ರೀತಿ ವಂಚನೆಯಿಂದ ಕೂಡಿದೆ. ಆರ್ಥಿಕವಾಗಿ ದುರ್ಬಲರು ಯಾರು ಎಂದು ನಿರ್ಣಯಿಸಲು ನಿಗದಿಮಾಡಿದ ಮಾನದಂಡವೇ ತೋರಿಸುತ್ತದೆ ಅದು ನಿಜವಾಗಿಯೂ ವಂಚಿತರು ಮತ್ತು ಬಡವರಿಗಾಗಿ ಅಲ್ಲ ಎನ್ನುವುದನ್ನು.



ನಿರುದ್ಯೋಗದ ಸುನಾಮಿ ಎದುರು 10%–ಕೃಪೆ: ಸಂದೀಪ್ ಅಧ್ವರ್ಯುರ್, ಟೈಮ್ಸ್ ಆಫ್ ಇಂಡಿಯ

ಮೀಸಲಾತಿಯಿರದ ಸಾಮಾನ್ಯ ವರ್ಗಗಳ ಬಡವರಿಗೆ 10% ಮೀಸಲಾತಿಯನ್ನು ಮೂರೇ ದಿನಗಳಲ್ಲಿ ಕೊಟ್ಟಿರುವ ಅಸಾ'ಮಾನ್ಯ ಕೆಲಸವನ್ನು ಮೋದಿಯವರು ಮಾತ್ರ ಮಾಡಿ ತೋರಿಸಲು ಸಾಧ್ಯ ಎಂದು ತುತ್ತೂರಿ ಊದಲಾಗುತ್ತಿದೆ. ಆದರೆ ಸಾಮಾನ್ಯ ವರ್ಗದ ಬಡವರಿಗೆ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮೀಸಲಾತಿಯನ್ನು ನೀಡುವ ಪ್ರಶ್ನೆ ಹೊಸದೇನಲ್ಲ ಎಂಬ ಸಂಗತಿಯನ್ನು ಮರೆಮಾಚಲಾಗುತ್ತಿದೆ. ಈ ಪ್ರಯತ್ನಗಳು ಯಾವವು, ಅವು ಏಕೆ ಇನ್ನೂ ಫಲ ನೀಡಿಲ್ಲ, ಹಾಗೆ ನೀಡದಿರಲು ಕಾರಣವಾದ ಅಡ್ಡಿಗಳನ್ನು ಈ ಅಸಾಮಾನ್ಯ ಮೋದಿಯವರು ನಿವಾರಿಸಿದ್ದಾರೆಯೇ? ಸಿಪಿಐ(ಎಂ)ನ ಹಿರಿಯ ಮುಖಂಡರಾದ ಪ್ರಕಾಶ ಕಾರಟ್ ಈ ಲೇಖನದಲ್ಲಿ ಪರಿಶೀಲಿಸಿದ್ದಾರೆ.

ಈ ಸಂವಿಧಾನ ತಿದ್ದುಪಡಿಯನ್ನು ತರಾತುರಿಯಲ್ಲಿ ಮಂಡಿಸಿ ಮತ್ತು ಅಂಗೀಕರಿಸಿದ ರೀತಿಯು ಮೋದಿ ಸರ್ಕಾರ ಅಲ್ಪಾವಧಿಯ ಚುನಾವಣಾ ಲಾಭಗಳಲ್ಲಿ ಮಾತ್ರ ಆಸಕ್ತವಾಗಿದೆ ಎಂಬುದನ್ನು ತೋರಿಸುತ್ತದೆ. ಕಾನೂನಾತ್ಮಕ ಸಂವಿಧಾನಾತ್ಮಕ ಸವಾಲುಗಳನ್ನು ಎದುರಿಸಲು ಚೆನ್ನಾಗಿ ಯೋಚಿಸಿದ ಕ್ರಮವನ್ನು ಅದು ಸಿದ್ಧಪಡಿಸಿಲ್ಲ. ಅದು ಮತ್ತೊಂದು ಚುನಾವಣಾ 'ಜುಮ್ಲಾ' ಅಂದರೆ ಬೊಗಳೆಯಾಗಿ ಪರಿಣಮಿಸಬಹುದು ಎನ್ನುತ್ತಾರೆ ಲೇಖಕರು ಅನು: ಸುರೇಂದ್ರ ರಾವ್





ಆಳವಾಗುತ್ತಿರುವ ಕಾರ್ಷಿಕ ಬಿಕ್ಕಟ್ಟು ಮತ್ತು ಏರುತ್ತಿರುವ ನಿರುದ್ಯೋಗ ಹೆಚ್ಚಿನ ಸಂಖ್ಯೆಯ ಜಾತಿ ಗುಂಪುಗಳನ್ನು ಮೀಸಲಾತಿಗಾಗಿ ಒತ್ತಾಯಿಸುವಂತೆ ಮಾಡುತ್ತಿವೆ. ಮೂಲಸಮಸ್ಯೆಗಳನ್ನು ಪರಿಹರಿಸದೆ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಉದ್ಯೋಗದಲ್ಲಿ 10% ಮೀಸಲಾತಿಯನ್ನು ಹೊಸದಾಗಿ ಕಲ್ಪಿಸುವ ಮೂಲಕ ಮೋದಿ ಸರ್ಕಾರವು ಅವುಗಳನ್ನು ತುಷ್ಟೀಕರಿಸಬಹುದು ಎಂಬ ಆಶಾಭಾವನೆ ಹೊಂದಿದೆ.

ಈ ಮುಂಚಿನ ಪ್ರಯತ್ನಗಳು

ಮಂಡಲ್ ಆಯೋಗದ ವರದಿ ಅನುಷ್ಠಾನದ ನಂತರ, ಹಲವಾರು ರಾಜಕೀಯ ಪಕ್ಷಗಳು ಮೇಲ್ಜಾತಿಯ ಬಡವರಿಗೂ ಸ್ವಲ್ಪ ಪರಿಹಾರ ಸಿಗಬೇಕೆಂಬ ನಿಲುವನ್ನು ಒಪ್ಪಿಕೊಂಡರು. ವಾಸ್ತವದಲ್ಲಿ, ವಿ.ಪಿ.ಸಿಂಗ್ ಅವರು ಒಬಿಸಿ ಮೀಸಲಾತಿ ಘೋಷಣೆ ಮಾಡುವಾಗ ಅಂಥದೊಂದು ಕ್ರಮವನ್ನು ಪ್ರಸ್ತಾಪಿಸಿದ್ದರು.

1991ರಲ್ಲಿ ಪಿ.ವಿ.ನರಸಿಂಹ ರಾವ್ ಸರ್ಕಾರ ಹೊರಡಿಸಿದ ಒಬಿಸಿಗಳಿಗೆ 27% ಮೀಸಲಾತಿಯ ಆದೇಶದಲ್ಲಿ ಆರ್ಥಿಕ ಮಾನದಂಡವನ್ನು ಅಳವಡಿಸಲಾಗಿತ್ತು; ಸಾಮಾನ್ಯ ವರ್ಗದ ಆರ್ಥಿಕವಾಗಿ ದುರ್ಬಲರಾಗಿರುವವರಿಗೆ 10% ಮೀಸಲಾತಿಯನ್ನು ಗೊತ್ತುಪಡಿಸಲಾಗಿತ್ತು. ಇದು ಸಂಪೂರ್ಣವಾಗಿ ಸಿಪಿಐ(ಎಂ)ನ ಧೋರಣೆಗೆ ಅನುಗುಣವಾಗಿತ್ತು. ಆದರೆ, ಸುಪ್ರೀಂಕೋರ್ಟ್ 1992ರಲ್ಲಿ ಸಾಮಾನ್ಯ ವರ್ಗದ ಮೀಸಲಾತಿಯನ್ನು ತೆಗೆದುಹಾಕಿ, ಕೆನೆಪದರವನ್ನು ಹೊರತುಪಡಿಸಿದ 27% ಒಬಿಸಿ ಮೀಸಲಾತಿಯನ್ನು ಎತ್ತಿಹಿಡಿಯಿತು.

ಕೆನೆಪದರವನ್ನು ಹೊರತುಪಡಿಸಿ 27% ಒಬಿಸಿ ಮೀಸಲಾತಿಯನ್ನು ಎತ್ತಿಹಿಡಿದ ತೀರ್ಪನ್ನು ಸಿಪಿಐ(ಎಂ) ಸ್ವಾಗತಿಸಿತು. ಜತೆಯಲ್ಲೇ ಮೀಸಲಾತಿಯಿಲ್ಲದ ಜಾತಿಗಳ ಬಡವರು ಮತ್ತ ನಿರ್ಗತಿಕರಿಗೂ ಏನಾದರೂ ಪರಿಹಾರ ಒದಗಿಸುವ ವಿಧಾನವೊಂದನ್ನು ಸರ್ಕಾರ ಕಂಡುಹಿಡಿಯಬೇಕೆಂದು ಸ್ಪಷ್ಟಪಡಿಸಿತು.

ಆದರೆ ಸಾಮಾನ್ಯ ವರ್ಗದವರಿಗೆ ನೀಡುವ ಪರಿಹಾರವು ಯಾವುದೇ ಕಾರಣಕ್ಕೂ ಎಸ್.ಸಿ, ಎಸ್.ಟಿ. ಮತ್ತು ಒಬಿಸಿಯವರಿಗೆ ಸಿಗುವ ಸಂವಿಧಾನದತ್ತ ಮೀಸಲಾತಿಗೆ ಕುಂದಾಗದಂತೆ ಅಥವಾ ಅದು ದುರ್ಬಲವಾಗದಂತೆ ಇರಬೇಕೆಂದು ಸಿಪಿಐ(ಎಂ) ದೃಢವಾಗಿ ಹೇಳಿದೆ.

ಮೋದಿ ಸರ್ಕಾರ ತೆಗೆದುಕೊಂಡ ಕ್ರಮದ ಬಗ್ಗೆ ಸಿಪಿಐ(ಎಂ) ತಳೆದಿರುವ ನಿಲುವನ್ನು ಈ ಮೇಲಿನ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ. ತಾನು ಭರವಸೆ ನೀಡಿದಂತೆ ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಸೃಷ್ಟಿ ಮಾಡುವಲ್ಲಿ ಶೋಚನೀಯವಾಗಿ ವಿಫಲವಾಗಿರುವ ಮತ್ತು ಕೃಷಿ ಬಿಕ್ಕಟ್ಟನ್ನು ಪರಿಹರಿಸಲು ಅಸಮರ್ಥವಾದ ಮೋದಿ ಸರ್ಕಾರ ಮುಂದಿನ ಚುನಾವಣೆಗೆ ಮುಂಚೆ ಚುನಾವಣಾ ಹೂಟವಾಗಿ ಮೀಸಲಾತಿಯನ್ನು ಬಳಸಲು ನೋಡುತ್ತಿದೆ.

ಹುಸಿ ಮಾನದಂಡ

2018ರಲ್ಲೇ ಅದಾಗಲೇ ಇದ್ದ 1.1 ಕೋಟಿ ಉದ್ಯೋಗ ನಷ್ಟವಾಗಿರುವ ನಿರಾಶಾದಾಯಕ ಸಂಗತಿಯನ್ನು ಜನರಿಂದ ಮರೆಮಾಚಲೇಬೇಕಾದ ತುರ್ತು ಬಿಜೆಪಿ ಸರ್ಕಾರಕ್ಕೆ ಇತ್ತು. "ಆರ್ಥಿಕವಾಗಿ ದುರ್ಬಲರಾಗಿರುವ ವಿಭಾಗದವರಿಗೆ" 10% ಮೀಸಲಾತಿ ಕಲ್ಪಿಸಿದ ಮೋದಿ ಸರ್ಕಾರದ ರೀತಿ ವಂಚನೆಯಿಂದ ಕೂಡಿದೆ. ಆರ್ಥಿಕವಾಗಿ ದುರ್ಬಲರು ಯಾರು ಎಂದು ನಿರ್ಣಯಿಸಲು ನಿಗದಿಮಾಡಿದ ಮಾನದಂಡವೇ ತೋರಿಸುತ್ತದೆ ಅದು ನಿಜವಾಗಿಯೂ ವಂಚಿತರು ಮತ್ತು ಬಡವರಿಗಾಗಿ ಅಲ್ಲ ಎನ್ನುವುದನ್ನು.

ಅದು ನಿಗದಿ ಮಾಡಿರುವ ಮಾನದಂಡದ ಪ್ರಕಾರ, ಕುಟುಂಬದ ಆದಾಯ ವರ್ಷಕ್ಕೆ ರೂ.8 ಲಕ್ಷಕ್ಕಿಂತ ಕಡಿಮೆಯಿರುವ ಅಥವಾ 5 ಎಕರೆಗಿಂತಲೂ ಕಡಿಮೆ ಕೃಷಿ ಭೂಮಿ ಹೊಂದಿರುವ ಅಥವಾ 1000 ಚದರ ಅಡಿಗಿಂತಲೂ ಕಡಿಮೆಯ ವಸತಿ ನಿವೇಶನ ಅಥವಾ ಅನುಸೂಚಿತ ಮುನಿಸಿಪಾಲಿಟಿಯ ವ್ಯಾಪ್ತಿಯಲ್ಲಿ 100 ಗಜಗಳಿಗಿಂತಲೂ ಕಡಿಮೆ ಅಥವಾ ಅನುಸೂಚಿತವಲ್ಲದ ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ 200 ಗಜಗಳಿಗಿಂತಲೂ ಕಡಿಮೆ ವಸತಿ ನಿವೇಶನ ಹೊಂದಿರುವವರು ಈ ಮೀಸಲಾತಿಗೆ ಅರ್ಹರು. ಇದರ ಅರ್ಥ ಸಾಮಾನ್ಯ ವರ್ಗದ 95% ಜನರೆಲ್ಲರೂ ಈ ಮೀಸಲಾತಿಯ ವ್ಯಾಪ್ತಿಯ ಅಡಿಯಲ್ಲಿ ಬರುತ್ತಾರೆ. ಇದು, ಬಡ ವಿಭಾಗಗಳಿಗೆ ಮೀಸಲಾತಿ ನೀಡಬೇಕೆಂಬ ಮೂಲ ಉದ್ದೇಶವನ್ನೇ ಹಾಳುಮಾಡುತ್ತದೆ.

ಬೂಟಾಟಿಕೆಯನ್ನು ಬಯಲಿಗೆಳೆಯುತ್ತದೆ.

ಮೋದಿ ಸರ್ಕಾರವು ಬುದ್ಧಿಪೂರ್ವಕವಾಗಿ ತಪ್ಪಿಸಿಕೊಳ್ಳುತ್ತಿರುವ ಮತ್ತೊಂದು ಪ್ರಮುಖ ವಿಷಯವೇನೆಂದರೆ ಮೀಸಲಾತಿಯನ್ನು ಖಾಸಗಿ ವಲಯಕ್ಕೆ ವಿಸ್ತರಿಸದೇ ಇರುವುದು. ಕೇಂದ್ರ ಸರ್ಕಾರದ ಹುದ್ದೆಗಳಲ್ಲಿ ಎಸ್.ಸಿ., ಎಸ್.ಟಿ. ಮತ್ತು ಒಬಿಸಿ ಕೋಟವನ್ನು ತುಂಬದಿರುವ ಹಾಗೂ ಮೀಸಲಾತಿಯನ್ನು ಖಾಸಗಿ ವಲಯಕ್ಕೆ ವಿಸ್ತರಿಸದಿರುವ ಮೋದಿ ಸರಕಾರದ ವಿಫಲತೆ ಮೀಸಲಾತಿ ಕುರಿತಂತೆ ಅದರ ಬೂಟಾಟಿಕೆಯ ನಿಲುವನ್ನು ಬಯಲಿಗೆಳೆಯುತ್ತದೆ.

ಸಾಮಾನ್ಯ ವರ್ಗದವರಿಗೆ ಈ ಮಾನದಂಡದ ಆಧಾರದಲ್ಲಿ ಮೀಸಲಾತಿ ವಿಸ್ತರಿಸಬೇಕೆನ್ನುವುದನ್ನು ಸಿಪಿಐ(ಎಂ) ಅತ್ಯುಗ್ರವಾಗಿ ವಿರೋಧಿಸುತ್ತದೆ. ಮತ್ತೊಂದು ಅಂಶವನ್ನು ಇಲ್ಲಿ ಸ್ಪಷ್ಟಪಡಿಸಬೇಕಾದ ಅಗತ್ಯವಿದೆ. ಈಗ ಅಂಗೀಕರಿಸಿದ ಸಂವಿಧಾನ ತಿದ್ದುಪಡಿಯು ಸಾಮಾನ್ಯ ವರ್ಗದ ಆರ್ಥಿಕವಾಗಿ ದುರ್ಬಲ ವಿಭಾಗದವರಿಗೆ 10% ಮೀಸಲಾತಿಯನ್ನು ಮಾತ್ರ ನೀಡುತ್ತದೆ. ಈ ಮೇಲೆ ತಿಳಿಸಿದ ಮಾನದಂಡದ ಬಗ್ಗೆ ಈ ತಿದ್ದುಪಡಿ ಏನೂ ತಿಳಿಸುವುದಿಲ್ಲ. ಪಕ್ಷವು ಈ ಮೀಸಲಾತಿಯನ್ನು ತಾತ್ವಿಕವಾಗಿ ಬೆಂಬಲಿಸುತ್ತಾದ್ದರಿಂದ ಸಂಸತ್ತಿನಲ್ಲಿರುವ ಸಿಪಿಐ(ಎಂ) ಸಂಸದರು ಸಂವಿಧಾನ ತಿದ್ದುಪಡಿಗೆ ಮತ ನೀಡಿದರು. ಆದರೆ ಪಕ್ಷವು ಈ ಮೇಲಿನ ಮಾನದಂಡವನ್ನು ನಿಗದಿಪಡಿಸುವ ಯಾವುದೇ ಶಾಸನವನ್ನು ಅಥವ ಅಧಿಸೂಚನೆಯನ್ನು ವಿರೋಧಿಸುತ್ತದೆ.

ಜಾರಿಯಲ್ಲಿ ನಿರಾಶಾದಾಯಕ ದಾಖಲೆ

ಈಗ ಎಸ್.ಸಿ, ಎಸ್.ಟಿ ಮತ್ತು ಒಬಿಸಿಗೆ ಇರುವ ಕೋಟಾವನ್ನು ಸರ್ಕಾರಿ ಹುದ್ದೆಗಳಲ್ಲಿ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ತುಂಬದಿರುವ ಅಂಶವೂ ಈ ಮೇಲಿನ ಸರ್ಕಾರದ ಕ್ರಮಗಳಿಗೆ ನಮ್ಮ ವಿರೋಧಕ್ಕೆ ಕಾರಣ. ಇತ್ತೀಚಿನ ಅಂಕಿಅಂಶಗಳ ಪ್ರಕಾರ ಒಬಿಸಿಗೆ ಮೀಸಲಿರುವ 27% ಕ್ಕೆ ಹೋಲಿಸಿದರೆ 21.7 % ಹುದ್ದೆಗಳನ್ನು ಮಾತ್ರ ತುಂಬಲಾಗಿದೆ. ಎಸ್.ಸಿ ಮತ್ತು ಎಸ್.ಟಿ. ವರ್ಗಗಳಲ್ಲಿ ಸರ್ಕಾರಿ ಹುದ್ದೆಗಳ ಎ ಮತ್ತು ಬಿ ವರ್ಗಗಳಲ್ಲಿ ಕೊರತೆ ಇದೆ ಮತ್ತು ದೊಡ್ಡ ಸಂಖ್ಯೆಯ ಹುದ್ದೆಗಳು ಖಾಲಿ ಬಿದ್ದಿವೆ.

ಉನ್ನತ ಶಿಕ್ಷಣದ ಪ್ರವೇಶದಲ್ಲಿ, ಎಸ್.ಸಿ, ಎಸ್.ಟಿ. ಮತ್ತು ಒಬಿಸಿಗಳನ್ನು ತೆಗೆದುಕೊಳ್ಳುವಲ್ಲಿ ಹಿಂದೆ ಬಿದ್ದಿದೆ. 93ನೇ ಸಂವಿಧಾನ ತಿದ್ದುಪಡಿ (2006)ಯು ನೀಡಿದ ಕೋಟಾವು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಒಬಿಸಿ ಮೀಸಲಾತಿಯನ್ನು, ಅದಕ್ಕೆ ಅನುವು ಮಾಡಿ ಕೊಡುವ ಶಾಸನವನ್ನು ತಂದಿಲ್ಲವಾದ್ದರಿಂದ ಜಾರಿ ಮಾಡುತ್ತಿಲ್ಲ. ಎಲ್ಲಾ ಸರ್ಕಾರಿ ವಲಯಗಳಲ್ಲಿ ಮತ್ತು ಉನ್ನತ ಶಿಕ್ಷಣದಲ್ಲಿ ಎಸ್.ಸಿ., ಎಸ್.ಟಿ. ಮತ್ತು ಒಬಿಸಿ ಕೋಟಾಗಳನ್ನು ತುಂಬಲು ತುರ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಈ ವಿಚಾರದಲ್ಲಿ ಮೋದಿ ಸರ್ಕಾರದ ನಿರಾಶಾದಾಯಕ ದಾಖಲೆಯಿಂದಾಗಿ, ಸಾಮಾನ್ಯ ವರ್ಗಕ್ಕೆ ಇತ್ತೀಚಿನ 10% ಮೀಸಲಾತಿಯು ದಮನಿತ ಜಾತಿಗಳ ಮೀಸಲಾತಿಯನ್ನು ದುರ್ಬಲಗೊಳಿಸಲು ಮಾಡುತ್ತಿರುವ ಒಂದು ಷಡ್ಯಂತ್ರವೇನೋ ಎಂಬ ಸಂಶಯಕ್ಕೆ ಎಡೆಮಾಡಿಕೊಟ್ಟಿದೆ. ಜಾತಿ ಆಧಾರಿತ ಮೀಸಲಾತಿಗೆ ಆರ್.ಎಸ್.ಎಸ್. ವಿರೋಧ ಇರುವುದರಿಂದ ಆ ಸಂಶಯ ಇನ್ನೂ ಗಟ್ಟಿಯಾಗುತ್ತಿದೆ.

ಖಾಸಗಿ ವಲಯದಲ್ಲಿ ಮೀಸಲಾತಿ

ಮೋದಿ ಸರ್ಕಾರವು ಬುದ್ಧಿಪೂರ್ವಕವಾಗಿ ತಪ್ಪಿಸಿಕೊಳ್ಳುತ್ತಿರುವ ಮತ್ತೊಂದು ಪ್ರಮುಖ ವಿಷಯವೇನೆಂದರೆ ಮೀಸಲಾತಿಯನ್ನು ಖಾಸಗಿ ವಲಯಕ್ಕೆ ವಿಸ್ತರಿಸದೇ ಇರುವುದು. ಸರಿ ಸುಮಾರು ಮೂರು ದಶಕಗಳ ನವ ಉದಾರೀಕರಣ ನೀತಿಗಳು ಮತ್ತು ಖಾಸಗೀಕರಣದಿಂದಾಗಿ, ಸರ್ಕಾರ ಮತ್ತು ಸಾರ್ವಜನಿಕ ವಲಯಗಳಲ್ಲಿ ಮೀಸಲಾತಿಯ ಅವಕಾಶ ತೀಕ್ಷ್ಣವಾಗಿ ಕುಸಿಯುತ್ತಿದೆ. ಖಾಸಗಿ ವಲಯಗಳಲ್ಲಿ ಮೀಸಲಾತಿ ಇಲ್ಲದೆ, ಒಂದು ಸಮರ್ಥಕ ಕ್ರಮವಾಗಿ ಮೀಸಲಾತಿಯು ತೀವ್ರವಾಗಿ ಕ್ಷೀಣಿಸುತ್ತಿದೆ.

ಕೇಂದ್ರ ಸರ್ಕಾರದ ಹುದ್ದೆಗಳಲ್ಲಿ ಎಸ್.ಸಿ., ಎಸ್.ಟಿ. ಮತ್ತು ಒಬಿಸಿ ಕೋಟವನ್ನು ತುಂಬದಿರುವ ಹಾಗೂ ಮೀಸಲಾತಿಯನ್ನು ಖಾಸಗಿ ವಲಯಕ್ಕೆ ವಿಸ್ತರಿಸದಿರುವ ಮೋದಿ ಸರಕಾರದ ವಿಫಲತೆ ಮೀಸಲಾತಿ ಕುರಿತಂತೆ ಅದರ ಬೂಟಾಟಿಕೆಯ ನಿಲುವನ್ನು ಬಯಲಿಗೆಳೆಯುತ್ತದೆ.

1992ರಲ್ಲಿ ಸುಪ್ರೀಂಕೋರ್ಟ್ ಇಂದ್ರ ಸಾಹ್ನೆ ತೀರ್ಪಿನ ಮೂಲಕ ಎಲ್ಲಾ ಪ್ರವರ್ಗಗಳ ಒಟ್ಟು ಮೀಸಲಾತಿಗೆ 50% ಗರಿಷ್ಠ ಮಿತಿ ಇದೆ. ಸಂವಿಧಾನ ತಿದ್ದುಪಡಿಯನ್ನು ತರಾತುರಿಯಲ್ಲಿ ಮಂಡಿಸಿ ಮತ್ತು ಅಂಗೀಕರಿಸಿದ ರೀತಿಯು ಮೋದಿ ಸರ್ಕಾರ ಅಲ್ಪಾವಧಿಯ ಚುನಾವಣಾ ಲಾಭಗಳಲ್ಲಿ ಮಾತ್ರ ಆಸಕ್ತವಾಗಿದೆ ಎಂಬುದನ್ನು ತೋರಿಸುತ್ತದೆ. ಕಾನೂನಾತ್ಮಕ ಸಂವಿಧಾನಾತ್ಮಕ ಸವಾಲುಗಳನ್ನು ಎದುರಿಸಲು ಚೆನ್ನಾಗಿ ಯೋಚಿಸಿದ ಕ್ರಮವನ್ನು ಅದು ಸಿದ್ಧಪಡಿಸಿಲ್ಲ. ಅದು ಮತ್ತೊಂದು ಚುನಾವಣಾ 'ಜುಮ್ಲಾ' ಅಂದರೆ ಬೊಗಳೆಯಾಗಿ ಪರಿಣಮಿಸಬಹುದು.

ಕೋಚಿಂಗ್ ಕ್ಲಾಸ್: ಫೀಗಳನ್ನು ಕೊಟ್ಟ ನಂತರ, ಆರ್ಥಿಕವಾಗಿ ಹಿಂದುಳಿದವ, ಮೀಸಲಾತಿಗೆ ಅರ್ಹ

–ಕೃಪೆ: ಹೇಮಂತ ಮರ್ಪೋರಿಯ



ಮೂಲ ಉದ್ದೇಶವನ್ನೇ ಹಾಳುಮಾಡುವ ದುರ್ಬಲತೆಯ ಮಾನದಂಡ

ಈಗ ಅಂಗೀಕರಿಸಿದ ಸಂವಿಧಾನ ತಿದ್ದುಪಡಿಯು ಸಾಮಾನ್ಯ ವರ್ಗದ ಆರ್ಥಿಕವಾಗಿ ದುರ್ಬಲ ವಿಭಾಗದವರಿಗೆ 10% ಮೀಸಲಾತಿಯನ್ನು ಮಾತ್ರ ನೀಡುತ್ತದೆ. ಆದರೆ ದುರ್ಬಲ ವಿಭಾಗವನ್ನು ಗುರುತಿಸುವ ಮಾನದಂಡ ಬಡ ವಿಭಾಗಗಳಿಗೆ ಮೀಸಲಾತಿ ನೀಡಬೇಕೆಂಬ ಮೂಲ ಉದ್ದೇಶವನ್ನೇ ಹಾಳುಮಾಡುತ್ತದೆ.

ಈ ಮಾನದಂಡದ ಬಗ್ಗೆ ಈ ತಿದ್ದುಪಡಿ ಏನೂ ತಿಳಿಸುವುದಿಲ್ಲ. ಪಕ್ಷವು ಈ ಮೀಸಲಾತಿಯನ್ನು ತಾತ್ವಿಕವಾಗಿ ಬೆಂಬಲಿಸುತ್ತಾದ್ದರಿಂದ ಸಂಸತ್ತಿನಲ್ಲಿರುವ ಸಿಪಿಐ(ಎಂ) ಸಂಸದರು ಸಂವಿಧಾನ ತಿದ್ದುಪಡಿಗೆ ಮತ ನೀಡಿದರು. ಆದರೆ ಪಕ್ಷವು ಈ ಮೇಲಿನ ಮಾನದಂಡವನ್ನು ನಿಗದಿಪಡಿಸುವ ಯಾವುದೇ ಶಾಸನವನ್ನು ಅಥವ ಅಧಿಸೂಚನೆಯನ್ನು ವಿರೋಧಿಸುತ್ತದೆ.



ಲೋಲಿಪಾಪ್– ಕೃಪೆ: ಸತೀಶ್ ಆಚಾರ್ಯ

ಮೇಲುಜಾತಿಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ... ಪುಟ 6 ರಿಂದ

ಎಷ್ಟು ಜನಕ್ಕೆ ಉದ್ಯೋಗ ನೀಡಲು ಸಾಧ್ಯ? ಅಥವಾ ಎಷ್ಟು ಮಂದಿಗೆ ಅವಕಾಶ ದೊರೆಯುತ್ತದೆ? ಕೇವಲ ಜನರನ್ನು ಭಾವನಾತ್ಮಕವಾಗಿ ಮೆಚ್ಚಿಸುವ ಸಲುವಾಗಿ ಇಂತಹ ಜನಲೋಲುಪ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆಯೇ ವಿನಾ ನಿಜವಾಗಿ ಜನರಿಗೆ ಉದ್ಯೋಗದ ಅವಕಾಶಗಳನ್ನು ನಿರ್ಮಿಸುವ ಕಾಳಜಿ ಇಲ್ಲಿ ಇದ್ದಂತೆ ಕಾಣುವುದಿಲ್ಲ.

ಆರ್ಥಿಕವಾಗಿ ಹಿಂದುಳಿದ ದುರ್ಬಲ ವರ್ಗದ ಬಡತನವನ್ನು ನಿವಾರಿಸಲು ಮೀಸಲಾತಿ ಬಿಟ್ಟು ಬೇರೆ ಅನೇಕ ಪರ್ಯಾಯ ಮಾರ್ಗಗಳಿವೆ. ಸಮಾಜದಲ್ಲಿರುವ ಆರ್ಥಿಕ ಅಸಮಾನತೆಯನ್ನು ನಿವಾರಣೆ ಮಾಡುವುದು, ಅಕ್ಷರ ಮತ್ತು ಶಿಕ್ಷಣದ ಸೌಲಭ್ಯವನ್ನು ಎಲ್ಲರಿಗೂ ಒದಗಿಸುವುದು, ಆರೋಗ್ಯ ಸೌಲಭ್ಯವನ್ನು ನೀಡುವುದು, ಮಹಿಳೆಯರ ಸಂತಾನೋತ್ಪತ್ತಿ ಹಕ್ಕುಗಳನ್ನು ಸಂರಕ್ಷಿಸುವುದು, ವರಮಾನದ ಫಲಗಳು ಎಲ್ಲರಿಗೂ ದೊರೆಯುವಂತೆ ವಿತರಣಾ ನ್ಯಾಯದ ಕ್ರಮಗಳು, ವಸತಿ ಸೌಲಭ್ಯಗಳನ್ನು ಎಲ್ಲರಿಗೂ ನೀಡುವುದು, ವಲಸೆಯನ್ನು ತಡೆಗಟ್ಟುವುದಕ್ಕೆ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗದ, ವರಮಾನ ಚಟುವಟಿಕೆಗಳ ಅವಕಾಶಗಳನ್ನು ಒದಗಿಸುವುದು ಮುಂತಾದವು ಜನರ ಬದುಕನ್ನು ಉತ್ತಮಪಡಿಸಬಲ್ಲವು.

ಪ್ರಸ್ತುತ ಸರ್ಕಾರವು ಆರ್ಥಿಕವಾಗಿ ದುರ್ಬಲ ಗುಂಪುಗಳಿಗೆ ಅಖಂಡವಾಗಿ ಶೇ.10 ರಷ್ಟು ಮೀಸಲಾತಿಯನ್ನು ನೀಡುವ ಕ್ರಮ ತೆಗೆದುಕೊಂಡಿದೆ. ಈ ಆರ್ಥಿಕ ದುರ್ಬಲ ಗುಂಪುಗಳಲ್ಲಿನ ಎಲ್ಲ ಗುಂಪುಗಳು ಸಮಾನವಾಗಿ ಆರ್ಥಿಕವಾಗಿ ಹಿಂದುಳಿದಿವೆಯೇ? ಒಂದು ಗುಂಪು ಮತ್ತೊಂದು ಗುಂಪಿಗಿಂತ ಹೆಚ್ಚು ದುಸ್ಥಿತಿಯಲ್ಲಿರಬಹುದು. ಎಲ್ಲ ಗುಂಪುಗಳಿಗೂ ಸಮಾನವಾಗಿ ಶೇ. 10 ರಷ್ಟು ಮೀಸಲಾತಿಯನ್ನು ಅಖಂಡವಾಗಿ ನೀಡುವುದು ಸಮಸ್ಯಾತ್ಮಕವಾಗಿದೆ. ಈ ರೀತಿಯ ಅಖಂಡ ಕ್ರಮದಿಂದ ಬಡತನವನ್ನು ನಿವಾರಿಸುವುದು ಮತ್ತು ಸಮಾನತೆಯನ್ನು ಸ್ಥಾಪಿಸುವುದು ಸಾಧ್ಯವಿಲ್ಲ.

ಒಟ್ಟಾರೆ ಕೆಳಕಂಡ ಕಾರಣಗಳಿಗಾಗಿ ಆರ್ಥಿಕ ದುರ್ಬಲ ಮೇಲು ಜಾತಿ ಗುಂಪುಗಳಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ನೀಡುವುದನ್ನು ಒಪ್ಪುವುದು ಸಾಧ್ಯವಿಲ್ಲ.

1 ಸಾಂವಿಧಾನಿಕ ಮೀಸಲಾತಿಯು ಸಾಮಾಜಿಕ ಹಿಂದುಳಿದಿರುವಿಕೆಗೆಮಾತ್ರಅನ್ವಯವಾಗುವಂತಹ ಕ್ರಮವಾಗಿದೆ. ಆರ್ಥಿಕ ನೆಲೆಯಲ್ಲಿ ಈ ಸೌಲಭ್ಯ ನೀಡುವುದು ಸಂವಿಧಾನಾತ್ಮಕ ಸೂತ್ರದ ಉಲ್ಲಂಘನೆಯಾಗುತ್ತದೆ.

2 ಈ ಮೀಸಲಾತಿಯನ್ನು ಸಾಮುದಾಯಿಕವಾಗಿ ನೀಡಲಾಗುತ್ತಿದೆ. ಈಗ ವ್ಯಕ್ತಿ/ಕುಟುಂಬ ಸಂಬಂಧಿ ಮೀಸಲಾತಿಯನ್ನು ನೀಡುವುದು ಆಚರಣೆಯಲ್ಲಿರುವ ಕ್ರಮಗಳನ್ನು ಮೀರುವಂತಹದ್ದಾಗುತ್ತದೆ. ಮೀಸಲಾತಿಯು ವ್ಯಕ್ತಿಗತ ಅಸಮಾನತೆ ನಿವಾರಣೆ ಕ್ರಮವಲ್ಲ. ಇದು ಸಾಮಾಜಿಕ ಅಸಮಾನತೆಯ ವಿರುದ್ಧದ ಅಸ್ತ್ರವಾಗಿದೆ.

3 ಈಗ ಪ.ಜಾ. ಮತ್ತು ಪ.ಪಂ. ಸಮುದಾಯಗಳಿಗೆ ಜನತಾಂತ್ರಿಕ ಸಂಸ್ಥೆಗಳಲ್ಲಿ ಮತ್ತು ಸರ್ಕಾರಿ ಇಲಾಖೆಗಳಲ್ಲಿ ಪ್ರಾತಿನಿಧ್ಯವು ಅತ್ಯಂತ ನಿಕೃಷ್ಟವಾಗಿರುವುದರಿಂದ ಅವುಗಳಿಗೆ ಮೀಸಲಾತಿ ನೀಡಲಾಗುತ್ತಿದೆ. ಈಗ ಆರ್ಥಿಕವಾಗಿ ಹಿಂದುಳಿದ ಗುಂಪುಗಳಿಗೆ ಜನತಾಂತ್ರಿಕ ಸಂಸ್ಥೆಗಳಲ್ಲಾಗಲಿ ಅಥವಾ ಸರ್ಕಾರಿ ಹುದ್ದೆಗಳಲ್ಲಾಗಲಿ/ಸೇವೆಗಳಲ್ಲಾಗಲಿ ಪ್ರಾತಿನಿಧ್ಯದ ಸಮಸ್ಯೆಯಿಲ್ಲ.

4 ಸಂವಿಧಾನಾತ್ಮಕವಾಗಿ ಯಾವ ಸಮುದಾಯಗಳಿಗೆ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವಿಕೆ ಆಧಾರದಲ್ಲಿ ಮೀಸಲಾತಿ ನೀಡಲಾಗುತ್ತಿದೆಯೋ ಅವುಗಳು ಆರ್ಥಿಕ ಬಂಡವಾಳದ ಜೊತೆಯಲ್ಲಿ ಸಾಮಾಜಿಕ ಬಂಡವಾಳದ ಕೊರತೆಯನ್ನು ಅನುಭವಿಸುತ್ತಿವೆ. ಆದರೆ ಮೇಲುಜಾತಿಗಳಲ್ಲಿ ಕೆಲವರು ಆರ್ಥಿಕ ಬಂಡವಾಳದ ಕೊರತೆಯನ್ನು ಮಾತ್ರ ಎದುರಿಸುತ್ತಿರಬಹುದು. ಅವುಗಳ ಸಾಮಾಜಿಕ ಬಂಡವಾಳ ಸಮೃದ್ಧವಾಗಿದೆ. ಈ ಕಾರಣದಿಂದ ಅವುಗಳಿಗೆ ಮೀಸಲಾತಿ ಅಗತ್ಯವಿಲ್ಲ.

5 ಸಾರ್ವಜನಿಕ ಉದ್ದಿಮೆಗಳಲ್ಲಿ ಮತ್ತು ಸಾರ್ವಜನಿಕ ಕ್ಷೇತ್ರಗಳು ಉದ್ಯೋಗಗಳು ಕಣ್ಮರೆಯಾಗುತ್ತಿದೆ(ಎಚ್‌ಎಎಲ್ ಉದ್ದಿಮೆ ಸ್ಥಿತಿ ಏನಾಗಿದೆ ಎಂಬುದು ಈಗ ರಹಸ್ಯವಾಗೇನು ಉಳಿದಿಲ್ಲ). ಖಾಸಗಿ ಕ್ಷೇತ್ರ ದ್ರುತಗತಿಯಲ್ಲಿ ಬೆಳೆಯುತ್ತಿದೆ(ಅಂಬಾನಿ, ಅದಾನಿ ಇತರೆ). ಆದರೆ ಅಲ್ಲಿ ಕೃತಕ ಬುದ್ಧಿಮತ್ತೆಯ ಯಂತ್ರೋಪಕರಣಗಳ ಪ್ರವೇಶದ ಕಾರಣವಾಗಿ ಉದ್ಯೋಗಗಳು ಬೆಳೆಯುತ್ತಿಲ್ಲ ಮತ್ತು ಅಲ್ಲಿ ಮೀಸಲಾತಿ ಸಾಧ್ಯವಿಲ್ಲ.

6 ಸರ್ವೋಚ್ಚ ನ್ಯಾಯಾಲಯವು ಸಂವಿಧಾನಾತ್ಮಕ ಮೀಸಲಾತಿಯು ಶೇ.50 ಮೀರಬಾರದು ಎಂಬ ಮಿತಿಯನ್ನು ನಿಗದಿ ಪಡಿಸಿದೆ. ಸರ್ಕಾರವು ಮಾಡಿರುವ ಸಂವಿಧಾನದ 124ನೆಯ ತಿದ್ದುಪಡಿಯಿಂದಾಗಿ ಈಗ ಅದು ಶೇ.60ಕ್ಕೆ ಏರಿಕೆಯಾಗುತ್ತದೆ. ಸರ್ಕಾರವೇನೋ ಶೇ.50 ರಷ್ಟು ಮೀಸಲಾತಿ ಮಿತಿಯು ಸಾಮಾಜಿಕ ಹಿಂದುಳಿದಿರುವಿಕೆಗೆ ಸಂಬಂಧಿಸಿದೆಯೆಂದೂ, ಶೇ. 10 ರಷ್ಟು ಮೀಸಲಾತಿ ಆರ್ಥಿಕ ಹಿಂದುಳಿದಿರುವಿಕೆಗೆ ಸಂಬಂಧಿಸಿದೆಯೆಂದು ವಾದಿಸಬಹುದು. ಮೊದಲನೆಯದು ಬೇರೆ, ಈಗಿನದು ಬೇರೆ ಎಂದು ಅವುಗಳಲ್ಲಿ ಭಿನ್ನತೆಯನ್ನು ತೋರಿಸಬಹುದು. ಆದರೆ ಇದು ಸರ್ವೋಚ್ಚ ನ್ಯಾಯಾಲಯದ ಒರೆಗಲ್ಲಿನಲ್ಲಿ ಗೆದ್ದು ಹೊರಬರುವುದು ಕಷ್ಟಸಾಧ್ಯ. ಏಕೆಂದರೆ ಈ ಕ್ರಮವು ಸಂವಿಧಾನದ 'ಮೂಲ ರಚನೆ'ಯ ಬದಲಾವಣೆಗೆ ಸಂಬಂಧಿಸಿದೆ.

7 ನಮ್ಮ ಸಂವಿಧಾನದಲ್ಲಿನ ಪ.ಜಾ. ಪ.ಪಂ. ಮತ್ತು ಒಬಿಸಿ ಮೀಸಲಾತಿಯು ಮೂಲತಃ ಸಾಮಾಜಿಕ ನ್ಯಾಯದ ಸಂಗತಿ. ಆದರೆ ಈಗ ಸರ್ಕಾರ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ನೀಡುತ್ತಿರುವ ಶೇ.10 ರಷ್ಟು ಮೀಸಲಾತಿಯ ಕ್ರಮದಲ್ಲಿ ಸಾಮಾಜಿಕ ನ್ಯಾಯದ ಸೂತ್ರ ಗೈರುಹಾಜರಾಗಿದೆ.

8 ಈ ಶೇ. 10 ರಷ್ಟು ಮೇಲ್ವರ್ಗದ ಜಾತಿಗಳಿಗೆ ಮೀಸಲಾತಿ ನೀಡುವ ಕ್ರಮವೇನಿದೆ, ಇದು ರಾಜಕೀಯ ಅವಕಾಶವಾದಿತನದ ಮತ್ತು ಮುಂಬರುವ ಚುನಾವಣಾ ರಾಜಕೀಯ ತಂತ್ರದ ಕ್ರಮವಾಗಿದೆ. ಇಲ್ಲಿ ಯಾವುದೇ ಸೈದ್ಧಾಂತಿಕ ಅಥವಾ ವೈಜ್ಞಾನಿಕ ಅಡಿಪಾಯವಿಲ್ಲ.

ಮತ್ತೆ ಹುಸಿ ವಿಜ್ಞಾನದ ಹಾವಳಿ....... ಪುಟ 11 ರಿಂದ

ಎಂಬುದಕ್ಕೆ ಪುರಾವೆಯಾಗಿದೆ', 'ರಾಮಾಯಣದ ಕಾಲದಲ್ಲಿ ಪುಷ್ಪಕ ವಿಮಾನಗಳು ಹಾರಾಡುತ್ತಿದ್ದವು ಎನ್ನುವುದು ಆಗಲೇ ವಿಮಾನ ತಂತ್ರಜ್ಞಾನ ಅಷ್ಟೊಂದು ಮುಂದುವರಿದಿತ್ತು ಎನ್ನುವುದಕ್ಕೆ ಸಾಕ್ಷಿಯಾಗಿವೆ', 'ಗುರಿಯನ್ನು ಅಟ್ಟಿಸಿಕೊಂಡು ಹೋಗಿ ನಾಶ ಮಾಡಿ ಮತ್ತೆ ಹಿಂದಕ್ಕೆ ಬಿಟ್ಟಲ್ಲಿಯೇ ಬಂದು ತಲುಪುವ ಗೈಡೆಡ್ ಮಿಸೈಲುಗಳು (ಅಸ್ತ್ರ ಪ್ರತಿಯಸ್ತ್ರಗಳು) ರಾಮಾಯಣದಲ್ಲಿ ಇದ್ದವು', 'ಗಂಡು ನವಿಲು ಬ್ರಹ್ಮಚಾರಿ; ಅದು ಹೆಣ್ಣು ನವಿಲಿನೊಂದಿಗೆ ಲೈಂಗಿಕವಾಗಿ ಸೇರುವುದಿಲ್ಲ. ನವಿಲನ್ನು ನಾವು ರಾಷ್ಟ್ರೀಯ ಪಕ್ಷಿಯನ್ನಾಗಿ ಮಾಡಿಕೊಂಡಿರುವುದು ಇದೇ ವಿಶೇಷ ಕಾರಣಕ್ಕಾಗಿ. ಇದಕ್ಕೆಂದೇ ಕೃಷ್ಣ ಪರಮಾತ್ಮ ತನ್ನ ತಲೆಯ ಮೇಲೆ ನವಿಲುಗರಿಯನ್ನು ಇಟ್ಟುಕೊಂಡಿರುವುದು. ಹೆಣ್ಣು ನವಿಲು ಗಂಡು ನವಿಲಿನ ಕಣ್ಣೀರನ್ನು ಕುಡಿದು ಗರ್ಭಿಣಿಯಾಗುತ್ತದೆ', 'ಭಾರತದ (ವಿದೇಶಿ ಹೈಬ್ರಿಡ್ ಅಲ್ಲ) ಹಸು ಹಾಕುವ ಸಗಣಿ ಅಪಾಯಕಾರಿ ವಿಕಿರಣಗಳನ್ನು ಹೀರಿಕೊಳ್ಳುವ ಶಕ್ತಿಯನ್ನು ಹೊಂದಿದೆ', 'ಗೋವಿನ ಹತ್ತಿರ ಹೋದರೆ ನೆಗಡಿ ಕೆಮ್ಮಿನಂಥ ಕಾಯಿಲೆಗಳು ವಾಸಿಯಾಗುತ್ತವೆ. ಗೋವಿನ ಸಗಣಿಯಲ್ಲಿ ವಿಟಮಿನ್ ಬಿ ಹೇರಳ ಪ್ರಮಾಣದಲ್ಲಿದೆ, ಅದು ರೇಡಿಯೋ ಆಕ್ಟಿವಿಟಿಯನ್ನು ಹೀರಿಕೊಳ್ಳುತ್ತದೆ. ಅಷ್ಟೇ ಅಲ್ಲ, ಮನುಷ್ಯನೂ ಸೇರಿದ ಹಾಗೆ ಜಗತ್ತಿನ ಎಲ್ಲಾ ಪ್ರಾಣಿಗಳು ಉಚ್ಛ್ವಾಸದಲ್ಲಿ ಶುದ್ಧ ಗಾಳಿಯಲ್ಲಿರುವ ಆಕ್ಸಿಜನ್ ಸೇವಿಸುತ್ತವೆ, ನಿಶ್ವಾಸದಲ್ಲಿ ಕಾರ್ಬನ್ ಡೈ ಆಕ್ಸೈಡನ್ನು ಬಿಡುತ್ತವೆ. ಆದರೆ, ನಿಶ್ವಾಸದಲ್ಲಿಯೂ ಆಕ್ಸಿಜನ್ನನ್ನು ಬಿಡುವ ಒಂದೇ ಒಂದು ಪ್ರಾಣಿ ಎಂದರೆ ಗೋವು'

ಈ ಹೇಳಿಕೆಗಳು ಭಾರತೀಯ ವಿಜ್ಞಾನ ಕಾಂಗ್ರೆಸ್ ಸಮಾವೇಶದಲ್ಲಷ್ಟೇ ಅಲ್ಲ, ಬೇರೆ ಬೇರೆ ಸಮಾವೇಶಗಳಲ್ಲಿ ಹೇಳಿದ ಮಾತುಗಳು ಇವು. ಇವೆಲ್ಲವೂ ನಡೆಯುತ್ತಿರುವುದು 2014ರ ನಂತರದಿಂದ ಎಂಬುದು ಗಮನಾರ್ಹ. ಮೊದಲೂ ಇಂಥ ಸಂಪ್ರದಾಯ ದಾಸ್ಯದ ಹುಚ್ಚು ಮಾತುಗಳನ್ನು ಯಾರೋ ಅಳಲೆಕಾಯಿ ಪಂಡಿತರೋ, ಮೂಢ ಗುರುಗಳೋ ಆಡುತ್ತಿದ್ದರು. ಆದರೆ ಈಗ 2014ರಲ್ಲಿ ಕೇಂದ್ರದಲ್ಲಿ ಹೊಸ ಸರಕಾರ ಬಂದ ನಂತರ ಇಂಥ ತಳಬುಡವಿಲ್ಲದ, ಯಾವುದೇ ಸಂಶೋಧನೆ, ಪ್ರಯೋಗಗಳಿಂದ ಸಾಬೀತಾಗದ ಹೇಳಿಕೆಗಳನ್ನು ವಿಜ್ಞಾನಿಗಳು, ನ್ಯಾಯಾಧೀಶರು, ಪ್ರಾಧ್ಯಾಪಕರು, ಉಪಕುಲಪತಿಗಳು, ಮಂತ್ರಿಗಳು, ಪ್ರಧಾನ ಮಂತ್ರಿಗಳು ಪ್ರತಿಷ್ಠಿತ ವೇದಿಕೆಗಳಿಂದ ಹೇಳಲು ತೊಡಗಿರುವುದು ಅಪಾಯಕಾರಿ ಸಂಗತಿ.

ನಿಜವಾದ ಕೊಡುಗೆಗೂ ಅವಮಾನ

ಪ್ರಾಚೀನ ಭಾರತದಲ್ಲಿ ನಾಗರಿಕತೆಯಿತ್ತು, ವೈದ್ಯಕೀಯ ಚಿಕಿತ್ಸೆ, ಖಗೋಳ ಶಾಸ್ತ್ರ, ಗಣಿತ ಶಾಸ್ತ್ರ ಇತ್ಯಾದಿ ಕ್ಷೇತ್ರಗಳಲ್ಲಿ ಭಾರತವು ಈಜಿಪ್ಟ್, ಅರೇಬಿಯಾ, ಮೆಸೊಪೊಟೋಮಿಯಾ ಇತ್ಯಾದಿ ದೇಶಗಳ ಸಮಸಮ ಇತ್ತು. ಆದರೆ ಅವೆಲ್ಲವೂ ಅಲ್ಲಿವರೆಗಿನ ಸಂಶೋಧನೆ, ಪ್ರಯೋಗ, ತೀರ್ಮಾನ ಮತ್ತು ಅವುಗಳನ್ನು ಅವಲಂಬಿಸಿ ಮುಂದುವರಿದ ಸಂಶೋಧನೆ ಮುಂತಾದ ವೈಜ್ಞಾನಿಕ ಬೆಳವಣಿಗೆಯ ಫಲವಾಗಿ ಆಗಿರುತ್ತದೆ. ಆದರೆ ನಮ್ಮ ಸ್ವಯಂಘೋಷಿತ ಪಂಡಿತರು ಹೇಳುವ ರೀತಿಯ ಸಂಶೋಧನೆ ಆಗಿನ ಕಾಲದಲ್ಲಿ ಆಗಿರುವುದಕ್ಕೆ ಪುರಾವೆಯಾಗಲೀ, ವಿವಿಧ ಮೂಲಗಳಿಂದ ಸಮರ್ಥನೆಯಾಗಲೀ ಸಿಗುವುದಿಲ್ಲ. ಅದರಲ್ಲಿಯೂ ಪುರಾಣಗಳಲ್ಲಿ ಬರುವ ಸಂಗತಿಗಳನ್ನು ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಯ ಪುರಾವೆಗಳೆಂದು ಪ್ರತಿಪಾದಿಸುವುದು ಮಕ್ಕಳೂ ನಾಚಿಕೊಳ್ಳುವಂಥ ಕೆಲಸ. ಅಜ್ಜಿ ಹೇಳುವ ಪುರಾಣ, ನೀತಿಕಥೆ, ಫ್ಯಾಂಟಸಿ, ಜಾನಪದ ಕಥೆಗಳೇ ಬೇರೆ, ವಾಸ್ತವವೇ ಬೇರೆ ಎಂಬುದು ಮಕ್ಕಳಿಗೂ ಗೊತ್ತಿರುತ್ತದೆ. ಪುರಾಣಗಳಿಗೆ ತಮ್ಮದೇ ಆದ ಮಹತ್ವವಿರುತ್ತದೆ. ಅವು ಆಯಾ ಕಾಲದ ಸಾಮಾಜಿಕ, ರಾಜಕೀಯ, ಧಾರ್ಮಿಕ ಧೋರಣೆಗಳನ್ನು, ನೀತಿಗಳನ್ನು ಪ್ರತಿಬಿಂಬಿಸುತ್ತಿರುತ್ತವೆ. ಇಂಥ ಸಂಗತಿಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಅವು ಶ್ರೀಮಂತ ಆಕರಗಳಾಗುತ್ತವೆ. ಅವುಗಳನ್ನು ಅವುಗಳ ಕಾಲದ, ಉದ್ದೇಶದ, ಮೌಲ್ಯದ ಚೌಕಟ್ಟಿನಿಂದ ಬೇರ್ಪಡಿಸಿ ಉದ್ಧರಿಸುವುದು ಅವುಗಳಿಗೇ ಮಾಡುವ ಅವಮಾನವಾಗಿದೆ; ಇದರಿಂದ ತಪ್ಪು ತಿಳಿವಳಿಕೆಯನ್ನು ಹರಡಿದ ಅಪರಾಧವೂ ಆಗುತ್ತದೆ. ಪುರಾಣಗಳ ಬಗ್ಗೆ ಗೌರವವಿರುವವರು, ವಿಜ್ಞಾನದ ಆಳ ಅಗಲಗಳ ಪರಿಚಯವಿಲ್ಲದವರು ಇಂಥ ಹುಚ್ಚು ಸಾಹಸಕ್ಕೆ ಕೈಹಾಕಬಾರದು. ಆದರೆ, ಭಾರತ ವಿಜ್ಞಾನ ಕಾಂಗ್ರೆಸ್ಸಿನ ಪ್ರತಿಷ್ಠಿತ ವಾರ್ಷಿಕ ಅಧಿವೇಶನದಲ್ಲಿಯೇ ಹೀಗೆ ಆಗುತ್ತಿರುವುದು ಒಂದು ಬಹುದೊಡ್ಡ ದುರಂತ.

ಈ ಅಧಿವೇಶನಗಳಿಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಅಕಾಡಮಿಗಳಿಂದ ಧನ ಸಹಾಯ ಮತ್ತು ಇತರ ಸೌಕರ್ಯಗಳ ನೆರವು ಇರುತ್ತದೆ. ಈ ಕಾರಣಕ್ಕಾಗಿ ಸಚಿವರುಗಳು, ಮತ್ತು ಅಧಿಕಾರಿಗಳು ಇದರಲ್ಲಿ ಪ್ರೊಟೋಕಾಲ್ ದೃಷ್ಟಿಯಿಂದ ಭಾಗವಹಿಸುತ್ತಾರೆ. ಆದರೆ ಇಂಥವರು ಇಂಥ ಬೃಹತ್ ವೇದಿಕೆಯನ್ನು ಅಸಂಬದ್ಧ ಹೇಳಿಕೆಗಳನ್ನು ನೀಡಿ ವಿಜ್ಞಾನವನ್ನು ಶತಮಾನಗಳ ಹಿಂದಕ್ಕೆ ತಳ್ಳುವಂಥ ಅವಕಾಶವನ್ನು ಬಳಸಿಕೊಳ್ಳಲು ಬಿಡಬಾರದು.

ವಿಜ್ಞಾನ ಪರ ಸಂಘಟನೆಗಳ ಪ್ರತಿಭಟನೆ

ಈ ಬಾರಿಯ ಭಾರತೀಯ ವಿಜ್ಞಾನ ಕಾಂಗ್ರೆಸ್ 106ನೇ ಅಧಿವೇಶನದಲ್ಲಿಯೂ ಆದ ಇಂಥ ಪ್ರಮಾದಗಳ ಕುರಿತು ಬೆಂಗಳೂರಿನ ಹಲವು ವೈಜ್ಞಾನಿಕ ಮನೋವೃತ್ತಿ ಸಂಘಗಳು ಭಾರತೀಯ ವಿಜ್ಞಾನ ಸಂಸ್ಥೆಯ ಎದುರು ಪ್ರತಿಭಟನೆಯನ್ನು ದಾಖಲಿಸಿವೆ.

ಅದೇ ರೀತಿ, ಆಲ್ ಇಂಡಿಯಾ ಪೀಪಲ್ಸ್ ಸೈನ್ಸ್ ನೆಟ್‌ವರ್ಕ್ ತನ್ನ ಒಂದು ಹೇಳಿಕೆಯಲ್ಲಿ ಹೀಗೆ ಹೇಳಿದೆ: "..ಪುರಾಣ ಕಥೆಗಳನ್ನು ವಿಜ್ಞಾನದೊಂದಿಗೆ ಬೆಸೆಯಲಾಗುತ್ತಿದೆ; ಇದು ನಿರಾಧಾರ ಮತ್ತು ಅವೈಜ್ಞಾನಿಕ ಅಷ್ಟೇ ಅಲ್ಲ, ಪ್ರಾಚೀನ ಭಾರತದ ವಿಜ್ಞಾನ/ತಂತ್ರಜ್ಞಾನದ ಸಾಧನೆಗಳನ್ನೂ ತಪ್ಪು ಹೇಳಿಕೆಗಳ ಮೂಲಕ ಇದು ಅವಮಾನಿಸುತ್ತದೆ... ಪಟ್ಟಭದ್ರ ಹಿತಾಸಕ್ತಿಗಳಿಂದ ಭಾರತೀಯ ವಿಜ್ಞಾನ ಕಾಂಗ್ರೆಸ್ಸಿನ ದುರ್ಬಳಕೆಯನ್ನು ತಡೆಗಟ್ಟಲು, ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರ ವಿಜ್ಞಾನ ಸಲಹೆಗಾರರು, ಮೂರು ಭಾರತೀಯ ವಿಜ್ಞಾನ ಅಕಾಡಮಿಗಳು ಮತ್ತು ಭಾರತೀಯ ವಿಜ್ಞಾನ ಕಾಂಗ್ರೆಸ್ ಹೀಗೆ ಸಂಬಂಧ ಪಟ್ಟ ಎಲ್ಲರೂ ಭಾರತೀಯ ವಿಜ್ಞಾನ ಕಾಂಗ್ರೆಸ್ಸಿನ ವಾರ್ಷಿಕ ಸಮಾವೇಶಗಳ ದುರ್ಬಳಕೆ ಮಾಡಿಕೊಂಡು, 2014 ರಿಂದೀಚೆಗೆ ಹುಸಿವಿಜ್ಞಾನ ಮತ್ತು ಅವೈಚಾರಿಕತೆಯನ್ನು ಹರಡುತ್ತಿರುವುದನ್ನು ತಡೆಗಟ್ಟಬೇಕು ಕ್ರಮವನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸುತ್ತದೆ."

ಭಾರತೀಯ ವಿಜ್ಞಾನ ಕಾಂಗ್ರೆಸ್ ವಾರ್ಷಿಕ ಅಧಿವೇಶನಗಳಿಗಾಗಿ ಪತ್ರಿಕೆಗಳು ಮತ್ತು ಮಾಧ್ಯಮಗಳು ಕುತೂಹಲದಿಂದ ಎದುರು ನೋಡುವಂತಾಗಿದೆ. ಏಕೆಂದರೆ ಇದರಲ್ಲಿ ಯಾರಾದರೊಬ್ಬ ಪ್ರತಿಷ್ಠಿತ ಸಚಿವರೋ, ವಿಜ್ಞಾನಿಗಳೋ ಅಸಂಬದ್ಧ ಹೇಳಿಕೆಯನ್ನು ನೀಡುತ್ತಾರೆ, ಅದೊಂದು ದೊಡ್ಡ ವಿವಾದವಾಗುತ್ತದೆ, ಮತ್ತು ತಾವು ಅದನ್ನು ಇನ್ನೊಂದಷ್ಟು ಮಸಾಲೆ ಸವರಿ ಪ್ರಸಾರ ಮಾಡಬಹುದು ಎಂದು. ಗಂಭೀರವಾಗಿ ನಡೆದ ಚರ್ಚೆಗಳಿಗಿಂತ ಇಂಥ ಜಂಬೂರಿಗಳೇ ಜಗತ್ತಿನಾದ್ಯಂತ ಪ್ರಚಾರವನ್ನು ಪಡೆದು ಭಾರತೀಯ ವಿಜ್ಞಾನ ಗೇಲಿಯ ವಸ್ತುವಾಗಿ ಪರಿಣಮಿಸುತ್ತಿದೆ. ಈ ಬೆಳವಣಿಗೆಯಿಂದ ಘಾಸಿಗೊಂಡ ಭಾರತೀಯ ವಿಜ್ಞಾನ ಕಾಂಗ್ರೆಸ್ ಅಸೋಸಿಯೇಶನ್ ಈ ವರ್ಷದ ಸಮಾವೇಶದ ಕೊನೆಯಲ್ಲಿ ಒಂದು ಠರಾವನ್ನು ಅಂಗೀಕರಿಸಿದೆ. ಅದರ ಪ್ರಕಾರ ಉಪನ್ಯಾಸಕ್ಕಾಗಿ ಆಹ್ವಾನಿಸುವವರ ಹಿನ್ನೆಲೆಯನ್ನು ಹೆಚ್ಚು ಎಚ್ಚರಿಕೆಯಿಂದ ಗಮನಿಸುವುದು, ಉಪನ್ಯಾಸ ಸಾರಾಂಶವನ್ನು ಮೊದಲೇ ತರಿಸಿಕೊಂಡು ಅವೈಜ್ಞಾನಿಕ, ಅವೈಚಾರಿಕ ವಿಚಾರಗಳ ಮಂಡನೆಯ ಸುಳಿವುಗಳು ಇಲ್ಲದಂತೆ ಪರಿಶೀಲಿಸುವುದು, ವಿಷಯ ವ್ಯಾಪ್ತಿಯನ್ನು ಬಿಟ್ಟು ಮಾತಾಡದ ಹಾಗೆ ಉಪನ್ಯಾಸಕರಿಗೆ ಕಠಿಣ ಸೂಚನೆ ನೀಡುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳುವುದಾಗಿದೆ. ಆಗಬೇಕಾದಷ್ಟು ಹಾನಿ ಆದ ನಂತರವಾದರೂ ಇವರು ಎಚ್ಚರವಹಿಸಿದ್ದನ್ನು ಸ್ವಾಗತಿಸೋಣ. 2020ರಲ್ಲಿ ಬೆಂಗಳೂರಿನಲ್ಲಿ ನಡೆಯುವ 107ನೇ ಅಧಿವೇಶನವು ಮಾದರಿ ಅಪ್ಪಟ ವಿಜ್ಞಾನ ಸಮಾವೇಶವಾಗುವುದಕ್ಕೆ ನಾವೆಲ್ಲರೂ ಸಹಕರಿಸೋಣ. ●

ಮತ್ತೆ ಹುಸಿ ವಿಜ್ಞಾನದ ಹಾವಳಿ


ಅಬ್ದುಲ್ ರಹಮಾನ್ ಪಾಷಾ

ನಾಸಾದ ಅಪೊಲೋ 11 ವ್ಯೋಮ ನೌಕೆಯಲ್ಲಿ ತೆರಳಿದ್ದ ನೀಲ್ ಆರ್ಮ್‌ಸ್ಟ್ರಾಂಗ್ ಮತ್ತು ಬಝ್ ಆಲ್ಡ್ರಿನ್ ಚಂದ್ರದ ನೆಲದ ಮೇಲೆ ಮೊದಲ ಬಾರಿ ಹೆಜ್ಜೆಯಿಟ್ಟ ಮಾನವರು. “ಮನುಷ್ಯನಿಗೆ ಇದು ಪುಟ್ಟ ಹೆಜ್ಜೆ, ಮಾನವ ಕುಲಕ್ಕಿದು ದೈತ್ಯ ಹೆಜ್ಜೆ.” ನಡೆದದ್ದು 1969ರ ಜೂನ್ 20 ರಂದು. ಬಾಹ್ಯಾಕಾಶದ ಅಭೂತಪೂರ್ವ ಸಾಧನೆ ಮಾಡಿ ಜಗದ್ವಿಖ್ಯಾತವಾಗಿರುವ ನಮ್ಮದೇ ಆದ ಇಸ್ರೋ ಸಂಸ್ಥೆ 2022ರಲ್ಲಿ ಭಾರತೀಯ ಖಗೋಳಯಾನಿಗಳನ್ನು ಚಂದ್ರದ ಮೇಲೆ ಇಳಿಸುವ ಯೋಜನೆಯನ್ನು ಹಾಕಿಕೊಂಡು ಕಾರ್ಯನಿರತರಾಗಿದ್ದಾರೆ. ಇದೆಲ್ಲಾ ಕೇಳಿ ನಮಗೆ ಆಧುನಿಕ ಭಾರತದ ವಿಜ್ಞಾನದ ಬಗ್ಗೆ ಹೆಮ್ಮೆ ಗೌರವ ಹುಟ್ಟುತ್ತದೆ. ಇದಕ್ಕೆ ಪ್ರತಿಯಾಗಿ ನಾನೇನಾದರೂ, “ಇದೇನೂ ಹೊಸದಲ್ಲ ಬಿಡಿ, 1960ರಲ್ಲಿಯೇ ನಾವು ಮಕ್ಕಳನ್ನು ಚಂದ್ರನಲ್ಲಿಗೆ ಕಳಿಸಿದ್ದೇವೆ. ನೋಡಿಲ್ವಾ ನೀವು ಬಿ.ಆರ್.ಪಂತುಲು ಅವರ ‘ಮಕ್ಕಳ ರಾಜ್ಯ’ ಸಿನಿಮಾನ!” ಎಂದರೆ ನೀವೇನನ್ನುತ್ತೀರಿ? ‘ಏ ಮಂಗ್ಯಾ, ಅದು ಸಿನಿಮಾ ಕಣ್ಲಾ, ವಿಜ್ಞಾನ ಅಲ್ಲ. ತಲಿ ಕೆಟ್ಟವರಂಗ್ ಮಾತಾಡ್ಬೇಡ’ ಅನ್ನೋದಂತೂ ಖಾತ್ರಿ. ಏಕೆಂದರೆ ನಾನು ಒಬ್ಬ ಸಾಮಾನ್ಯ ಮನುಷ್ಯ. ಆದರೆ, ‘ವಿಮಾನವನ್ನು 1903ರಲ್ಲಿ ರೈಟ್ ಬ್ರದರ್ಸ್ ಕಂಡು ಹಿಡಿದರು ಎನ್ನುವುದೆಲ್ಲಾ ರಾಂಗು, ನಮ್ಮ ದೇಶದಲ್ಲಿ ತ್ರೇತಾಯುಗದಲ್ಲಿಯೇ ವಿಮಾನಗಳು ಹಾರಾಡುತ್ತಿದ್ದವು, ಅವನ್ನು ನಾವು ಪುಷ್ಪಕ ವಿಮಾನ ಎನ್ನುತ್ತಿದ್ದೆವು. ರಾಮಾಯಣದ ಕಥೆಗಳಲ್ಲಿ ಚಿತ್ರವನ್ನು ನೋಡಿಲ್ವಾ?” ಎಂದು ಯಾರಾದರೂ ವಿಜ್ಞಾನಿಯೇ ಹೇಳಿದರೆ?

ಮೂಢಾಚರಣೆಗೂ ವಿಜ್ಞಾನದ ಹಂಗು

ಭಾರತದಂಥ ಯಾವುದೇ ಪ್ರಾಚೀನ ಸಂಸ್ಕೃತಿಯ ದೇಶದಲ್ಲಿ ಹಲವಾರು ಸಾಂಪ್ರದಾಯಿಕ ನಂಬಿಕೆಗಳು, ಆಚರಣೆಗಳು ರೂಢಿಗೆ ಬಂದಿರುತ್ತವೆ. ಅವು ನಮಗೆ ಒಂದು ಬಗೆಯ ತೃಪ್ತಿಯನ್ನು, ಸಾಂಸ್ಕೃತಿಕ, ಧಾರ್ಮಿಕ ಅಸ್ಮಿತೆಯನ್ನು ಕೊಡುತ್ತವೆ, ನೆಮ್ಮದಿಯನ್ನು ನೀಡುತ್ತವೆ. ಇದಕ್ಕೇನೂ ಅಭ್ಯಂತರವಿಲ್ಲ. ಆದರೆ ಇತ್ತೀಚೆಗೆ ನಮ್ಮ ಹಲವಾರು ಆಚರಣೆಗಳಿಗೆ ವೈಜ್ಞಾನಿಕ ವಿವರಣೆಯನ್ನು ಕೊಡುವ ಹೊಸ ಪ್ರಯತ್ನಗಳು ನಡೆಯುತ್ತಿವೆ. ಕುಂಕುಮ ಹಚ್ಚುವುದು, ಕಿವಿಯನ್ನು ಚುಚ್ಚುವುದು, ಮಾವಿನ ತೋರಣ, ಬಲಗಡೆಯಿಂದ ಏಳುವುದು, ಕಾಲುಂಗುರವನ್ನು ಹಾಕಿಕೊಳ್ಳುವುದು, ಅಶ್ವತ್ಥ ಮರದ ಸುತ್ತ ಸುತ್ತುವುದು, ರಾತ್ರಿಹೊತ್ತಿನಲ್ಲಿ ಹುಣುಸೆ ಮರದ ಅಡಿಯಲ್ಲಿ ಮಲಗದಿರುವುದು ಇತ್ಯಾದಿ. ಇವುಗಳಿಗೆ ತರ್ಕವಿದೆ, ಹಿಂದಿನವರಿಗೆ ಇದೆಲ್ಲಾ ಗೊತ್ತಿತ್ತು ಎಂದು ಪ್ರತಿಪಾದಿಸುವಾಗ ವೈಜ್ಞಾನಿಕ ಪದಗಳನ್ನು, ಸಿದ್ಧಾಂತಗಳನ್ನು ಬಳಸುತ್ತಾರೆ, ಆದರೂ ಅದರಲ್ಲಿ ವಿಜ್ಞಾನ ಇರುವುದಿಲ್ಲ. ಎರಡೇ ಪ್ರಶ್ನೆಗಳಲ್ಲಿ ಅವರ ವಾದ ಬಿದ್ದು ಹೋಗುತ್ತದೆ. ನಾವು ನಡೆಸುತ್ತಿರುವ ವೈಜ್ಞಾನಿಕ ಮನೋವೃತ್ತಿ ಶಿಬಿರಗಳಲ್ಲಿ ಇಂಥ ಪ್ರಶ್ನೆಗಳು ಚರ್ಚೆಗೆ ಬರುತ್ತವೆ.

ಇವರೆಲ್ಲಾ ಸಾಮಾನ್ಯ ಮನುಷ್ಯರು ಬಿಡಿ. ಆಂಧ್ರ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ.ಜಿ.ನಾಗೇಶ್ವರರಾವ್ ಅವರು, “ಪ್ರನಾಳ ಶಿಶು ಮತ್ತು ಸ್ಟೆಮ್ ಸೆಲ್ ತಂತ್ರಜ್ಞಾನ ಇಂದಿನದಲ್ಲ, ಇದು ಮಹಾಭಾರತ ಕಾಲದಲ್ಲಿಯೇ ಭಾರತದಲ್ಲಿ



ಪ್ರಚಲಿತವಿತ್ತು” ಎಂದರು, ಅದು ಹೇಗೆ ಸ್ವಾಮಿ ಎಂದು ಕೇಳುವ ಮುನ್ನವೇ ಅವರು ‘ಪುರಾವೆ’ಯನ್ನೂ ಕೊಟ್ಟುಬಿಟ್ಟರು. “ನೋಡಿ, ಗಾಂಧಾರಿಗೆ ನೂರು ಜನ ಮಕ್ಕಳು, ಕೌರವರು. ಒಬ್ಬ ಹೆಣ್ಣು ಮಗಳು ಒಂದು ಜೀವಿತ ಕಾಲದಲ್ಲಿ ನೂರು ಮಕ್ಕಳನ್ನು ಹಡೆಯಲು ಸಾಧ್ಯವೇ, ಇಲ್ಲ. ಬದಲಿಗೆ ಗರ್ಭಧರಿಸಿದ ಆಕೆಯ ಅಂಡಾಶಯವನ್ನು ತುಂಡುತುಂಡು ಮಾಡಿ ನೂರು ಮಡಕೆಗಳಲ್ಲಿ ಇಡಲಾಯಿತು. ಇದರಿಂದಾಗಿ ನೂರು ಮಕ್ಕಳು ಒಮ್ಮೆಲೆ ಜನಿಸಿದರು. ಅದಕ್ಕೇ ಹೇಳಿದ್ದು ಕುಂಭ ಶಿಶು ತಂತ್ರಜ್ಞಾನ ನಮಗೆ ಆಗಲೇ ಗೊತ್ತಿತ್ತು.” ಅವರೇ ತಮ್ಮ ವಿದ್ವತ್ಪೂರ್ಣ ಉಪನ್ಯಾಸವನ್ನು ಮುಂದುವರಿಸಿ, “ರಾವಣನ ಹತ್ತಿರ ಪುಷ್ಪಕ ವಿಮಾನವಿತ್ತು. 24 ಬಗೆಯ ವಿಮಾನಗಳಿದ್ದವು, ಶ್ರೀಲಂಕಾದಲ್ಲಿ ಇದಕ್ಕಾಗಿ ವಿಮಾನ ನಿಲ್ದಾಣಗಳೂ ಇದ್ದವು” ಎಂದು ಅಪ್ಪಣೆ ಕೊಡಿಸಿದರು. ಈ ಪುರಾಣ ಪುಣ್ಯಕಥೆಯನ್ನು ಅವರು ಹೇಳಿದ್ದು ಯಾವುದೇ ಭಜನಮಂಡಳಿಯಲ್ಲಲ್ಲ, ಅವರು ಈ ಉಪನ್ಯಾಸವನ್ನು ಮಾಡಿದ್ದು, ಇದೇ ಜನವರಿ 4–7, ಜಲಂಧರ್‌ನಲ್ಲಿ ನಡೆದ ಭಾರತೀಯ ವಿಜ್ಞಾನ ಕಾಂಗ್ರೆಸ್‌ನ 106ನೇ ಅಧಿವೇಶನದಲ್ಲಿ!

ಭವ್ಯ ಇತಿಹಾಸದ ವಿಜ್ಞಾನ ಕಾಂಗ್ರೆಸ್

ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಸೋಸಿಯೇಷನ್ (ಐಎಸ್‌ಸಿಎ) 1914ರಲ್ಲಿ ಸ್ಥಾಪಿತವಾಯಿತು. ಬ್ರಿಟಿಷ್ ಆಡಳಿತದ ಭಾರತದ ಕಲ್ಕತ್ತಾದಲ್ಲಿ ಇದನ್ನು ಸ್ಥಾಪಿಸಿದ್ದು ಬ್ರಿಟಿಷ್ ಪ್ರಾಧ್ಯಾಪಕರಾಗಿದ್ದ ಪ್ರೊ.ಜೆ.ಎಲ್.ಸೈಮನ್ಸನ್ ಮತ್ತು ಪ್ರೊ.ಪಿ.ಎಸ್.ಮ್ಯಕ್‌ಮೋಹನ್ ಎಂಬುದು ಒಂದು ವಿಶೇಷ. ಭಾರತದಲ್ಲಿ ನಡೆಯುತ್ತಿರುವ ವಿಜ್ಞಾನ ಸಂಶೋಧನೆ, ಶಿಕ್ಷಣ, ಚಟುವಟಿಕೆ ಎಲ್ಲವೂ ಜಾಗತಿಕ ಚೌಕಟ್ಟಿನಲ್ಲಿ ಆಧುನಿಕತೆಯ ಬೆಳಕಿನಲ್ಲಿ ನಡೆಯಬೇಕು ಎಂಬುದು ಅವರ ಮೂಲ ಉದ್ದೇಶವಾಗಿತ್ತು. ಪ್ರತಿ ವರ್ಷವೂ ನಡೆಯುವ ಭಾರತ ವಿಜ್ಞಾನ ಕಾಂಗ್ರೆಸ್ ಸಮಾವೇಶವು ಈ ವರ್ಷಕ್ಕೆ 106 ವರ್ಷಗಳನ್ನು ಕಂಡಿದೆ. ಆರಂಭದಲ್ಲಿ ಕೇವಲ 105 ಸದಸ್ಯರಿಂದ ಆರಂಭವಾದ ಸಂಸ್ಥೆಯ ಸದಸ್ಯರ ಸಂಖ್ಯೆ ಇವತ್ತು ಅರವತ್ತು ಸಾವಿರಕ್ಕೆ ಮುಟ್ಟಿದೆ. 1917ರಲ್ಲಿಯೇ ಇದರ 4ನೇ ಅಧಿವೇಶನ ಬೆಂಗಳೂರಿನಲ್ಲಿ ನಡೆಯಿತು. ಮುಂದೆಯೂ (1924, 1932, 1951, 1987 ಮತ್ತು 2003ರಲ್ಲಿ) ಐದು ಬಾರಿ ಬೆಂಗಳೂರಿನಲ್ಲಿಯೂ ನಡೆದಿದೆ. (1982 ಮತ್ತು 2016ರಲ್ಲಿ) ಎರಡು ಬಾರಿ ಮೈಸೂರಿನಲ್ಲಿಯೂ ನಡೆಯಿತು. 2020ರ ವಾರ್ಷಿಕ ಅಧಿವೇಶ ಮತ್ತೆ ಬೆಂಗಳೂರಿನಲ್ಲಿ ನಡೆಯಲು ಯೋಜಿಸಲಾಗಿದೆ.

ನಮ್ಮ ದೇಶದ ಮಟ್ಟಿಗೆ ಇಂಡಿಯನ್ ಸೈನ್ಸ್ ಕಾಂಗ್ರೆಸ್‌ನ ಈ ವಾರ್ಷಿಕ ಅಧಿವೇಶನಗಳು ವಿಜ್ಞಾನ ತಂತ್ರಜ್ಞಾನದ ಕ್ಷೇತ್ರದಲ್ಲಿ ಬಹಳ ಮಹತ್ವದ ಚಟುವಟಿಕೆಯಾಗಿವೆ. ದೇಶದ ಕೇಂದ್ರ ಮತ್ತು ಮತ್ತು ರಾಜ್ಯಗಳ ವಿಜ್ಞಾನ ತಂತ್ರಜ್ಞಾನ ಇಲಾಖೆಗಳು, ಅಕಾಡಮಿಗಳು, ಪರಿಷತ್ತುಗಳು, ವಿಶ್ವವಿದ್ಯಾಲಯದ ವಿಭಾಗಗಳು, ಸಂಶೋಧನಾ ಸಂಸ್ಥೆಗಳು ಇತ್ಯಾದಿ ಪ್ರತಿಷ್ಠಿತ ಸಂಸ್ಥೆಗಳಿಂದ ನೂರಾರು ಭಾರತೀಯ ಮತ್ತು ವಿದೇಶೀಯ ವಿಜ್ಞಾನಿಗಳು, ಸಾವಿರಾರು ಮಕ್ಕಳು, ಯುವಜನರು ಭಾಗವಹಿಸುತ್ತಾರೆ. ಇದರಲ್ಲಿ ಪ್ರತಿ ವರ್ಷವೂ ಮೂರು ನಾಲ್ಕು ಜನ ನೊಬೆಲ್ ಪುರಸ್ಕೃತ ವಿಜ್ಞಾನಿಗಳೂ ಹಾಜರಿರುತ್ತಾರೆ, ಭಾರತದ ಪ್ರಧಾನಿ ತಪ್ಪದೇ ಭಾಗವಹಿಸುವ ಐಕ್ಯೈಕ ವಿಜ್ಞಾನ ಸಮಾವೇಶ ಎಂಬುದು ಇದರ ಮಹತ್ವ. ಆ ವರೆಗೆ ಆಗಿರುವ ವಿಜ್ಞಾನ ತಂತ್ರಜ್ಞಾನದಲ್ಲಿ ಆಗಿರುವ ಅಭಿವೃದ್ಧಿಯ ಕುರಿತು ವಸ್ತುಪ್ರದರ್ಶನವಿರುತ್ತದೆ.

ಪ್ರತಿ ವರ್ಷವೂ ಈ ಸಮಾವೇಶಕ್ಕಾಗಿ ಒಬ್ಬ ಪ್ರಧಾನ ಅಧ್ಯಕ್ಷರನ್ನು ಆಯ್ಕೆ ಮಾಡಲಾಗುತ್ತದೆ. 1947ರ ಸಮಾವೇಶದಲ್ಲಿ ಸ್ವತಃ ಪ್ರಧಾನಿ ಜವಹರಲಾಲ್ ನೆಹರೂ ಪ್ರಧಾನಾಧ್ಯಕ್ಷರಾಗಿದ್ದರು. ನಂತರ ಇಂಥ ಅಧ್ಯಕ್ಷರ ಸಾಲಿನಲ್ಲಿ ಪ್ರಫುಲ್ಲಚಂದ್ರ ರಾಯ್, ಸರ್ ಎಂ.ವಿಶ್ವೇಶ್ವರಯ್ಯ, ಜೆ.ಸಿ.ಬೋಸ್, ಸರ್ ಸಿ.ವಿ.ರಾಮನ್, ಮೇಘ್‌ನಾದ್ ಸಾಹಾ, ಪ್ರೊ.ಸಿ.ಎನ್.ಆರ್. ರಾವ್, ಯು.ಆರ್.ರಾವ್ ಇವರಂಥ ವಿಖ್ಯಾತ ವಿಜ್ಞಾನಿಗಳು, ವಿಜ್ಞಾನ ಚಿಂತಕರು, ಯೋಜನಾಕಾರರು ಒಳಗೊಂಡಿದ್ದಾರೆ ಎಂಬುದು ಗಮನಾರ್ಹ. ಸಮಾವೇಶದಲ್ಲಿ ಮಂಡಿತವಾಗುವ ಸಂಶೋಧನಾ ಪ್ರಬಂಧಗಳು, ಚರ್ಚೆ, ಸಂವಾದಗಳಿಗೆ ಒಂದು ಗುರಿಯನ್ನು ನಿರ್ದೇಶಿಸುವ ಸಲುವಾಗಿ ಪ್ರತಿ ವರ್ಷವೂ ಒಂದು ವಿಶೇಷ ವಿಷಯವನ್ನು ನಿಗದಿ ಪಡಿಸಲಾಗುತ್ತದೆ. ಈ ಬಾರಿಯ 106ನೇ ಅಧಿವೇಶನಕ್ಕಾಗಿ ನಿಗದಿತವಾಗಿದ್ದ ವಿಷಯ, “ಭವಿಷ್ಯದ ಭಾರತ: ವಿಜ್ಞಾನ ಮತ್ತು ತಂತ್ರಜ್ಞಾನ”. ಇಂಥ ಒಂದು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಸಮಾವೇಶದಲ್ಲಿ ವಿಶ್ವವಿದ್ಯಾಲಯವೊಂದರ ಉಪಕುಲಪತಿ ಇಂಥ ಕಾಗಕ್ಕ ಗುಬ್ಬಕ್ಕ ಕಥೆಯನ್ನು ವಿಜ್ಞಾನದ ಹೆಸರಿನಲ್ಲಿ ಹೇಳುತ್ತಾರೆ ಎಂದರೆ ಬಹುದೊಡ್ಡ ವಿಪರ್ಯಾಸವೇ ಸರಿ.

ಅವಿಜ್ಞಾನಕ್ಕೂ ನಾಲ್ಕು ವರ್ಷ

ಆದರೆ, ಇಂಥ ಅವೈಜ್ಞಾನಿಕ ಹೇಳಿಕೆಯನ್ನು ಅಷ್ಟೊಂದು ಗಂಭೀರವಾಗಿ ಈ ಸಮಾವೇಶದಲ್ಲಿ ಹೇಳಿದವರಲ್ಲಿ ಇವರೇ ಮೊದಲೇನಲ್ಲ. ಈ ಹಿಂದಿನ ಭಾರತೀಯ ವಿಜ್ಞಾನ ಕಾಂಗ್ರೆಸ್ ಸಮಾವೇಶಗಳಲ್ಲಿ ಕೆ.ಜೆ.ಕೃಷ್ಣನ್ ಎನ್ನುವವರು ಐಸ್ಯಾಕ್ ನ್ಯೂಟನ್ ಮತ್ತು ಅಲ್ಬರ್ಟ್ ಐನ್‌ಸ್ಟೈನ್ ಇಬ್ಬರ ಸಿದ್ಧಾಂತಗಳು ತಪ್ಪಾಗಿವೆ, ಗುರುತ್ವ ತರಂಗಗಳ ಕುರಿತು ಹೆಚ್ಚಿನ ಸಂಶೋಧನೆಗಳನ್ನು ನಡೆಸಿ ಅವನ್ನು ‘ನರೇಂದ್ರ ಮೋದಿ ತರಂಗ’ಗಳೆಂದು ಮರುನಾಮಕರಣ ಮಾಡಲಾಗುವುದು ಎಂದರು. ಇದಲ್ಲದೇ ‘ಗುರುತ್ವ ಮಸೂರ’ವನ್ನು ‘ಹರ್ಷವರ್ಧನ ಮಸೂರ’(ಹರ್ಷವರ್ಧನ ಅವರು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.)ಎಂದು ಕರೆಯಲಾಗುವುದು ಎಂದರು.(ಇದನ್ನು ಅವರು ಹಾಸ್ಯಕ್ಕಾಗಿ ಹೇಳಿರಲಿಲ್ಲ). ‘ಹುಲಿಯ ಚರ್ಮದ ಮೇಲೆ ಕುಳಿತು ಯೋಗವನ್ನು ಮಾಡಿದರೆ ನಿಮಗೆ ವಯಸ್ಸೇ ಆಗುವುದಿಲ್ಲ’, ‘ಅಲ್ಬರ್ಟ್ ಐನ್‌ಸ್ಟೈನ್ ಸಿದ್ಧಾಂತಕ್ಕಿಂತ ಉತ್ತಮವಾದ ಸಿದ್ಧಾಂತಗಳು ವೇದಗಳಲ್ಲಿವೆ ಎಂದು ಸ್ಟೀಫನ್ ಹಾಕಿಂಗ್ ಅವರೇ ಹೇಳಿದ್ದಾರೆ’,‘ನಾವು ಪೂಜಿಸುವ ಗಣೇಶನನ್ನು ನೋಡಿದರೇ ತಿಳಿಯುತ್ತದೆ ಪ್ರಾಚೀನ ಭಾರತದಲ್ಲಿಯೂ ಮನುಷ್ಯನ ದೇಹಕ್ಕೆ ಆನೆಯ ತಲೆಯನ್ನು ಕಸಿ ಮಾಡುವಷ್ಟು ಉನ್ನತ ಮಟ್ಟದ ಪ್ಲಾಸ್ಟಿಕ್ ಸರ್ಜರಿ ನಮ್ಮಲ್ಲಿತ್ತು’,‘ಕರ್ಣ ಅಮ್ಮನ ಗರ್ಭದಿಂದ ಹುಟ್ಟಲಿಲ್ಲ ಎಂಬುದು ಆಗಲೇ ಜೆನೆಟಿಕ್ ಇಂಜಿನಿಯರಿಂಗ್ ಪ್ರಚಲಿತವಿತ್ತು

ಪುಟ 10 ಕ್ಕೆ

ಮೋದಿ ಸರಕಾರದ ಬೆದರಿಕೆಯಿಂದ ವಿಜ್ಞಾನ ಬಚಾವಾಗಬಹುದು, ಆದರೆ ವೈಜ್ಞಾನಿಕ ಸಂಸ್ಥೆಗಳು?

ಭಾರತೀಯ ವಿಜ್ಞಾನ ಕಾಂಗ್ರೆಸ್ ಮೋದಿ ಸರಕಾರದಿಂದ ಅಪಮೌಲ್ಯಕ್ಕೆ ಒಳಗಾದ ಅಥವಾ ನಾಶವಾದ ಹಲವು ಸಾರ್ವಜನಿಕ ಸಂಸ್ಥೆಗಳಲ್ಲಿ ಒಂದು. 1930ರ ದಶಕದಲ್ಲಿ ಜರ್ಮನಿಯ ನಾಜಿ ಬೆಂಬಲಿಗರಾಗಿದ್ದ 100 ವಿಜ್ಞಾನಿಗಳು ಐನ್‌ಸ್ಟೀನ್‌ರ “ಸಾಪೇಕ್ಷ ಸಿದ್ಧಾಂತ” ‘ಯೆಹೂದಿಯರ ಪಿತೂರಿ’ ಎಂದು ಖಂಡಿಸಿ ಹೇಳಿಕೆ ಕೊಟ್ಟರು. ಆಗ ಅದು ನಿಜವಾಗಿದ್ದರೆ, ಒಬ್ಬ ವಿಜ್ಞಾನಿ ಹೇಳಿದ್ದರೆ ಸಾಕಿತ್ತು ಎಂದು ಐನ್‌ಸ್ಟೀನ್‌ವ್ಯಂಗ್ಯವಾಗಿ ಮಾರ್ಮಿಕವಾಗಿ ಉತ್ತರಿಸಿದ್ದರು. ವಿಜ್ಞಾನಕ್ಕೆ ಯಾರ ರಕ್ಷಣೆಯೂ ಬೇಕಾಗಿಲ್ಲ. ವಿಜ್ಞಾನವನ್ನು ಭಾಷಣಗಳಿಂದ ಅಥವಾ ಹೇಳಿಕೆಗಳಿಂದ ನಿರಾಕರಿಸಲೂ ಅಥವಾ ಸಾಧಿಸಲು ಬರುವುದಿಲ್ಲ. ಆದರೆ ವೈಜ್ಞಾನಿಕ ಸಂಸ್ಥೆಗಳಿಗೆ ರಕ್ಷಣೆ, ಬೆಂಬಲ ಇತ್ಯಾದಿಗಳು ಬೇಕು. ರಾಜಕೀಯ ಅಧಿಕಾರಸ್ಥರ ಬೆಂಬಲಿಸಿದ ಬೊಗಳೆಯನ್ನೆಲ್ಲಾ ವಿಜ್ಞಾನ ಎಂದು ಹೇಳಲು ಅವಕಾಶ ಕೊಡುವ ಮೂಲಕ ಭಾರತೀಯ ವಿಜ್ಞಾನ ಕಾಂಗ್ರೆಸ್ ತನ್ನದೇ ಘನತೆ ಹಿರಿಮೆಗೆ ಕುಂದು ತಂದಿದೆ.

– ಪ್ರಬೀರ್ ಪುರಕಾಯಸ್ಥ

(ಅಖಿಲ ಭಾರತ ಜನ ವಿಜ್ಞಾನ ಜಾಲದ ಸ್ಥಾಪಕ ನಾಯಕರಲ್ಲೊಬ್ಬರು ಮತ್ತು ‘ನ್ಯೂಸ್ ಕ್ಲಿಕ್’ ವೆಬ್ ಪತ್ರಿಕೆಯ ಪ್ರಧಾನ ಸಂಪಾದಕ)

ಕಾನೂನುಪಾಲನೆ ನಾಚಿಕೆಗೇಡು ಎಂದ ಪ್ರಧಾನಿ !



ಕೇರಳಕ್ಕೆ ಒಂದು ಉದ್ಘಾಟನೆಗೆ ಹೋದ ದೇಶದ ಪ್ರಧಾನ ಮಂತ್ರಿಗಳು ಅಲ್ಲಿನ ಎಲ್‌ಡಿಎಫ್ ಸರಕಾರ ಶಬರಿಮಲೆಯಲ್ಲಿ ಮಹಿಳೆಯರ ಪ್ರವೇಶಕ್ಕೆ ಅನುವು ಮಾಡಿಕೊಡಬೇಕೆಂಬ ದೇಶದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಜಾರಿಗೆ ಮುಂದಾಗಿರುವುದು ನಾಚಿಕೆಗೇಡು ಎಂದಿದ್ದಾರೆ. ಇದೊಂದು ಆಕ್ರೋಶಕಾರಿ ಹೇಳಿಕೆ. ಆದರೆ ಇತ್ತೀಚಿನ ಈ ಸರಕಾರದ, ಅದರಲ್ಲೂ ಅದರ ಮುಖ್ಯಸ್ಥರ ವರ್ತನೆಗಳನ್ನು ನೋಡಿದರೆ, ಇವರು ಮತ್ತು ಇವರ ಸರಕಾರ ಕಾನೂನಿನ ಆಳ್ವಿಕೆಗೇ ವಿರೋಧವಾಗಿದ್ದಾರೆ ಎಂಬುದನ್ನು ದೃಢಪಡಿಸುವ ಮತ್ತೊಂದು ಹೇಳಿಕೆಯಷ್ಟೇ. ಮುಖ್ಯವಾಗಿ ಸಿಬಿಐ, ಸಿವಿಸಿ, ಆರ್‌ಬಿಐ, ಸಿಐಸಿ, ಚುನಾವಣಾ ಆಯೋಗ ಹೀಗೆ ಸುಮಾರಾಗಿ ಎಲ್ಲ ಸಂವಿಧಾನಿಕ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಹಳ ತಪ್ಪಿಸಲಾಗಿದೆ, ನ್ಯಾಯಾಂಗವೂ ಇದಕ್ಕೆ ಹೊರತಾಗಿಲ್ಲ. ಈ ಹಿನ್ನೆಲೆಯಲ್ಲಿ ಜನವರಿ 16ರಂದು ಸಿಬಿಐ, ಸಿವಿಸಿ, ಸುಪ್ರಿಂ ಕೋರ್ಟ್ ಮತ್ತು ಚುನಾವಣೆಗಳು ಈ ನಾಲ್ಕರಲ್ಲಿ ಮೋದಿ ಸರಕಾರದ ಕಾನೂನಾತ್ಮಕ ಆಳ್ವಿಕೆಯನ್ನೇ ಅವಹೇಳನ ಮಾಡುವ ನಡೆಗಳ ಬಗ್ಗೆ ಟ್ವೀಟ್ ಪ್ರಚಾರಾಂದೋಲನ ನಡೆಯಿತು. #ModiAgainstRuleOfLaw (ಕಾನೂನುಬದ್ಧ ಆಳ್ವಿಕೆಯ ವಿರುದ್ಧ ಮೋದಿ) ಎಂಬ ಈ ಪ್ರಚಾರಾಂದೋಲನ ಒಂದೂವರೆ ಗಂಟೆಗಳ ಕಾಲ ಟ್ವಿಟರ್‌ನಲ್ಲಿ ಮೊದಲನೇ ಸ್ಥಾನದಲ್ಲಿತ್ತು ಎಂಬುದು ಮೋದಿ ಮತ್ತು ಅವರ ಸರಕಾರದ ನಡೆಯನ್ನು ಹೇಗೆ ಗಮನಿಸಲಾಗುತ್ತಿದೆ ಎಂಬುದನ್ನು ತೋರಿಸುತ್ತದೆ. ಈ ಟ್ವಿಟರ್ ಪ್ರಚಾರಾಂದೋಲನದ ಕೆಲವು ಆಯ್ದ ಸಾಲುಗಳು ನಮ್ಮ ಓದುಗರಿಗಾಗಿ ಇಲ್ಲಿವೆ.

ಸಿ.ಬಿ.ಐ.(ಕೇಂದ್ರೀಯ ತನಿಖಾ ಆಯೋಗ)

* ಸಿ.ಬಿ.ಐ. ಮುಖ್ಯಸ್ಥ ಅಲೋಕ್ ವರ್ಮಾರನ್ನು ಸುಪ್ರಿಂ ಕೋರ್ಟ್ ಅವರನ್ನು ಮರುನೆಲೆಗೊಳಿಸಿದ 48 ಗಂಟೆಗಳೊಳಗೆ ತೆಗೆಯುವ ನಿರ್ಧಾರ ಮಾಡಿರುವುದು

ಸರಕಾರದ ಕಪಾಟುಗಳಲ್ಲಿ ಅಡಗಿಸಿಟ್ಟ "ಅಸ್ಥಿಪಂಜರಗಳು" ಹೊರಬೀಳದಂತೆ ತಡೆಯಲು ಸಿಬಿಐ ಮೇಲೆ ತನ್ನ ಹತೋಟಿ ಇರುವಂತೆ ಮಾಡಲಿಕ್ಕಾಗಿ.

* ಅಲೋಕ್ ವರ್ಮರವರನ್ನು ತರಾತುರಿಯಿಂದ ತೆಗೆಯಲು ಮೋದಿ ಬಳಸಿದ ಸಿ.ವಿ.ಸಿ. ವರದಿಯ ಶೋಧನೆಗಳನ್ನು, ಆ ವಿಚಾರಣೆಯ ಉಸ್ತುವಾರಿ ವಹಿಸಿದ್ದ ನಿವೃತ್ತ ಸುಪ್ರಿಂ ಕೋರ್ಟ್ ನ್ಯಾಯಾಧೀಶರಾದ ನ್ಯಾಯಮೂರ್ತಿ ಪಟ್ನಾಯಕ್ ಒಪ್ಪಿರಲಿಲ್ಲ.



ಮೋದಿಯವರು ಯಾವ ಅಲೋಕ್ ವರ್ಮಾತನಿಖೆಯಿಂದ ಅಷ್ಟೊಂದು ಭೀತರಾಗಿದ್ದರು?

* ಸಿ.ಬಿ.ಐ. ಮುಖ್ಯಸ್ಥರನ್ನು ಒಂದು ಬಲವಾದ ಭಿನ್ನಮತವನ್ನೂ ಬದಿಗೊತ್ತಿ ಮತ್ತು ಅಲೋಕ್ ವರ್ಮ #AlokVerma ರವರಿಗೆ ತನ್ನನ್ನು ರಕ್ಷಿಸಿಕೊಳ್ಳಲು ಒಂದು ಅವಕಾಶವನ್ನೂ ಕೊಡದೆ ತೆಗೆದು ಹಾಕಿರುವುದು

ಸ್ಪಷ್ಟವಾಗಿಯೂ ಸ್ವತಃ ಮೋದಿಯವರ ವಿರುದ್ಧ ಎದ್ದು ಬಂದಿರುವ ಚೇಲಾತನ, ಭ್ರಷ್ಟಾಚಾರ ಮತ್ತು ರಾಷ್ಟ್ರೀಯ ಭದ್ರತೆಗೆ ಸಂಚಕಾರ ಬಯಲಿಗೆ ಬರದಂತೆ ತಡೆಯುವ ಒಂದು ಪ್ರಯತ್ನ.

* ನಾಗೇಶ್ವರ ರಾವ್ ಅವರನ್ನು ತಾತ್ಕಾಲಿಕ ಸಿ.ಬಿ.ಐ. ಮುಖ್ಯಸ್ಥರಾಗಿ ನೇಮಕ ಮಾಡಿರುವುದು ದಿಲ್ಲಿ ವಿಶೇಷ ಪೋಲೀಸ್ ವ್ಯವಸ್ಥೆ ಕಾಯ್ದೆಯಲ್ಲಿ ನಿರ್ದೇಶಿಸಿರುವಂತೆ ಆಯ್ಕೆ ಸಮಿತಿಯ ಶಿಫಾರಸುಗಳ ಆಧಾರದಲ್ಲಿ ಅಲ್ಲ.

ನಾಗೇಶ್ವರ ರಾವ್ ಮೇಲೆ ಹಲವು ಭ್ರಷ್ಟಾಚಾರದ ಆರೋಪಗಳಿವೆ.



ಸಿ.ವಿ.ಸಿ.(ಕೇಂದ್ರೀಯ ವಿಚಕ್ಷಣಾ ಆಯೋಗ/ಆಯುಕ್ತ)

* ಸಿ.ವಿ.ಸಿ. ಮುಖ್ಯಸ್ಥರು ಮೋದಿ ಸರಕಾರದ ಅಪ್ಪಣೆಯಂತೆ ಲಂಚಗುಳಿತನದ ಆರೋಪಿ ರಾಕೇಶ್ ಅಸ್ಥಾನಾ ರವರನ್ನು ಕಾಪಾಡಲು ಪ್ರಯತ್ನಿಸಿದ್ದಾರೆ.

*** ಸಿಬಿಐ ಅಧಿಕಾರಿ ಮನೀಷ್ ಸಿನ್ಹರವರ ಅರ್ಜಿಯ ಪ್ರಕಾರ ಸಿ.ವಿ.ಸಿ. ಮೋಯ್ನ್ ಖುರೇಷಿ ತನಿಖೆಯಲ್ಲಿ ಹಸ್ತಕ್ಷೇಪ ಮಾಡಿದ್ದಾರೆ.**


* ವ್ಹಿಸಲ್ ಬ್ಲೋಯರ್ (ಕುಕೃತ್ಯಗಳ ಸಂಕೇತ ನೀಡುವ) ಐ.ಎಫ್.ಎಸ್.ಅಧಿಕಾರಿ ಮತ್ತು ರಮೋನ್ ಮ್ಯಾಗ್ಸೆಸೆ ಪ್ರಶಸ್ತಿ ವಿಜೇತರಾದ ಸಂಜೀವ್ ಚತುರ್ವೇದಿಯವರು ರಾಷ್ಟ್ರಪತಿಗಳಿಗೆ ಬರೆದಿರುವ ಒಂದು ಅರ್ಜಿ

ಸಿ.ವಿ.ಸಿ. 7000 ಕೋಟಿ ರೂ.ಗಳಷ್ಟು ಮೌಲ್ಯದ ಮೂಲರಚನೆ ಕಾಮಗಾರಿಗೆ ಸಂಬಂಧಪಟ್ಟ ಭ್ರಷ್ಟಾಚಾರದ ಕೇಸುಗಳನ್ನು ಮುಚ್ಚಿದ್ದಾರೆ ಎಂದಿದೆ.

ಸುಪ್ರಿಂ ಕೋರ್ಟ್

* ಸುಪ್ರಿಂ ಕೋರ್ಟಿನ ರಫೇಲ್ ತೀರ್ಪು ರಫೇಲ್ ವ್ಯವಹಾರದ ಬೆಲೆ ವಿವರಗಳನ್ನು ಸಿ.ಎ.ಜಿ.(ಮಹಾಲೆಕ್ಕ ಪರಿಶೋಧಕರು)ಯೊಂದಿಗೆ ಹಂಚಿಕೊಳ್ಳಲಾಗಿದೆ ಮತ್ತು ಪಿ.ಎ.ಸಿ.(ಸಾರ್ವಜನಿಕ ಲೆಕ್ಕಪತ್ರ ಸಮಿತಿ) ಪರೀಕ್ಷಿಸಿದೆ ಎಂದಿದೆ.

ಆದರೆ ಸಿ.ಎ.ಜಿ.ವರದಿ ಎಂಬುದಿಲ್ಲ, ಮತ್ತು ಪಿ.ಎ.ಸಿ.ಅಧ್ಯಕ್ಷರು ತಮಗೆ ಯಾವುದೇ ಸಿ.ಎ.ಜಿ.ವರದಿ ಬಂದಿಲ್ಲ ದಿದ್ದಾರೆ. ರಫೇಲ್ ಹಗರಣವನ್ನು ಮುಚ್ಚಿಹಾಕುವ ಪ್ರಯತ್ನ ತಿರುಗುಬಾಣವಾಗಿದೆ ಎಂಬುದು ಸ್ಪಷ್ಟ.



* ಸಿ.ಎ.ಜಿ.ವರದಿ ಎಂಬುದಿಲ್ಲ ಮತ್ತು ಪಿ.ಎ.ಸಿ.ಗೆ ಏನನ್ನೂ ಕಳಿಸಲಾಗಿಲ್ಲ ಎಂದು ಸರಕಾರವು ಒಪ್ಪಿಕೊಳ್ಳಲೇ ಬೇಕಾಗಿ ಬಂದ ಮೇಲೆ ಇನ್ನಷ್ಟು ಸರಕಾರದ ಸುಳ್ಳುಗಳು ಬಹಿರಂಗಕ್ಕೆ ಬಂದಿವೆ.


ಕಾನೂನು ಮತ್ತು ಸಂವಿಧಾನದ ಪ್ರಕಾರ ಒಂದು ಸಿ.ಎ.ಜಿ. ವರದಿಯನ್ನು ಯಾವುದೇ ವಿಹಿತ ರೂಪಕ್ಕೆ(redact) ಇಳಿಸಲು ಅವಕಾಶವಿಲ್ಲ ಎಂದು ಪರಿಣಿತರು ಮತ್ತು ಅಧಿಕಾರಿಗಳು ಹೇಳುತ್ತಾರೆ.

* ಸುಪ್ರಿಂ ಕೋರ್ಟಿನ ನಾಲ್ವರು ಅತ್ಯಂತ ಹಿರಿಯ ನ್ಯಾಯಾಧೀಶರುಗಳು ಕೇಸುಗಳ ವಿಚಾರಣೆ ನಡೆಸಬೇಕಾದ ನ್ಯಾಯಾಧೀಶರ ಸರದಿ ಪಟ್ಟಿ (ರೋಸ್ಟರ್)ಯನ್ನು ತಯಾರಿಸುವ ರೀತಿಯ ಬಗ್ಗೆ ಆತಂಕಗಳನ್ನು ಎತ್ತಿದ್ದರು.

ಸುಪ್ರಿಂ ಕೋರ್ಟಿನ ರಫೇಲ್ ತೀರ್ಪು ಅಸ್ತಿತ್ವದಲ್ಲೇ ಇರದ ಸಿ.ಎ.ಜಿ. ವರದಿಯನ್ನು ಪಿ.ಎ.ಸಿ.ಯೊಂದಿಗೆ ಹಂಚಿಕೊಳ್ಳಲಾಗಿದೆ ಎಂದಿದೆ.

* ಬಿಜೆಪಿ ಅಧ್ಯಕ್ಷ ಅಮಿತ್ ಷಾ ಶಬರಿಮಲೆ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶದ ಕುರಿತ ಸುಪ್ರಿಂ ಕೋರ್ಟ್ ಆದೇಶಕ್ಕೆ ಸವಾಲು ಹಾಕಿದ್ದಾರೆ ಮತ್ತು ಆ ತೀರ್ಪನ್ನು ಮುರಿಯುವಂತೆ ತಮ್ಮ ಪಕ್ಷದವರನ್ನು ಉದ್ರೇಕಿಸಿದ್ದಾರೆ.

ಸುಪ್ರಿಂ ಕೋರ್ಟ್ ತೀರ್ಪಿನ ಇಂತಹ ಭಂಡ ಪರಿಹಾಸ್ಯ ಸಂವಿಧಾನ ಮತ್ತು ಸುಪ್ರಿಂ ಕೋರ್ಟಿನ ಬಗ್ಗೆ ಆರೆಸ್ಸೆಸ್–ಬಿಜೆಪಿಯ ತುಚ್ಛೀಕಾರದ ನಿಲುವಿಗೆ ಅನುಗುಣವಾಗಿಯೇ ಇದೆ.




* ಮೋದಿಯವರು ಕೇರಳದ ಕೊಲ್ಲಂನ ಒಂದು ಪ್ರಾಜೆಕ್ಟನ್ನು ಉದ್ಘಾಟಿಸುತ್ತ ಶಬರಿಮಲೆ ಕುರಿತಂತೆ ಸುಪ್ರಿಂ ಕೋರ್ಟ್ ಆದೇಶವನ್ನು ಜಾರಿ ಮಾಡಿದ್ದಕ್ಕೆ ಎಲ್.ಡಿ.ಎಫ್ ಸರಕಾರದ ಮೇಲೆ ದಾಳಿ ಮಾಡಿರುವುದು ನಾಚಿಕೆಗೇಡಿನ ಸಂಗತಿ.

ಮೋದಿಯವರು ಮನುಸ್ಮೃತಿ ಮತ್ತು ಆರೆಸ್ಸೆಸ್ ಪ್ರತಿಜ್ಞೆಯ ಬದಲಿಗೆ ತಾವು ಯಾವ ಭಾರತೀಯ ಸಂವಿಧಾನದ ಅಡಿಯಲ್ಲಿ ಪ್ರತಿಜ್ಞೆ ಸ್ವೀಕಾರ ಮಾಡಿದ್ದಾರೋ ಅದನ್ನು ಓದಬೇಕು!

ಚುನಾವಣೆಗಳು

* ಬಿಜೆಪಿ ಕರ್ನಾಟಕ ಸರಕಾರವನ್ನು ಕಳಚಿ ಹಾಕುವ ಮತ್ತು ಕುದುರೆ ವ್ಯಾಪಾರದ ಮೂಲಕ ಒಂದು ಬಹುಮತವನ್ನು ಬಾಚುವ ಪ್ರಯತ್ನಗಳನ್ನು ಮುಂದುವರೆಸುತ್ತಲೇ ಇರುವುದು

ಪ್ರಜಾಪ್ರಭುತ್ವದ ಬಗ್ಗೆ ಅವರ ತುಚ್ಛೀಕಾರವನ್ನು ತೋರಿಸುತ್ತದೆ.



* ಮೋದಿ ಸರಕಾರ ಚುನಾವಣಾ ಆಯೋಗದ ಸ್ವಾತಂತ್ರ್ಯವನ್ನು ಬುಡಮೇಲು ಮಾಡಲು ಪ್ರಯತ್ನಿಸಿದ

2017ರ ಗುಜರಾತ್ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಮೋದಿಯವರಿಗೆ ಆ ರಾಜ್ಯದಲ್ಲಿ ಉದಾರ ಬಕ್ಷೀಸುಗಳನ್ನು ಹಂಚಲು ಅನುವಾಗುವಂತೆ ವೇಳಾಪಟ್ಟಿಯ ಪ್ರಕಟಣೆಯನ್ನು ವಿಳಂಬಗೊಳಿಸಿದ್ದು ಇದಕ್ಕೆ ಒಂದು ಉದಾಹರಣೆ.

* ಇಂತಹ ಹಸ್ತಕ್ಷೇಪದ ಇನ್ನೊಂದು ಉದಾಹರಣೆಯೆಂದರೆ ಲಾಭದ ಹುದ್ದೆಯ ಆರೋಪದ ಮೇಲೆ ದಿಲ್ಲಿಯ ಎ.ಎ.ಪಿ. ಶಾಸಕರನ್ನು ಅತ್ಯಂತ ತರಾತುರಿಯಿಂದ ಅನರ್ಹಗೊಳಿಸಿದ್ದು.

ದಿಲ್ಲಿ ಹೈಕೋರ್ಟ್ ಚುನಾವಣಾ ಆಯೋಗದ ನಿರ್ಧಾರವನ್ನು ತಿರಸ್ಕರಿಸಿತು ಮತ್ತು ಇಡೀ ವಿಷಯದ ಬಗ್ಗೆ ಸಮಗ್ರವಾಗಿ ನೋಡದ ಬಗ್ಗೆ ಛೀಮಾರಿ ಹಾಕಿತು.

* ಮೋದಿ ಸರಕಾರ ವ್ಯಕ್ತಿಗಳು ಮತ್ತು ವಿದೇಶಿ ಒಡೆತನದ ಕಂಪನಿಗಳೂ ಸೇರಿದಂತೆ ಯಾವುದೇ ಕಂಪನಿ ಯಾವುದೇ ರಾಜಕೀಯ ಪಕ್ಷಕ್ಕೆ ಯಾವುದೇ ಮಿತಿಯಿಲ್ಲದೆ ಮತ್ತು ಯಾವುದೇ ರೀತಿಯಲ್ಲಿ ಸಾರ್ವಜನಿಕವಾಗಿ ತಿಳಿಸದೆ ಹಣಕಾಸನ್ನು ಪೂರೈಸಲು,

ಈ ಮೂಲಕ ಪ್ರತ್ಯುಪಕಾರದ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ಅವಕಾಶ ಕಲ್ಪಿಸುವ ಚುನಾವಣಾ ಬಾಂಡುಗಳನ್ನು ಆರಂಭಿಸಲು ಕಾನೂನನ್ನೇ ಬದಲಿಸಿದೆ.




ವ್ಯಂಗ್ಯಚಿತ್ರಗಳ ಕೃಪೆ:
ಸತೀಶ್ ಆಚಾರ್ಯ,
ಪಿ.ಮಹಮ್ಮದ್,
ಮಂಜುಲ್,
ರೆಬೆಲ್ ಪಾಲಿಟಿಕ್ಸ್

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಬುಡಮೇಲು ಮಾಡಲಾಗುತ್ತಿದೆ

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಆರಂಭವು ಸಂಪೂರ್ಣವಾಗಿ ಹೊಸದೊಂದು ಭೂಮಿಕೆಯನ್ನೇ ನಿರ್ಮಿಸಿತು. ಈ ಯೋಜನೆಯಲ್ಲಿ, ಉದ್ಯೋಗ ಒದಗಿಸುವ ಗ್ಯಾರಂಟಿ ಇರುವುದರಿಂದ, ಈ ಪ್ರಕ್ರಿಯೆಯು ಒಂದು ಆರ್ಥಿಕ ಹಕ್ಕು ಸೃಷ್ಟಿಸಿದ್ದೇ ಅಲ್ಲದೆ ನಾಗರೀಕತ್ವದ ಪರಿಕಲ್ಪನೆಗೇ ಒಂದು ಆಳವಾದ ಅರ್ಥ ಒದಗಿಸಿದೆ. ಆದರೆ, ಈ ಯೋಜನೆ ದೇಶದ ಬಡ ಕೂಲಿಕಾರರಿಗೆ ನೀಡಿದ ಭರವಸೆ ಈಗ ಸಂಪೂರ್ಣವಾಗಿ ಹುಸಿಯಾಗಿದೆ. ನಮ್ಮ ಆಳುವ ವರ್ಗಗಳ ಉಗ್ರ ಜಾತಿ–ದ್ವೇಷ ಮತ್ತು ಜಾತಿಯ ಮೇಲೆ ಚಾಚಿ ಕೂತಿರುವ ಉಗ್ರ ವರ್ಗ–ದ್ವೇಷಗಳ ಮನೋಭಾವದ ಪರಿಸ್ಥಿತಿಯಲ್ಲಿ, ಉದ್ಯೋಗದ ಭರವಸೆ ಹುಸಿಯಾಗಿರುವುದು ಆಶ್ಚರ್ಯವಲ್ಲ. ಒಂದು ಬೇಡಿಕೆ–ಚಾಲಿತ ಕಾರ್ಯಕ್ರಮವಾಗಿ ಈ ಯೋಜನೆ ಉಳಿದೇ ಇಲ್ಲ. ಈ ರೀತಿಯಾಗಿ ಜನತೆಯ ಒಂದು ಆರ್ಥಿಕ ಹಕ್ಕನ್ನು ರದ್ದುಮಾಡುತ್ತಿರುವ ಕ್ರಮವು, ಈ ಒಂದು ಹಕ್ಕನ್ನು ಶಾಸನಬದ್ಧಗೊಳಿಸಿದ ಪಾರ್ಲಿಮೆಂಟಿನ ಮೇಲೆ ನಡೆಸಿದ ಹಲ್ಲೆಯೂ ಆಗುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್, ಅನು: ಕೆ.ಎಂ. ನಾಗರಾಜ್



ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತರಲು ಕಾರಣವಾದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯು ಸ್ವತಂತ್ರ ಭಾರತದ ಚರಿತ್ರೆಯಲ್ಲಿಯೇ ಒಂದು ಅನನ್ಯ ಶಾಸನ. ಈ ಕಾಯ್ದೆಯ ಪ್ರಕಾರ, ಗ್ರಾಮೀಣ ಪ್ರದೇಶದ ಒಬ್ಬ ನಿರುದ್ಯೋಗಿ ವ್ಯಕ್ತಿಯು ತನಗೆ ಉದ್ಯೋಗ ಬೇಕೆಂದು ಬೇಡಿಕೆ ಮಂಡಿಸಿದ ಹದಿನೈದು ದಿನಗಳೊಳಗೆ ಸರ್ಕಾರವು ಆ ವ್ಯಕ್ತಿಗೆ ಉದ್ಯೋಗ ಒದಗಿಸಬೇಕು. ತಪ್ಪಿದರೆ, ಆ ವ್ಯಕ್ತಿಗೆ ಕನಿಷ್ಠ ಕೂಲಿಯ ಅರ್ಧದಷ್ಟು ಹಣವನ್ನು ಪರಿಹಾರವಾಗಿ ಕೊಡಬೇಕಾಗುತ್ತದೆ. ಈ ಕಾಯ್ದೆಯ ವ್ಯಾಪ್ತಿ ಗ್ರಾಮೀಣ ಪ್ರದೇಶಕ್ಕೆ ಮಾತ್ರ ಸೀಮಿತವಾಗಿದೆ ಮತ್ತು ಅದು ಒಂದು ಕುಟುಂಬಕ್ಕೆ ಒಂದು ವರ್ಷದಲ್ಲಿ ಕೇವಲ ನೂರು ದಿನಗಳ ಉದ್ಯೋಗ ಒದಗಿಸುತ್ತದೆ ಎಂಬುದು, ನಿಜ. ಆದರೆ, ಉದ್ಯೋಗ ಒಂದು ಹಕ್ಕು ಎಂಬುದನ್ನು ಈ ಕಾಯ್ದೆಯು ಮಾನ್ಯ ಮಾಡಿದೆ. ಪಾರ್ಲಿಮೆಂಟಿನಲ್ಲಿ ನಡೆದ ಒಂದು ವ್ಯಾಪಕವಾದ ಚರ್ಚೆ ಮತ್ತು ಪರಿಶೀಲನೆಯ ನಂತರ ಸರ್ವಾನುಮತದಿಂದ ಈ ಕಾಯ್ದೆ ಅಂಗೀಕಾರ ಪಡೆದಿದೆ. ಈ ಅಂಶವು ಎಂದರೆ, ಭಾರತದ ಸಂವಿಧಾನದಲ್ಲಿದ್ದ ಒಂದು ಲೋಪವನ್ನು ಸರಿಪಡಿಸಲಾಗಿದೆ ಎಂಬುದನ್ನು ಸೂಚಿಸುತ್ತದೆ. ಭಾರತದ ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಕೆಲವು ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳನ್ನು ಒಚಿಖಿಈಖ ಕೊಟ್ಟಿದೆ, ಆರ್ಥಿಕ ಹಕ್ಕುಗಳನ್ನು ಕೊಟ್ಟಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ.

ಆದ್ದರಿಂದ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಆರಂಭವು ಸಂಪೂರ್ಣವಾಗಿ ಹೊಸದೊಂದು ಭೂಮಿಕೆಯನ್ನೇ ನಿರ್ಮಿಸಿತು ಎನ್ನಬಹುದು. ಇದಕ್ಕೂ ಮೊದಲು, ಬಡತನ ನಿವಾರಣೆಗಾಗಿ, 'ಆಹಾರಕ್ಕಾಗಿ ಕೆಲಸ' ಕಾರ್ಯಕ್ರಮವೂ ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಅನಿಶ್ಚಿತವಾಗಿದ್ದ ಈ ಕಾರ್ಯಕ್ರಮಗಳು ಬಜೆಟ್ ಒದಗಿಸುವ ಹಣದ ಮೇಲೆ ನಿಂತಿದ್ದವು ಮತ್ತು ಅವುಗಳಲ್ಲಿ ಉದ್ಯೋಗ ದೊರೆಯುವ ಗ್ಯಾರಂಟಿ ಇರಲೇ ಇಲ್ಲ. ಈ ಕಾರ್ಯಕ್ರಮಗಳನ್ನು ಮುಂದುವರಿಸುವುದಾಗಿ ತೀರ್ಮಾನಿಸಿದಾಗ, ಪ್ರತಿ ವರ್ಷವೂ ಬಜೆಟ್ ನಿಗದಿಪಡಿಸುತ್ತಿದ್ದ ಹಣದಲ್ಲಿ ಏರಿಳಿತಗಳಿದ್ದವು. ಈ ಹಿನ್ನೆಲೆಯಲ್ಲಿ ಆರಂಭವಾಗಿರುವ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಂಪೂರ್ಣವಾಗಿ ಭಿನ್ನವಾಗಿದೆ. ಈ ಯೋಜನೆಯಲ್ಲಿ, ಉದ್ಯೋಗ ಒದಗಿಸುವ ಗ್ಯಾರಂಟಿ ಇರುವುದರಿಂದ, ಈ ಪ್ರಕ್ರಿಯೆಯು ಒಂದು ಆರ್ಥಿಕ ಹಕ್ಕು ಸೃಷ್ಟಿಸಿದ್ದೇ ಅಲ್ಲದೆ ನಾಗರೀಕತ್ವದ ಪರಿಕಲ್ಪನೆಗೇ ಒಂದು ಆಳವಾದ ಅರ್ಥ ಒದಗಿಸಿದೆ. ಅತಿ ದಾರುಣ ಸ್ಥಿತಿಯಲ್ಲಿರುವ ಒಬ್ಬ ಭಿಕ್ಷೆ ಬೇಡುವವನೂ ಸೇರಿದಂತೆ ಪ್ರತಿಯೊಬ್ಬ ನಾಗರಿಕನೂ ಏನೇ ಪದಾರ್ಥ ಕೊಳ್ಳುವಾಗಲೂ ತೆರಿಗೆ ಕೊಡುತ್ತಾರೆ. ಅವರು ಕೊಡುವ ತೆರಿಗೆಗೆ ಪ್ರತಿಯಾಗಿ, ಸರ್ಕಾರವು ಅವರಿಗೆ ಏನನ್ನೂ ಕೊಡುವುದಿಲ್ಲ. ಈ ಪರಿಸ್ಥಿತಿಗೆ ತದ್ವಿರುದ್ಧ ಎನ್ನುವ ರೀತಿಯಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ನಾಗರಿಕರಿಗೆ ಅದರಲ್ಲೂ ಬಡವರಿಗೆ ಒಂದು ಮಟ್ಟದ ಆರ್ಥಿಕ ಭದ್ರತೆ ಒದಗಿಸುವ ಒಂದು ಹೊಸ ಯುಗ ಆರಂಭಿಸಿತು ಎನ್ನಬಹುದು.

ಆದರೆ, ಈ ಭರವಸೆ ಈಗ ಸಂಪೂರ್ಣವಾಗಿ ಹುಸಿಯಾಗಿದೆ. ಈ ಯೋಜನೆಯಲ್ಲಿ ಪ್ರತಿ ವರ್ಷವೂ ಉದ್ಯೋಗ ಪಡೆಯುವವರ ಪೈಕಿ ಸುಮಾರು 40% ಕುಟುಂಬಗಳು ಪರಿಶಿಷ್ಟ ಜಾತಿ/ಪಂಗಡಗಳಿಗೆ ಸೇರಿವೆ ಎಂದು ಅಂದಾಜು ಮಾಡಲಾಗಿದೆ. ಹಾಗಾಗಿ, ನಮ್ಮ ಆಳುವ ವರ್ಗಗಳ ಉಗ್ರ ಜಾತಿ–ದ್ವೇಷ ಮತ್ತು ಜಾತಿಯ ಮೇಲೆ ಚಾಚಿ ಕೂತಿರುವ ಉಗ್ರ ವರ್ಗ–ದ್ವೇಷಗಳ ಮನೋಭಾವದ ಪರಿಸ್ಥಿತಿಯಲ್ಲಿ, ಉದ್ಯೋಗದ ಭರವಸೆ ಹುಸಿಯಾಗಿರುವುದು ಆಶ್ಚರ್ಯವಲ್ಲ. ಉದ್ಯೋಗ ಖಾತ್ರಿ ಯೋಜನೆಯನ್ನು ಬುಡಮೇಲು ಮಾಡುವ ಉದ್ದೇಶದಿಂದ, ಬಜೆಟ್ಟಿನಲ್ಲಿ ಹಣ ಕಡಿತ ಮಾಡುವ ಕೃತ್ಯವನ್ನು ಯುಪಿಎ–2 ಸರ್ಕಾರದಲ್ಲಿ ಹಣ ಕಾಸು ಮಂತ್ರಿಯಾಗಿದ್ದ ಚಿದಂಬರಂ ಆರಂಭಿಸಿದ್ದರು. ಇದೊಂದು ಬೇಡಿಕೆ ಆಧರಿತವಾದ ಯೋಜನೆಯಾಗಿರುವುದರಿಂದ, ಅಗತ್ಯ ಬಿದ್ದರೆ ಹೆಚ್ಚು ಹಣ ಒದಗಿಸಲಾಗುವುದು ಎಂಬುದಾಗಿ ಹೇಳಿ ತಮ್ಮ ಕೃತ್ಯವನ್ನು ಸಮರ್ಥಿಸಿಕೊಂಡಿದ್ದರು. ಆದರೆ, ಇದರಿಂದ ಉಂಟಾದ ಪರಿಣಾಮ ಏನೆಂದರೆ, ಬಜೆಟ್ ಒದಗಿಸುತ್ತಿದ್ದ ಹಣಕ್ಕೂ ಮತ್ತು ಹೆಚ್ಚಿದ ಉದ್ಯೋಗ ಬೇಡಿಕೆಗೂ ತಾಳ–ಮೇಳವಿಲ್ಲದಂತಾಗಿ, ಕೂಲಿಗಾರರಿಗೆ ಕೊಡಬೇಕಾದ ಹಣದ ಬಾಕಿ ಬೆಟ್ಟದಂತೆ ಏರುತ್ತಿದೆ.

ಉದ್ಯೋಗದ ಬೇಡಿಕೆ ಸತತವಾಗಿ ಹೆಚ್ಚುತ್ತಿರುವ ಪರಿಸ್ಥಿತಿಯಲ್ಲಿ, ಈ ಯೋಜನೆಗಾಗಿ ಬಜೆಟ್‌ನಲ್ಲಿ ನಿಗದಿ ಪಡಿಸುವ ಹಣದಲ್ಲಿ ಹೆಚ್ಚಳವಾಗದಿದ್ದರೆ, ಕ್ರಮೇಣ ಕೂಲಿಯ ಬಾಕಿ ಏರುತ್ತದೆ. ಈಗ ಆಗುತ್ತಿರುವುದು ಇದೇ. ಅಂದರೆ, ಕೆಲಸ ಮಾಡಿದ ಕೂಲಿಗಾರರಿಗೆ ಕೊಡಬೇಕಾದ ಬಾಕಿಯ ಮೊತ್ತ ಪ್ರತಿ ವರ್ಷವೂ ಬೆಳೆಯುತ್ತಿದೆ ಹಾಗೂ ಈ ಬಾಕಿಯನ್ನು ಚುಕ್ತಾ ಮಾಡುವ ಅವಧಿಯೂ ಹೆಚ್ಚುತ್ತಿದೆ.

ಕೂಲಿಗಾರರಿಗೆ ಮಾಡಿದ ಕೆಲಸಕ್ಕೆ ಸಕಾಲದಲ್ಲಿ ಕೂಲಿ ವಿತರಣೆ ಮಾಡದೆ ಇದ್ದುದರಿಂದ ನಿರುತ್ಸಾಹಗೊಂಡ ನಿರುದ್ಯೋಗಿಗಳು ಈ ಯೋಜನೆಯಿಂದ ಹೊರಗುಳಿದ ಸಂಗತಿಯಿಂದಾಗಿ ಈ ಯೋಜನೆಯ ಉದ್ಯೋಗಕ್ಕೆ ಬೇಡಿಕೆ ಒಮ್ಮೊಮ್ಮೆ ಇಳಿಯುತ್ತಿತ್ತು. ಅದೇ ಸಮಯದಲ್ಲಿ, ಕೆಲಸಕ್ಕೆ ಸಲ್ಲಿಸಿದ ಅರ್ಜಿಗಳನ್ನು ನೋಂದಣಿ ಮಾಡಿಕೊಳ್ಳದಿರುವುದು ಮತ್ತು ನೊಂದಣಿ ಆದವರಿಗೆ ಉದ್ಯೋಗ ನಿರಾಕರಿಸುವ ಒಂದು ಪ್ರವೃತ್ತಿಯೂ ಬೆಳೆಯಿತು. ಈ ಕಾಯ್ದೆಯಡಿಯಲ್ಲಿ, ಉದ್ಯೋಗ ನಿರಾಕರಣೆಯಾದ ವ್ಯಕ್ತಿಗೆ, ಕನಿಷ್ಠ ಕೂಲಿಯ ಅರ್ಧದಷ್ಟು ಹಣವನ್ನು ಪರಿಹಾರವಾಗಿ ಕೊಡಬೇಕಾಗುತ್ತದೆ. ಬಹಳಷ್ಟು ಮಂದಿಗೆ ಅದನ್ನು ಕೊಟ್ಟಿಲ್ಲ. ಅಷ್ಟೇ ಅಲ್ಲ, ಮಾಡಿದ ಕೆಲಸಕ್ಕೂ ಕಾನೂನಿನ ಪ್ರಕಾರವಾಗಿ ಹದಿನೈದು ದಿನಗಳ ಒಳಗೆ ಕೂಲಿ ಕೊಟ್ಟಿಲ್ಲ. ಕಾನೂನಿನ ಈ ಉಲ್ಲಂಘನೆ ಎದ್ದು ಕಾಣುತ್ತದೆ. ಗ್ಯಾರಂಟಿಯಾಗಿ ಉದ್ಯೋಗ ಒದಗಿಸಬೇಕಿದ್ದ ಮತ್ತು ಬಡವರಿಗೆ ಒಂದು ಮಟ್ಟದ ಆರ್ಥಿಕ ಭದ್ರತೆ ನೀಡುವ ಒಂದು ಆರ್ಥಿಕ ಹಕ್ಕು ಎಂಬಂತಿದ್ದ ಈ ಯೋಜನೆಗೆ ಅಸಡ್ಡೆ ತೋರಿಸುವ ಮೂಲಕ ಅದನ್ನು ವ್ಯವಸ್ಥಿತವಾಗಿ ನಾಶಪಡಿಸಲಾಗುತ್ತಿದೆ. ಈ ಯೋಜನೆಯನ್ನು, ಸರ್ಕಾರದ ಧಾರಾಳ ಕೊಡುಗೆ ಎಂದು ಭಾವಿಸುತ್ತಿದ್ದ, ಮರ್ಜಿಯ ಮೇಲೆ ಹಣ ಒದಗಿಸುತ್ತಿದ್ದ ಮತ್ತು ಅನಿಶ್ಚಿತವಾಗಿದ್ದ ಬಡತನ ನಿವಾರಣೆಯ ಹಿಂದಿನ ಕಾರ್ಯಕ್ರಮಗಳ ಮಟ್ಟಕ್ಕೆ ಇಳಿಸಲಾಗಿದೆ.

ಖಚಿತವಾಗಿ ಹೇಳುವುದಾದರೆ, ಈ ಯೋಜನೆಯನ್ನು ಬಡತನ ನಿರ್ಮೂಲನೆಯ ಒಂದು ಕಾರ್ಯಕ್ರಮ ಎಂದೇ ಪರಿಗಣಿಸಿದರೂ ಸಹ, ಅದೊಂದು ಸಾರಭೂತವಾದ ಹಾಗೂ ಗಣನೀಯ ಪ್ರಮಾಣದ ಕೊಡುಗೆ ನೀಡುವ ಕಾರ್ಯಕ್ರಮವೇ. ಈ ಯೋಜನೆ ಆರಂಭವಾದ ಮೇಲೆ ಈ ದೇಶದ ಮೂರರಲ್ಲಿ ಒಂದು ಕುಟುಂಬಕ್ಕೆ ಒಮ್ಮೆಯಾದರೂ ಉದ್ಯೋಗ ಒದಗಿಸಿದೆ. 2017–18ರ ವರ್ಷದಲ್ಲೇ ಸುಮಾರು ಎಂಟು ಕೋಟಿ ಕುಟುಂಬಗಳಿಗೆ, ಸರಾಸರಿ 46 ದಿನಗಳ ಉದ್ಯೋಗ ಒದಗಿಸಿದೆ. ವಿಶ್ವದಲ್ಲೇ ಅತಿ ದೊಡ್ಡ ಉದ್ಯೋಗ ಸೃಷ್ಟಿಯ ಕಾರ್ಯಕ್ರಮವಿದು.

ಈ ಯೋಜನೆಗೆ ಒದಗಿಸುವ ಹಣವನ್ನು ಸರ್ಕಾರವು ಸತತವಾಗಿ ಇಳಿಕೆ ಮಾಡುತ್ತಿರುವುದರಿಂದಾಗಿ, ಸ್ಪಷ್ಟವಾಗಿ ಇದು ಉದ್ಯೋಗ ಗ್ಯಾರಂಟಿ ಯೋಜನೆ ಅಲ್ಲವೆಂದರೂ ಸಹ, ಒಂದು ಉದ್ಯೋಗ ಸೃಷ್ಟಿಸುವ ಕಾರ್ಯಕ್ರಮವಾಗಿಯೂ ಇದರ ಗಾತ್ರ ಬರು ಬರುತ್ತಾ ಕುಗ್ಗುತ್ತಲೇ ಇದೆ. ಈಗಾಗಲೇ ಸಾಕಷ್ಟು ಕುಗ್ಗಿದೆ. ಒಂದು ವೇಳೆ, ಈ ಯೋಜನೆಗೆ ನಿಗದಿಪಡಿಸುವ ಹಣದಲ್ಲಿ ಯಾವ ವ್ಯತ್ಯಾಸ ಇಲ್ಲದಿದ್ದರೂ ಸಹ, ಆ ಮೊತ್ತವು ಸದರಿ ವರ್ಷದ ಅಗತ್ಯಕ್ಕಿಂತ ಕಡಿಮೆ ಇದ್ದರೆ, ಕೂಲಿಗಾರರಿಗೆ ಕೊಡಬೇಕಿರುವ ಬಾಕಿಯ ಮೊತ್ತವು ವರ್ಷ ವರ್ಷ ಹೆಚ್ಚುತ್ತಲೇ ಇದೆ. ಹಾಗಾಗಿ, ಒಂದು ನಿರ್ದಿಷ್ಟ ವರ್ಷದ ನಿಗದಿತ ಮೊತ್ತದಲ್ಲಿ ಹಿಂದಿನ ವರ್ಷದ ಕೂಲಿ ಬಾಕಿಯ ಮೊತ್ತವನ್ನು ಕಳೆದರೆ, ನಿವ್ವಳ (ಉಳಿದದ್ದು) ಮೊತ್ತವು ಬಹಳಷ್ಟು ಸಣ್ಣದಿರುತ್ತದೆ. ಈಗ ಆಗುತ್ತಿರುವುದು ಏನೆಂದರೆ, ನಿಗದಿಪಡಿಸುತ್ತಿರುವ ಮೊತ್ತವೇ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಉದಾಹರಣೆಗೆ, ಬೆಲೆ ಏರಿಕೆಗೆ ಹೊಂದಿಸಿದ ಲೆಕ್ಕದಲ್ಲಿ, 2016–17ರಲ್ಲಿ ನಿಗದಿಪಡಿಸಿದ ಮೊತ್ತವು 2010–11ರ ಮೊತ್ತಕ್ಕಿಂತ ಕಡಿಮೆ ಇದೆ. ಪರಿಣಾಮವಾಗಿ, 2016–17 ವರ್ಷದಲ್ಲಿ, ಕೂಲಿಯ ಒಟ್ಟು ವಿತರಣೆಯಲ್ಲಿ/ಪಾವತಿಯಲ್ಲಿ, 56% ಕೂಲಿಯನ್ನು ತಡವಾಗಿ ವಿತರಿಸಲಾಗಿದೆ. ಹೋಲಿಕೆಗಾಗಿ ಹೇಳುವುದಾದರೆ, 2012–13ರಲ್ಲಿ, ತಡವಾಗಿ ವಿತರಿಸಿದ ಕೂಲಿಯ ಪ್ರಮಾಣ 39% ಇತ್ತು.

ಒಂದು ವೇಳೆ, ಹಿಂದಿನ ವರ್ಷಗಳ ಕೂಲಿಯ ಬಾಕಿಯನ್ನು ಪ್ರತ್ಯೇಕಿಸಿ/ಪಕ್ಕಕ್ಕಿಟ್ಟು ನೋಡಿದರೂ ಸಹ, ಈ ಯೋಜನೆಗೆ ಬಜೆಟ್‌ನಲ್ಲಿ ನಿಗದಿಯಾಗುತ್ತಿರುವ ಮೊತ್ತವು ವರ್ಷ ವರ್ಷವೂ ಇಳಿಯುತ್ತಲೇ ಇದೆ. ಈ ಯೋಜನೆಗೆ ನಿಗದಿಯಾಗುತ್ತಿರುವ ಮೊತ್ತವನ್ನು ಜಿಡಿಪಿಯೊಂದಿಗೆ ಹೋಲಿಸಿದರೆ, ನಿಗದಿಯಾಗುತ್ತಿರುವ ಹಣದ ಪ್ರಮಾಣ ತೀವ್ರವಾಗಿ ಇಳಿಯುತ್ತಿರುವುದು ಎದ್ದು ಕಾಣುತ್ತದೆ. ಈ ಯೋಜನೆಯನ್ನು ತಕ್ಕ ರೀತಿಯಲ್ಲಿ ಅನುಷ್ಠಾನಗೊಳಿಸುವುದಾದರೆ, ಜಿಡಿಪಿಯ 1.7% ಹಣವನ್ನು ತೆಗೆದಿಡಬೇಕಾಗುತ್ತದೆ ಎಂದು ವಿಶ್ವ ಬ್ಯಾಂಕ್ ಅಂದಾಜುಮಾಡಿತ್ತು. ಅದಕ್ಕೆ ತದ್ವಿರುದ್ಧ ಎಂಬಂತೆ, 2017–18 ರಲ್ಲಿ ಈ ಯೋಜನೆಗೆ ಜಿಡಿಪಿಯ 0.28% ಹಣ ನಿಗದಿಪಡಿಸಲಾಗಿತ್ತು. ಈ ಸಂಬಂಧವಾಗಿ ಹೇಳುವುದಾದರೆ, ಜಿಡಿಪಿಯ 0.58% ನಿಗದಿಯಾಗಿದ್ದ 2010–11 ವರ್ಷವೇ ಉತ್ತಮ ಎನ್ನಬಹುದು. ಹಿಂದಿನ ವರ್ಷಗಳ ಬಾಕಿಯನ್ನು ಹೊರತುಪಡಿಸಿ, ವಾಸ್ತವಿಕವಾಗಿ ಈ ಯೋಜನೆಗೆ ತಗುಲಿದ್ದ ಖರ್ಚು, ಈ ರೀತಿ ಇದೆ:

2011–12 ರಲ್ಲಿ ಜಿಡಿಪಿಯ 0.34%,
2012–13 ರಲ್ಲಿ 0.36%
ಮತ್ತು 2016–17 ರಲ್ಲಿ 0.30%.

ಆದ್ದರಿಂದ, ಯಾವ ರೀತಿಯಲ್ಲಿ ನೋಡಿದರೂ, ಈ ಯೋಜನೆಗೆ ಒದಗಿಸಿದ ಹಣ, ಜಿಡಿಪಿಯೊಂದಿಗೆ ಹೋಲಿಸಿದಾಗ, ಇಳಿಯುತ್ತಿರುವುದು ಸ್ಪಷ್ಟವಾಗುತ್ತದೆ.

ಕೂಲಿ ವಿತರಣೆಯಲ್ಲಿ ಆಗುತ್ತಿರುವ ವಿಳಂಬವನ್ನು ಸರ್ಕಾರ ಅಲ್ಲಗಳೆಯುತ್ತದೆ. ಈ ಯೋಜನೆಯ ಒಟ್ಟು ಕೂಲಿಯ 90% ಭಾಗವನ್ನು 15ದಿನಗಳೊಳಗೆ ವಿತರಿಸಲಾಗಿದೆ ಎನ್ನುವ ಸರ್ಕಾರದ ದಾವೆಯು ಬರಿಗಣ್ಣಿಗೆ ಕಾಣುವ ಅಸತ್ಯ. ಕೂಲಿ ವಿತರಣೆಯ ವಿಳಂಬದ ಬಗ್ಗೆ, ಡೆಲ್ಲಿಯ ಒಂದು ಸರಕಾರೇತರ ಸಂಸ್ಥೆಯ(ಎನ್‌ಜಿಒ) ಸಂಶೋಧಕರ ಒಂದು ತಂಡವು ಕೈಗೊಂಡ ವಿವರವಾದ ಅಧ್ಯಯನದ (ಸುಮಾರು 3500 ಗ್ರಾಮ ಪಂಚಾಯ್ತಿಗಳ ಕೂಲಿ ಪಾವತಿಯ ವಿವರ ಸಂಗ್ರಹಿಸಿದೆ) ವಿವರಗಳನ್ನು ಜನವರಿ ನಾಲ್ಕರಂದು ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ಬಿಡುಗಡೆಮಾಡಿದೆ. ಕೂಲಿ ವಿತರಣೆಯಲ್ಲಿ ಸರಾಸರಿ 50 ದಿನಗಳ ವಿಳಂಬ ಆಗುತ್ತಿದೆ ಎಂದು ಅವರು ಹೇಳುತ್ತಾರೆ. ಹಲವಾರು ಅಡ್ಡಿ ಅಡಚಣೆಗಳನ್ನು ಎದುರಿಸುತ್ತಿರುವ ಈ ಯೋಜನೆಯ ಕೆಲಸಗಾರರಿಗೆ ಕೂಲಿ ವಿತರಣೆಯಲ್ಲಿ ಆಗುತ್ತಿರುವ ವಿಳಂಬವು ಗಾಯದ ಮೇಲೆ ಬರೆ ಎಳೆದಂತಾಗಿದೆ. ಅಷ್ಟಾಗಿಯೂ, ಆ ಕೂಲಿಯನ್ನು ಕೈಯಲ್ಲಿ ಪಡೆಯಲು ಆಧಾರ್ ಜೋಡಣೆ ಮುಂತಾದ ತೊಡಕುಗಳು ಉದ್ಯೋಗ ಬೇಡಿಕೆ ಕುಂಠಿತವಾಗುವುದಕ್ಕೆ ಕಾರಣವಾಗಿವೆ.

ಬೇಡಿಕೆ ಮಂಡಿಸಿದಾಗಲೂ ಉದ್ಯೋಗ ಒದಗಿಸುತ್ತಿಲ್ಲ. ಅಂತಹ ಸಂದರ್ಭದಲ್ಲಿ ಕಾನೂನು ಪ್ರಕಾರ ಕೊಡಬೇಕಾಗಿರುವ ನಿರುದ್ಯೋಗ ಭತ್ಯೆಯನ್ನೂ ಕೊಡುತ್ತಿಲ್ಲ. ವಾಸ್ತವವಾಗಿ, ಒಂದು ಬೇಡಿಕೆ–ಚಾಲಿತ ಕಾರ್ಯಕ್ರಮವಾಗಿ ಈ ಯೋಜನೆ ಉಳಿದೇ ಇಲ್ಲ. ಯೋಜನೆಗೆ ಹಣ ಒದಗಿಸುವ ಪ್ರಮಾಣ ಎಷ್ಟು ಕಡಿಮೆಯಾಗುತ್ತಿದೆಯೋ ಅಷ್ಟೇ ಕಡಿಮೆ ಪ್ರಮಾಣದಲ್ಲಿ ಅದು ಅನುಷ್ಠಾನಗೊಳ್ಳುತ್ತಿದೆ. ಒಂದು ಬೇಡಿಕೆ–ಚಾಲಿತ ಕಾರ್ಯಕ್ರಮಕ್ಕೆ ಸಂಪನ್ಮೂಲಗಳ ಕೊರತೆ ಇದೆ ಎಂದು ಹೇಳುವದೇ ಒಂದು ವಿರೋಧಾಭಾಸ. ಈ ಯೋಜನೆಯಡಿಯಲ್ಲಿ, ಒಂದು ಆರ್ಥಿಕ ಹಕ್ಕಿನ ನೆಲೆಯಲ್ಲಿ ಜನತೆ ಉದ್ಯೋಗ ಕೇಳುವುದರಿಂದ, ಬಜೆಟ್‌ನಲ್ಲಿ ಅದಕ್ಕೆ ಪ್ರಥಮ ಆದ್ಯತೆ ಕೊಡಬೇಕಾಗುತ್ತದೆ. ಏಕೆಂದರೆ, ಹಕ್ಕುಗಳನ್ನು ಹಣದ ಲಭ್ಯತೆಗೆ ಹೊಂದಿಸಿಕೊಂಡು ಬಳಸಲಾಗದು. ಜನತೆಯ ಯಾವುದೇ ಹಕ್ಕುಗಳಿಗೆ ಸಂಬಂಧಿಸದ ಕೆಲವು ವೆಚ್ಚಗಳನ್ನು ಬಜೆಟ್‌ನಲ್ಲಿ ಮೊಟಕುಗೊಳಿಸುವ ಮೂಲಕವಾದರೂ ಸರಿಯೇ, ಬಡ ಜನತೆಯ ಈ ಒಂದು ಆರ್ಥಿಕ ಹಕ್ಕು ಸಂಬಂಧಿತ ಕಾರ್ಯಕ್ರಮಕ್ಕೆ ಹಣ ಒದಗಿಸುವ ಹೊಣೆಗಾರಿಕೆಗೆ ಸರ್ಕಾರ ಒಳಪಟ್ಟಿದೆ. ಆದರೆ, ಸರ್ಕಾರ ನೆಡೆದುಕೊಳ್ಳುತ್ತಿರಮ ರೀತಿ ಅದಕ್ಕೆ ವ್ಯತಿರಿಕ್ತವಾಗಿದೆ. ಬೇರೆ ಕೆಲವು ಖರ್ಚುಗಳಿಗೆ ಆದ್ಯತೆ ಕೊಟ್ಟಿರುವ ಸರ್ಕಾರ, ಈ ಕಾರ್ಯಕ್ರಮಕ್ಕೆ ಉಳಿದ ಚಿಲ್ಲರೆ ಕಾಸು ಒದಗಿಸುತ್ತಿದೆ. ಈ ಯೋಜನೆಗೆ ಅದು ಎಷ್ಟೂ ಸಾಲದು.

ಡೆಲ್ಲಿಯ ಎನ್‌ಜಿಒ ತಂಡದ ಅಧ್ಯಯನದ ಪ್ರಕಾರ, ಉದ್ಯೋಗದ ಅರ್ಜಿ ಸಲ್ಲಿಸಿದವರೆಂದು ಅಧಿಕೃತವಾಗಿ ನೋಂದಣಿಯಾದವರ ಪೈಕಿ, ಕೇವಲ 68% ಮಂದಿಗೆ ಉದ್ಯೋಗ ಒದಗಿಸಲಾಗಿದೆ. (ವಾಸ್ತವವಾಗಿ, ಒಂದಲ್ಲಾ ಒಂದು ಕುಂಟು ನೆಪದ ಮೇಲೆ ಬಹಳಷ್ಟು ಮಂದಿಯ ಹೆಸರನ್ನು ನೊಂದಾಯಿಸಿಕೊಳ್ಳುವುದೇ ಇಲ್ಲ) ಅಂದರೆ, ಉದ್ಯೋಗ ಬೇಕೆಂದು ನೋಂದಾಯಿಸಿಕೊಂಡವರಲ್ಲಿ, ಎಷ್ಟು ಮಂದಿ ಉದ್ಯೋಗ ದೊರೆಯಿತೆಂದು ಸಮಾಧಾನಪಟ್ಟರೋ ಅದರ ಅರ್ಧದಷ್ಟು ಮಂದಿ ಅಸಮಾಧಾನಕ್ಕೊಳಗಾದರು. ಅಸಮಾಧಾನಕ್ಕೊಳಗಾದವರ ಸಂಖ್ಯೆ ಏರುತ್ತಲೇ ಇದೆ.

ಈ ರೀತಿಯಾಗಿ ಜನತೆಯ ಒಂದು ಆರ್ಥಿಕ ಹಕ್ಕನ್ನು ರದ್ದುಮಾಡುತ್ತಿರುವ ಕ್ರಮವು, ಈ ಒಂದು ಹಕ್ಕನ್ನು ಶಾಸನಬದ್ಧಗೊಳಿಸಿದ ಪಾರ್ಲಿಮೆಂಟಿನ ಮೇಲೆ ನಡೆಸಿದ ಹಲ್ಲೆಗೆ ಸಮನಾಗುತ್ತದೆ. ಅಷ್ಟೇ ಅಲ್ಲ, ಈ ಯೋಜನೆಯನ್ನು ಉದ್ಯೋಗ ಸೃಷ್ಠಿಯ ಒಂದು ಸರಳ ಕಾರ್ಯಕ್ರಮವೆಂದು ಪರಿಗಣಿಸಿದರೂ ಸಹ ದಿನ ಕಳೆದಂತೆ ಅದರ ಗಾತ್ರವನ್ನು ಕುಗ್ಗಿಸಲಾಗುತ್ತಿದೆ.

ದೇಶದಲ್ಲಿ ನಿರುದ್ಯೋಗ ರಭಸವಾಗಿ ಏರುತ್ತಿರುವ ವಿದ್ಯಮಾನವು ಎಲ್ಲರ ಗಮನವನ್ನು ಇತೀಚೆಗೆ ಬಹಳ ಜೋರಾಗಿಯೇ ಸೆಳೆದಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ನಿರುದ್ಯೋಗದ ವಿರುದ್ಧ ಒಂದು ಪರಿಣಾಮಕಾರಿ ಆಯುಧವಾಗಬಲ್ಲದು. ಏಕೆಂದರೆ, ಈ ಯೋಜನೆಯ ಪ್ರಾಮಾಣಿಕ ಅನುಷ್ಠಾನವು ಅರ್ಥವ್ಯವಸ್ಥೆಯನ್ನು ಅದೆಷ್ಟು ಉದ್ದೀಪನಗೊಳಿಸಬಲ್ಲದು ಎಂದರೆ, ಸರ್ಕಾರದ ಬೇರೆ ಎಲ್ಲ ವೆಚ್ಚಗಳ ಮೂಲಕ ಆಗುವುದಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾಗಬಲ್ಲದು. ನಿರುದ್ಯೋಗವನ್ನು ತಡೆಯುವ ಕಾಳಜಿ ಇದ್ದರೆ, ಗ್ರಾಮೀಣ ಉದ್ಯೋಗ ಯೋಜನೆಯನ್ನು ನಿತ್ರಾಣಗೊಳಿಸುವುದರ ಬದಲು ಅದರ ಮೇಲೆ ಸರ್ಕಾರ ಇನ್ನೂ ಹೆಚ್ಚು ಹಣ ಖರ್ಚುಮಾಡುತ್ತಿತ್ತು. ಆದರೆ ಬಾಯಿ ಮಾತಿನ ಉಪಚಾರವೇ ಇಂದಿನ ರೀತಿ. ●

ಅಸ್ಸಾಂ: ಪೌರತ್ವ ತಿದ್ದುಪಡಿ ಮಸೂದೆಯ ವಿರುದ್ಧ ವ್ಯಾಪಕಗೊಳ್ಳುತ್ತಿರುವ ಪ್ರತಿಭಟನೆ



ಮೋದಿ ಸರಕಾರ ಸಂಸತ್ತಿನಲ್ಲಿ ಮಂಡಿಸಿರುವ ಪೌರತ್ವ ತಿದ್ದುಪಡಿ ಮಸೂದೆಯ ವಿರುದ್ಧದ ಅಸ್ಸಾಂ ಜನತೆಯ ಪ್ರತಿಭಟನೆಗಳು ತೀವ್ರಗೊಳ್ಳುತ್ತಿವೆ. ಕಳೆದ ವಾರ ರಾಜ್ಯದ ಹಿರಿಯ ಬುದ್ಧಿಜೀವಿ ಹಿರೇನ್ ಗೋಹೈನ್ ಮತ್ತಿತರ ಇಬ್ಬರ ಮೇಲೆ ರಾಜದ್ರೋಹದ ಆರೋಪ ಹೊರಿಸುವ ಮಟ್ಟಕ್ಕೆ ಇಲ್ಲಿಯ ಬಿಜೆಪಿ ಸರಕಾರ ಹೋಗಿರುವುದರಿಂದಾಗಿ ಜನಗಳ ಆಕ್ರೋಶ ಮೇರೆ ಮೀರಿದೆ.

ಅದೀಗ ಇದುವರೆಗೆ ಬಿಜೆಪಿಯನ್ನು ಬೆಂಬಲಿಸುತ್ತಿದ್ದವರನ್ನು ಮಾತ್ರವಲ್ಲ, ಸ್ವತಃ ಬಿಜೆಪಿಯನ್ನೇ ತಟ್ಟಿದೆ. ಕೇಂದ್ರ ಗೃಹಮಂತ್ರಿಗಳು ಈ ಮಸೂದೆಯ ಬಗ್ಗೆ 'ತಪ್ಪು ತಿಳುವಳಿಕೆ'ಯನ್ನು ನಿವಾರಿಸಲು ಅಲ್ಲಿಗೆ ಹೋದರೂ ಪ್ರಯೋಜನವಾದಂತಿಲ್ಲ. ಈಗ ಪಕ್ಷದ ಪ್ರಧಾನ ಕಾರ್ಯದರ್ಶಿ ರಾಂ ಮಾಧವ ಅಲ್ಲಿಗೆ ಹೋಗಿದ್ದಾರೆ. ತಮ್ಮ ಮಿತ್ರ ಪಕ್ಷಗಳಿಗೆ ಮತ್ತು ಸ್ವತಃ ತಮ್ಮ ಶಾಸಕರಿಗೆ ಮನವರಿಕೆ ಮಾಡಿಸುವ ವಿಶ್ವಾಸ ಅವರಿಗಿದೆಯಂತೆ. ಈ ತಿದ್ದುಪಡಿ ಮುಸ್ಲಿಮೇತರ ಕಾನೂನುಬಾಹಿರ ವಲಸಿಗರಿಗೆ ಪೌರತ್ವ ಕೊಡುವ ಬಗ್ಗೆ ಹೇಳುವ ಮೂಲಕ ಅಸ್ಸಾಂ ಒಪ್ಪಂದವನ್ನು ಅರ್ಥಹೀನಗೊಳಿಸಿದೆ ಎಂಬುದೇ ಪ್ರತಿಭಟನಾಕಾರರ ಆಕ್ರೋಶ.



2016ರಲ್ಲಿ ಚುನಾವಣಾ ಪ್ರಚಾರದಲ್ಲಿ ಬಿಜೆಪಿಯ ಪ್ರಚಾರಗೀತೆಯನ್ನು ಹಾಡಿದ್ದ ಝುಬೀನ್ ಗರ್ಗ್ ಮುಖ್ಯಮಂತ್ರಿಗಳಿಗೆ ಬಹಿರಂಗ ಪತ್ರ ಬರೆದು ಈ ಮಸೂದೆಯನ್ನು ರದ್ದು ಮಾಡುವಂತೆ ಆಗ್ರಹಿಸಿದ್ದಾರೆ. ಈ ಪತ್ರಕ್ಕೆ ಸ್ಪಂದಿಸದ ಮುಖ್ಯಮಂತ್ರಿಗಳಿಗೆ ಬಹುಶಃ ತನಗೆ ತೋರಿಸುತ್ತಿರುವ ಕಪ್ಪು ಬಾವುಟಗಳ ಲೆಕ್ಕ ಇಡುವ ಮಧ್ಯೆ ಸಮಯ ಸಿಕ್ಕಿರಲಿಕ್ಕಿಲ್ಲ ಎಂದು ಗೇಲಿ ಮಾಡಿರುವ ಅವರು, ತನ್ನ ಹಾಡಿನಿಂದಾಗಿ ಬಿಜೆಪಿ ಪಡೆದ ಮತಗಳನ್ನು ಹಿಂದಕ್ಕೆ ಕೊಡಬೇಕು, ಅದನ್ನು ಹಾಡಲು ತಗೊಂಡಿರುವ ಪ್ರತಿಫಲವನ್ನು ಹಿಂದಿರುಗಿಸುವುದಾಗಿ ಲೇವಡಿ ಮಾಡಿದ್ದಾರೆ.

ಈ ನಡುವೆ ಗರ್ಗ್ ಹೇಳಿರುವಂತೆ ಮುಖ್ಯಮಂತ್ರಿ ಸೊನೊವಾಲ್ ಹಲವೆಡೆ ಕಪ್ಪು ಬಾವುಟಗಳ ಪ್ರದರ್ಶನಗಳನ್ನು ಎದುರಿಸಬೇಕಾಗಿ ಬಂದಿದೆ.

ಬಿಜೆಪಿ ಶಾಸಕ ಪದ್ಮ ಹಝಾರಿಕರವರು ಪಕ್ಷದ ಸದಸ್ಯರನ್ನು ಉದ್ದೇಶಿಸಿ ಮಾತಾಡುತ್ತ ತಾನು ಈ ಮಸೂದೆಯನ್ನು ಒಪ್ಪುವುದಿಲ್ಲ ಎಂದಿರುವುದಾಗಿ ವರದಿಯಾಗಿದೆ. ಬಾರ್ಪೆಟ ಜಿಲ್ಲಾ ಬಿಜೆಪಿ ಘಟಕದ ಇಬ್ಬರು ಪದಾಧಿಕಾರಿಗಳು ರಾಜೀನಾಮೆ ಕೊಟ್ಟಿರುವುದಾಗಿ ವರದಿಯಾಗಿದೆ. ಇನ್ನಿಬ್ಬರು ಬಿಜೆಪಿ ಶಾಸಕರು ಬಹಿರಂಗವಾಗಿ ಈ ಮಸೂದೆಯನ್ನು ವಿರೋಧಿಸಿರುವುದಾಗಿ ವರದಿಯಾಗಿದೆ.

ಎಡಪಕ್ಷಗಳ ಜಂಟಿ ವೇದಿಕೆಯಾದ ಎಲ್‌ಡಿಎಂ ರಾಜ್ಯಾದ್ಯಂತ ಈ ಮಸೂದೆಯ ವಿರುದ್ಧ ಬೃಹತ್ ಪ್ರತಿಭಟನೆಗಳನ್ನು ಸಂಘಟಿಸುತ್ತಿದೆ. ರಾಜ್ಯದ ಪ್ರತಿಷ್ಠಿತ ಲೇಖಕರು, ಕಲಾವಿದರು, ಮತ್ತಿತರರು ಇವುಗಳಲ್ಲಿ ಭಾಗವಹಿಸುತ್ತಿದ್ದಾರೆ.

ಮೇಘಾಲಯದ ಮುಖ್ಯಮಂತ್ರಿಗಳು ತಮ್ಮ ಸಂಪುಟದ ಬಿಜೆಪಿ ಮಂತ್ರಿಯೊಂದಿಗೆ ಈ ಮಸೂದೆಯನ್ನು ಹಿಂತೆಗೆದುಕೊಳ್ಳುವಂತೆ ಆಗ್ರಹಿಸಲು ದಿಲ್ಲಿಗೆ ಹೋದರು. ಮಣಿಪುರದಲ್ಲೂ ಬಿಜೆಪಿ ಇರುವ ಸಮ್ಮಿಶ್ರ ಸರಕಾರವೂ ಈ ಮಸೂದೆಯನ್ನು ಹಿಂತೆಗೆದುಕೊಳ್ಳಲು ಆಗ್ರಹಿಸುತ್ತಿದೆ. ಈಗಾಗಲೇ ಅಸ್ಸಾಂ ಗಣ ಪರಿಷದ್ ಎನ್‌ಡಿಎ ತ್ಯಜಿಸಲು ನಿರ್ಧರಿಸಿದೆ. ಅಸ್ಸಾಂ ಒಪ್ಪಂದದ 6ನೇ ಪರಿಚ್ಛೇದದ ಕುರಿತು ಕೇಂದ್ರ ಗೃಹ ಮಂತ್ರಾಲಯ ನೇಮಿಸಿರುವ ಸಮಿತಿಯಲ್ಲಿ ಅರ್ಧದಷ್ಟು ಮಂದಿ ಅದನ್ನು ಸೇರಲು ನಿರಾಕರಿಸಿದ್ದಾರೆ. ಪೌರತ್ವ ತಿದ್ದುಪಡಿ ಮಸೂದೆಯ ನಂತರ ಅಸ್ಸಾಂ ಒಪ್ಪಂದವೇ ಅರ್ಥಹೀನವಾಗುತ್ತದೆಯಾದ್ದರಿಂದ ಈ ಸಮಿತಿ ನಿಷ್ಪ್ರಯೋಜಕ ಎಂಬುದು ಅವರ ತರ್ಕ.

51 ಮಹಿಳೆಯರಿಂದ ಶಬರಿಮಲೆ ದೇವಸ್ಥಾನ ಪ್ರವೇಶ

ಭದ್ರತೆ ಮುಂದುವರೆಸುವಂತೆ ಸುಪ್ರಿಂ ಕೋರ್ಟ್ ಸಲಹೆ

ಜನವರಿ 2ರಂದು ಶಬರಿಮಲೆ ದೇವಸ್ಥಾನ ಪ್ರವೇಶಿಸಿದ ಇಬ್ಬರು ಮಹಿಳೆಯರು ತಮಗೆ ಬೆದರಿಕೆಗಳು ಬಂದಿದ್ದು ರಕ್ಷಣೆ ಕೊಡಬೇಕೆಂದು ಸುಪ್ರಿಂ ಕೋರ್ಟಿಗೆ ಹಾಕಿಕೊಂಡ ಅರ್ಜಿಯ ಸಂದರ್ಭದಲ್ಲಿ ಕೇರಳ ಸರಕಾರದ ವಕೀಲರು ಒದಗಿಸಿದ ಮಾಹಿತಿಯ ಪ್ರಕಾರ 10ರಿಂದ 50 ವರ್ಷದ ಒಳಗಿನ 51 ಮಹಿಳೆಯರು ದೇವಸ್ಥಾನ ಪ್ರವೇಶಿಸಿದ್ದಾರೆ ಎಂದು ಮಾಹಿತಿ ಒದಗಿಸಿದ್ದಾರೆ. ಆನ್‌ಲೈನ್ ಪ್ರವೇಶ ನೋಂದಣಿಯ ಆಧಾರದಲ್ಲಿ ಈ ಮಾಹಿತಿ ಕೊಟ್ಟಿದ್ದಾರೆ ಎನ್ನಲಾಗಿದೆ. ಅಂದರೆ ಆರೆಸ್ಸೆಸ್-ಬಿಜೆಪಿ ನೇತೃತ್ವದ ಪ್ರವೇಶ-ವಿರೋಧಿ ಮಂದಿ ಒಡ್ಡಿದ ಅಡ್ಡಿ-ಆತಂಕಗಳ ನಡುವೆಯೂ ಕನಿಷ್ಠ 51 ಮಹಿಳೆಯರು ತಮ್ಮ ಹಕ್ಕನ್ನು ಚಲಾಯಿಸಿದ್ದಾರೆ.

ಇದು ಒಂದೆಡೆಯಲ್ಲಿ ಮಹಿಳೆಯರ ಪ್ರವೇಶಕ್ಕೆ ಅಡ್ಡಿ ಉಂಟು ಮಾಡುತ್ತಿರುವವರನ್ನು ಮತ್ತು ಇನ್ನೊಂದು ಕಡೆ ಕೇರಳ ಸರಕಾರ ಮಹಿಳೆಯರ ದೇವಸ್ಥಾನ ಪ್ರವೇಶದ ಹಕ್ಕನ್ನು ಎತ್ತಿ ಹಿಡಿಯಲು ಸಾಕಷ್ಟು ಪ್ರಯತ್ನಿಸುತ್ತಿಲ್ಲ ಎಂದು ಟೀಕಿಸುತ್ತಿರುವವರನ್ನೂ ಚಕಿತಗೊಳಿಸಿದೆ ಎನ್ನಲಾಗಿದೆ. ಕೇರಳ ಸರಕಾರ ಸದ್ದಿಲ್ಲದೆ ಸುಪ್ರಿಂ ಕೋರ್ಟ್ ತೀರ್ಪನ್ನು ಜಾರಿಗೊಳಿಸುತ್ತಿದೆ ಎಂಬುದನ್ನು ಇದು ತೋರಿಸುತ್ತಿದೆ ಎಂದು ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ. ಅಲ್ಲದೆ ಸಂಪ್ರದಾಯಶರಣ ಶಕ್ತಿಗಳು ಎಷ್ಟೇ ಪ್ರಚಾರ, ಪ್ರತಿಭಟನೆ, ಬೆದರಿಕೆ ಹಾಕಿದರೂ ಮಹಿಳೆಯರು ಶಬರಿಮಲೆಗೆ ಹೋಗುತ್ತಿದ್ದಾರೆ, ಅವರಿಗೆ ದೇವಸ್ಥಾನ ಪ್ರವೇಶದಲ್ಲಿ ಆಸಕ್ತಿ ಇಲ್ಲವೆನ್ನುವುದೂ ಸುಳ್ಳು ಎಂದೂ ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ.

ವಿಚಾರಣೆಯ ವೇಳೆಯಲ್ಲಿ, ಕೇರಳ ಸರಕಾರದ ಪ್ರತಿನಿಧಿಗಳು ದೇವಸ್ಥಾನ ಪ್ರವೇಶಿಸುವ ಮಹಿಳೆಯರಿಗೆ ಸರಕಾರ ಈಗಾಗಲೇ ರಕ್ಷಣೆ ಒದಗಿಸುತ್ತಿದೆ ಎಂದರು. ಆಗ ವಿಚಾರಣಾ ಪೀಠದಲ್ಲಿದ್ದ ಮುಖ್ಯ ನ್ಯಾಯಾಧೀಶರು ಇದನ್ನು ಮುಂದುವರೆಸಬೇಕೆಂದು ಕೇರಳ ಸರಕಾರಕ್ಕೆ ಹೇಳಿರುವುದಾಗಿ ವರದಿಯಾಗಿದೆ. ದೇಶದ ಪ್ರಧಾನ ಮಂತ್ರಿಗಳು, ಸುಪ್ರಿಂ ಕೋರ್ಟ್ ತೀರ್ಪನ್ನು ಜಾರಿಗೊಳಿಸದ್ದಕ್ಕಾಗಿ ಕೇರಳ ಸರಕಾರವನ್ನು ಟೀಕಿಸಿದ ಎರಡು ದಿನಗಳ ನಂತರ ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರು ಭದ್ರತೆಯನ್ನು ಮುಂದುವರೆಸುವಂತೆ ಹೇಳಿದ್ದಾರೆ ಎಂಬುದು ಗಮನಾರ್ಹ.

ಬಿಹಾರ: ಭೂಮಿ ಪಟ್ಟಾ ಕೇಳುತ್ತಿದ್ದ ದಲಿತರ ಮೇಲೆ ಪೆಟ್ರೋಲ್ ಬಾಂಬ್ ದಾಳಿ

ಬಿಹಾರದ ಸೀತಾಮಢಿ ಜಿಲ್ಲೆಯ ರುನಿಸೈದ್‌ಪುರ್‌ನಲ್ಲಿ ಬಿಡಿಒ ಮತ್ತು ಭೂಮಾಲಕರ ಗೂಂಡಾಗಳು ಭೂಮಿ ಪಟ್ಟಾಕ್ಕಾಗಿ ಚಳುವಳಿ ನಡೆಸುತ್ತಿದ್ದವರ ಮೇಲೆ ಜನವರಿ 16ರಂದು ಬಾಂಬ್ ದಾಳಿ ಮಾಡಿದರು. ಇದರಲ್ಲಿ ಹಲವರು ಗಾಯಗೊಂಡಿದ್ದಾರೆ, ಇಬ್ಬರು ಮಹಿಳಾ ಪ್ರತಿಭಟನಾಕಾರರು ತೀವ್ರವಾದ ಸುಟ್ಟ ಗಾಯಗಳಿಂದ ಗಂಭೀರ ಸ್ಥಿತಿಯಲ್ಲಿದ್ದಾರೆ ಎಂದು ವರದಿಯಾಗಿದೆ. 100ಶೇ. ಸುಟ್ಟ ಗಾಯಗಳ ಬಿಂದಾ ಸಾಹ್ನಿಯನ್ನು ಪಟ್ನಾ ಆಸ್ಪತ್ರೆಗೆ ಸೇರಿಸಲಾಗಿದೆ. ಇನ್ನೊಬ್ಬ ತೀವ್ರ ಸುಟ್ಟ ಗಾಯಗಳ ಅನಾರಿ ದೇವಿ ಭೂಹೀನ ವಿಧವೆಯಾಗಿದ್ದು ಆಕೆಯನ್ನು ಮುಝಫ್ಫರ್‌ಪುರ್ ಆಸ್ಪತ್ರೆಗೆ ಸೇರಿಸಲಾಗಿದೆ.



ಅಖಿಲ ಭಾರತ ಕಿಸಾನ್ ಸಭಾ ಈ ಗೂಂಡಾದಾಳಿಯನ್ನು ಬಲವಾಗಿ ಖಂಡಿಸಿದೆ.

316 ಭೂಹೀನ ದಲಿತ ಮತ್ತು ಇತರ ದಮನಿತ ಕುಟುಂಬಗಳು 10.7 ಎಕ್ರೆ ಭೂಮಿತಿ ಮೀರಿದ ಜಮೀನಿನಲ್ಲಿ ವಾಸವಾಗಿದ್ದಾರೆ. ಈ ಹಿಂದೆ ಅವರು ವಾಸಿಸುವ ಜಾಗದ ಪಟ್ಟಾ ಕೊಡಲು ಗಝೆಟ್ ಅಧಿಸೂಚನೆಯ ಪ್ರಕಟವಾಗಿದ್ದರೂ ಅವರನ್ನು ಬಲವಂತದಿಂದ ಒಕ್ಕಲೆಬ್ಬಿಸಲಾಗುತ್ತಿದೆ. ಇದರ ವಿರುದ್ಧ ಎಐಕೆಎಸ್, ಎಐಎಡಬ್ಲ್ಯುಯು ಮತ್ತು ಸಿಪಿಐ(ಎಂ) ನೇತೃತ್ವದಲ್ಲಿ ಧರಣಿ ನಡೆಯುತ್ತಿತ್ತು. ಹೊಸದಾಗಿ ಬಂದ ಬಿಡಿಒ ಭೂಮಾಲಕರ ಗೂಂಡಾಗಳ ಜತೆಗೆ ಪೆಟ್ರೋಲ್ ಬಾಂಬ್‌ಗಳಿಂದ ದಾಳಿ ನಡೆಸಿದ್ದಾರೆ. ಈ ಹಿಂದೆ 2000ದಲ್ಲಿ ಇಂತಹುದೇ ಹೋರಾಟದ ಮೂಲಕ 435 ಭೂಹೀನ ದಲಿತರಿಗೆ ಪಟ್ಟಾ ಸಿಕ್ಕಿತ್ತು.

ಗೂಂಡಾದಾಳಿಯ ಸುದ್ದಿ ಬಂದ ಕೂಡಲೇ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಅವಧೇಶ್ ಕುಮಾರ್ ಮತ್ತು ಎಐಕೆಎಸ್ ರಾಜ್ಯ ಅಧ್ಯಕ್ಷ ಲಲನ್ ಚೌಧರಿ ಅಲ್ಲಿಗೆ ಧಾವಿಸಿದ್ದಾರೆ. ಈಗ ಆ ಬಿಡಿಒ ಮೇಲೆ ಎಫ್‌ಐಆರ್ ದಾಖಲಾಗಿದೆ. ಆತನನ್ನು ವಜಾ ಮಾಡಲು ಮತ್ತು ದಲಿತ ಕುಟುಂಬಗಳಿಗೆ ಪಟ್ಟಾಕೊಡಿಸಲು ಹೋರಾಟವನ್ನು ಮುಂದುವರೆಸಲಾಗುವುದು, ರಾಜ್ಯಸರಕಾರ ಈ ನಿಟ್ಟಿನಲ್ಲಿ ಮುತುವರ್ಜಿ ವಹಿಸದಿದ್ದರೆ ರುನಿ ಸೈದಪುರ್ ಚಲೋ ನಡೆಸಿ ಒಂದು ಬೃಹತ್ ಮತಪ್ರದರ್ಶನ ಸಂಘಟಿಸಲಾಗುವುದು ಎಂದು ಸಿಪಿಐ(ಎಂ) ಎಚ್ಚರಿಸಿದೆ.

ಈ ಬಾಂಬ್ ದಾಳಿಯ ವಿರುದ್ಧ ಪಟ್ನಾ ಸೇರಿದಂತೆ ರಾಜ್ಯದ ಹಲವೆಡೆ ಪ್ರತಿಭಟನೆಗಳು ನಡೆದಿವೆ.

ಮಧಬ್ಬರಿ ಗಲಭೆಗಳ ಬಗ್ಗೆ ನ್ಯಾಯಾಂಗ ತನಿಖೆ-ಮಾಣಿಕ್ ಸರ್ಕಾರ್ ಆಗ್ರಹ

ಪೌರತ್ವ ತಿದ್ದುಪಡಿ ಮಸೂದೆಯ ವಿರುದ್ಧ ಪ್ರತಿಭಟನೆಯ ಸಂದರ್ಭದಲ್ಲಿ ಜನವರಿ 8 ರಂದು ಪಶ್ಚಿಮ ತ್ರಿಪುರಾ ಜಿಲ್ಲೆಯ ಮಧಬ್ಬರಿಯಲ್ಲಿ ಪ್ರತಿಭಟನಾಕಾರರ ಮೇಲೆ ಗೋಲೀಬಾರ್ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ತ್ರಿಪುರಾದ ಮಾಜಿ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಆಗ್ರಹಿಸಿದ್ದಾರೆ. ರಾಸ್ತಾರೋಕೋ ನಡೆಸಿದ ಸಂದರ್ಭದಲ್ಲಿ ಪೋಲೀಸರ ಲಾಠೀ ಪ್ರಹಾರ, ಅಶ್ರುವಾಯು ಮತ್ತು ಗಾಳಿಯಲ್ಲಿ ಗುಂಡು ಮುಂತಾದ ಕ್ರಮಗಳಿಂದಾಗಿ ಏಳು ಜನರು ಗಾಯಗೊಂಡಿದ್ದಾರೆ. ಈ ಪೋಲೀಸ್ ಕಾರ್ಯಾಚರಣೆಯ ಅಗತ್ಯ ಇರಲಿಲ್ಲ ಎಂದು ಮಾಣಿಕ್ ಸರ್ಕಾರ್ ಹೇಳಿದ್ದಾರೆ.

ಬಿಜೆಪಿ ಮುಖ್ಯಮಂತ್ರಿ ಮ್ಯಾಜಿಸ್ಟ್ರೇಟ್ ತನಿಖೆಗೆ ಆದೇಶ ನೀಡಿದ್ದಾರೆ. ಆದರೆ ಸರಕಾರದಲ್ಲಿ ಅದರ ಮಿತ್ರಪಕ್ಷ ಐಪಿಎಫ್‌ಟಿ ಸೇರಿದಂತೆ ಬುಡಕಟ್ಟು ಪಕ್ಷಗಳೂ ನ್ಯಾಯಾಂಗ ತನಿಖೆಯನ್ನು ಆಗ್ರಹಿಸುತ್ತಿದ್ದಾರೆ. ತ್ರಿಪುರಾ ಬುಡಕಟ್ಟು ಸ್ವಾಯತ್ತ ಪ್ರದೇಶದಲ್ಲಿ ಐದು ಬುಡಕಟ್ಟು ಪಕ್ಷಗಳು ಬಂದ್ ನಡೆಸಿ ಬಿಜೆಪಿ ಮುಖ್ಯಮಂತ್ರಿಯ ರಾಜೀನಾಮೆಗೆ ಆಗ್ರಹಿಸಿದ್ದಾರೆ.

2017 ರಲ್ಲಿ ಇದೇ ರೀತಿ ಬುಡಕಟ್ಟು ಸಂಘಟನೆಗಳು ಒಂದು ವಾರ ರಾಸ್ತಾರೋಕೋ ನಡೆಸಿದ್ದರು. ಆದರೆ ಆಗ ಯಾವ ಅಹಿತಕರ ಘಟನೆಗಳೂ ನಡೆದಿರಲಿಲ್ಲ. ಎಡರಂಗ ಸರಕಾರದ ಅಡಿಯಲ್ಲಿ ಪೋಲಿಸರು ಬಹಳ ತಾಳ್ಮೆಯಿಂದ ಅದನ್ನು ನಿಭಾಯಿಸಿದ್ದರು ಈ ಬಾರಿ ಆಳುವ ಪಕ್ಷ ಬಿಜೆಪಿಯ ಕುಮ್ಮಕ್ಕಿನಿಂದಲೇ ಗಲಭೆಗಳು ನಡೆದಿವೆ ಎನ್ನಲಾಗಿದೆ.

ಕ್ಯೂಬಾದ ವೈದ್ಯರು ಬ್ರೆಜಿಲಿನಿಂದ ಏಕೆ ವಾಪಸಾದರು?



ಜಗದ ಸುತ್ತ
ನಾಗರಾಜ ನಂಜುಂಡಯ್ಯ

ಉಗ್ರ ಬಲಪಂಥೀಯ ಬೋಲ್ಸೋನಾರ್ ಬ್ರೆಜಿಲ್ ನ ಹೊಸ ಅಧ್ಯಕ್ಷರಾಗಿ ಆಯ್ಕೆಯಾದ ನಂತರ, ಸಮಾಜವಾದಿ ಕ್ಯೂಬಾ ಹಾಗೂ ವೆನೆಜುವೆಲಾ ರಾಷ್ಟಗಳ ಮೇಲೆ ಆಕ್ರಮಣ ಮಾಡುವ ಟ್ರಂಪ್ ಆಡಳಿತದ ಆಶಯಗಳನ್ನು ನೆರವೇರಿಸಲು ಉತ್ಸಾಹದಿಂದ ವಾಷಿಂಗ್ಟನ್ ಕಡೆ ತಮ್ಮ ನೋಟವನ್ನು ಹಾಯಿಸಿದ್ದಾರೆ. ಅಮೆರಿಕಾವು ಸಹ, ಅಧ್ಯಕ್ಷ ಜಾಯರ್ ಬೋಲ್ಸೋನಾರ್ ಮತ್ತು ಅವರ ಮಗ ಎಡ್ವಾರ್ಡೋ ಬೊಲ್ಸೊನಾರೊ ಜೋಡಿಯ ಮೂಲಕ ಕ್ಯೂಬಾ ಮತ್ತು ವೆನೆಜುವೆಲಾಗಳ ಮೇಲೆ ದಾಳಿ ನಡೆಸಲು ಹೊಂಚು ಹಾಕುತ್ತಿರುವುದು ಸ್ಪಷ್ಟಗೊಳ್ಳುತ್ತಿದೆ.

ಕ್ಯೂಬಾದ ವೈದ್ಯರು ವಾಪಸಾಗುವಂತೆ ಒತ್ತಡ

ಬ್ರೆಜಿಲ್ ನ ಹೊಸ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವ ಮುನ್ನವೇ ಬೊಲ್ಸೊನಾರೊ ರವರು, ಆ ದೇಶದ "ಹೆಚ್ಚು ವೈದ್ಯರು" ಯೋಜನೆಯಲ್ಲಿ ಭಾಗವಾಗಿ ಅಲ್ಲಿ ಸೇವೆ ಸಲ್ಲಿಸುತ್ತಿರುವ ಕ್ಯೂಬಾ ದೇಶದ ಡಾಕ್ಟರುಗಳನ್ನು ವಾಪಸು ಹೋಗುವಂತೆ ಒತ್ತಡ ಹೇರಿದ್ದಾರೆ. ಆದಾಗ್ಯೂ, ಬೊಲ್ಸೊನಾರೊರ ಈ ಧೋರಣೆ ಮಾತ್ರ ಕ್ಯೂಬಾದ ವೈದ್ಯರ ಸೇವೆಯನ್ನು ಹತ್ತಿರದಿಂದ ಬಲ್ಲವರಿಗಂತೂ ಅಚ್ಚರಿಯನ್ನು ತಂದಿದೆ. ಬ್ರೆಜಿಲಿನ ಲಕ್ಷಾಂತರ ಜನರ ಜೀವ ಉಳಿಸಿದ್ದ ಈ ವೈದ್ಯರು ತಮ್ಮ ವೃತ್ತಿಪರತೆಯೊಂದಿಗೆ ಹಾಗೂ ಅಷ್ಟೇ ನಿಷ್ಕಪಟ ಸೇವಾ ಮನೋಭಾವದಿಂದ ದುಡಿದಿದ್ದರು ಎಂಬುದನ್ನು ಬೊಲ್ಸೊನಾರೊ ಸಹಾ ಅಲ್ಲಗಳೆಯಲು ಸಾದ್ಯವಿಲ್ಲ.

ಬ್ರೆಜಿಲ್ ನ ನೂತನ ಅಧ್ಯಕ್ಷರಾಗಿ ಅಧಿಕಾರವನ್ನು ಸ್ವೀಕರಿಸಿದ ನಂತರವಂತೂ ತನ್ನ ಮೊದಲ ಮುಖ್ಯ ಕಾರ್ಯಸೂಚಿ ಎಂಬಂತೆ ಕ್ಯೂಬಾ ಮತ್ತು ವೆನೆಜುವೆಲಾ ಕುರಿತಂತೆ ಬೊಲ್ಸೊನಾರೊ ಕಾರ್ಯ ಪ್ರವೃತ್ತರಾಗಿದ್ದಾರೆ. ಪ್ರತಿದಿನವೂ, ಈ ಎರಡು ಸಮಾಜವಾದಿ ರಾಷ್ಟಗಳ ಬಗ್ಗೆ, ಅಮೆರಿಕಾದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜಾನ್ ಬೋಲ್ಟನ್ ಅವರೊಂದಿಗೆ ಪರಿಣಾಮಕಾರಿ ಚರ್ಚೆಯ ಹೊಸ ಸೂಚನೆಗಳು ಕಾಣಿಸಿ ಕೊಂಡಿವೆ.

ಭಯೋತ್ಪಾದಕನ ಭೇಟಿ, ಕನ್ಸರ್ವೇಟಿವ್ ಶೃಂಗಸಭೆ

ಕ್ಯೂಬನ್–ಸಂಜಾತ ಮತ್ತು ಕ್ಯೂಬನ್–ಅಮೆರಿಕನ್ ಮಾಫಿಯಾದ ಅತ್ಯಂತ ಕ್ರೂರ ಭಯೋತ್ಪಾದಕರಲ್ಲಿ ಒಬ್ಬರಾದ ಒರ್ಲ್ಯಾಂಡೊ ಗುಟ್ಯೆರೆಜ್ ರನ್ನು ಎಡ್ವರ್ಡೊ ಭೇಟಿಯಾಗಿ ಸಭೆಯನ್ನು ನಡೆಸಿದ್ದಾರೆ. ಇವನೊಬ್ಬ ಅತ್ಯಂತ ಅಪಾಯಕಾರಿ ಅಮೆರಿಕಾ ಪರ ನಿಲುವು ಹೊಂದಿರುವ ಭಯೋತ್ಪಾದಕ. ಅಮೆರಿಕ–ಕ್ಯೂಬಾ ಸಂಬಂಧಗಳಲ್ಲಿ ಒಂದು ಸಣ್ಣ ಸುಧಾರಣಾ ಪ್ರಯತ್ನವನ್ನು ವಿರೋಧಿಸುತ್ತಿದ್ದವರಲ್ಲಿ ಇವನದ್ದು ಪ್ರಧಾನ ಪಾತ್ರ. ಕ್ಯೂಬಾದಲ್ಲಿ 'ಹೊಸ ಗಣರಾಜ್ಯ' ಸ್ಥಾಪಿಸಬೇಕೆಂದು ವಲಸೆಗಾರ ಕ್ಯೂಬನ್ನರಿಗೆ ಕರೆ ಕೊಡುವ ಈತ, ಕ್ಯೂಬಾವನ್ನು ಅಮೆರಿಕದ ಇನ್ನೊಂದು ಪ್ರಾಂತ್ಯ ಮಾಡುವ ಹವಣಿಕೆಯಲ್ಲಿರುವವ.

ಎಡುವಾರ್ಡೊ ಬೊಲ್ಸೊನಾರೊ ಡಿಸೆಂಬರ್ ತಿಂಗಳಲ್ಲಿ "ಅಮೆರಿಕನ್ ಕನ್ಸರ್ವೇಟಿವ್ ಶೃಂಗಸಭೆ' ಎಂದು ಕರೆಯಲ್ಪಡುವ ಸಭೆಯನ್ನು ಬ್ರೆಜಿಲ್, ಅರ್ಜೆಂಟೀನಾ ಮತ್ತು ಪರಾಗ್ವೆ ಈ ಮೂರು ದೇಶಗಳ ಗಡಿಗಳು ಸೇರುವ ಪಟ್ಟಣವೊಂದರಲ್ಲಿ ಕರೆಯಲಾಗಿತ್ತು. ಈ ಸಭೆಯಲ್ಲಿ ಪಾಲ್ಗೊಂಡವರಲ್ಲಿ, ಕ್ಯೂಬನ್–ಅಮೆರಿಕನ್ ಭಯೋತ್ಪಾದಕ ಒರ್ಲಾಂಡೊ, ಚಿಲಿಯ ಅಧ್ಯಕ್ಷೀಯ ಚುನಾವಣೆಯಲ್ಲಿ ಶೇ.8 ರಷ್ಟು ಮತ ಪಡೆದಿದ್ದ ಉಗ್ರ ಬಲಪಂಥೀಯ ಅಭ್ಯರ್ಥಿ, ಕೊಲಂಬಿಯದ ಒಬ್ಬ ಮೀಸಲು ಜನರಲ್ ಹಾಗೂ ವೆನೆಜುವೆಲಾ ದ ವಿರೋಧಿ ಹಾಗು ಬಲಪಂಥೀಯ ನಾಯಕ ಸೇರಿದ್ದಾರೆ. ಕೊಲಂಬಿಯಾದ ಮಾಜಿ ಅಧ್ಯಕ್ಷ ಅಲ್ವಾರೋ ಯುರಿಬೆ ಕೂಡಾ ಈ ಸಭೆಯ ಆಹ್ವಾನಿತರಲ್ಲಿ ಒಬ್ಬರು.

ಇವೆಲ್ಲವನ್ನು ಗಮನಿಸಿದರೆ ಬ್ರೆಜಿಲ್‌ನಲ್ಲಿ ಕ್ಯೂಬಾ ದ ವೈದ್ಯರ ವಿರುದ್ಧ ನಡೆಯುತ್ತಿರುವ ಕಾರ್ಯಾಚರಣೆಯು, ಕೇವಲ ಬ್ರೆಜಿಲಿನ ಹೊಸ ಅಧ್ಯಕ್ಷರ ಯೋಜನೆಯಾಗಿರದೆ, ವಾಷಿಂಗ್ಟನ್ ಆಡಳಿತದ ಕಸರತ್ತಿನ ಪಾತ್ರವಿಲ್ಲವೆನ್ನುವಂತಿಲ್ಲ.

ಕ್ಯೂಬಾದ ವೈದ್ಯರ ವಾಪಸಾತಿಗೆ ಕಾರಣ ಏನು?

ಬೊಲ್ಸೊನಾರೊರವರ ಒತ್ತಡ ತಂತ್ರದಿಂದಾಗಿ ಬ್ರೆಜಿಲಿನ "ಹೆಚ್ಚು ವೈದ್ಯರು' ಯೋಜನೆಯ ಅಡಿಯಲ್ಲಿ ಆ ದೇಶದಲ್ಲಿ ಕೆಲಸ ಮಾಡುತ್ತಿದ್ದ ಕ್ಯೂಬನ್ ಡಾಕ್ಟರುಗಳನ್ನು ವಾಪಸು ಕರೆಸಿಕೊಳ್ಳುವ ನಿರ್ಣಯವನ್ನು ಕ್ಯೂಬನ್ ಸರಕಾರ ತೆಗೆದುಕೊಳ್ಳಬೇಕಾಯಿತು. ಆದರೆ ಅಂತಹ ಪರಿಸ್ಥಿತಿಯನ್ನು ಬ್ರೆಜಿಲ್ ಸರಕಾರ ನಿರ್ಮಾಣ ಮಾಡಿತ್ತು. ಡಿಸೆಂಬರ್ ಮೊದಲ ವಾರದಿಂದಲೇ ಕ್ಯೂಬಾದ ವೈದ್ಯರು ವಾಪಸ್ಸು ಬರುವ ಆ ದಿನಗಳಲ್ಲಿ ಅವರು ಸಲ್ಲಿಸಿದ ಸೇವೆಗೆ ಲಕ್ಷಾಂತರ ಬ್ರೆಜಿಲ್ ಜನರು ಸಲ್ಲಿಸಿದ ಅನಂತ ಕೃತಜ್ಞತೆಗಳು, ಭಾವನಾತ್ಮಕ ಬೀಳ್ಕೊಡುವ ದೃಶ್ಯಗಳು ಮತ್ತು ಕ್ಯೂಬಾದಲ್ಲಿ ಜನತೆ ಮತ್ತು ಅವರ ಕುಟುಂಬ ಗಳು ಭಾವನಾತ್ಮಕವಾಗಿ ಸ್ವಾಗತಿಸುವ ದೃಶ್ಯಗಳು ಕಂಡು ಬಂದವು. ಅವು ಕ್ಯೂಬನ್ ವೈದ್ಯರ ಮರೆಯಲಾಗದ ನೆನಪಿನ ಖಜಾನೆಗಳಲ್ಲಿ ಸೇರಿ ಹೋಗಿದೆ. ಆದರೆ ಈ ವಾಪಸಾತಿಯ ನಂತರ ಬ್ರೆಜಿಲ್ ಮತ್ತು ಅಮೆರಿಕನದ ಸರಕಾರಗಳು ಕ್ಯೂಬಾದ ವಿರುದ್ಧ ಅಪಪ್ರಚಾರವನ್ನು ಹರಿಯ ಬಿಟ್ಟಿವೆ. ಇದಕ್ಕೆ ಉತ್ತರವಾಗಿ ಕ್ಯೂಬನ್ ವಿದೇಶಾಂಗ ಸಚಿವಾಲಯ ಪ್ರತಿ ಪ್ರಚಾರ ಮಾಡಬೇಕಾಗಿ ಬಂದಿದೆ. ಅದನ್ನು ಪ್ರಶ್ನೆ–ಉತ್ತರದ ರೂಪದಲ್ಲಿ ಪ್ರಕಟಿಸಿದೆ. ಅದರ ಸಾರಾಂಶ ಇಲ್ಲಿದೆ:

ಬ್ರೆಜಿಲಿನ "ಹೆಚ್ಚು ವೈದ್ಯರು' ಯೋಜನೆಯಲ್ಲಿದ್ದ ಕ್ಯೂಬಾದ ವೈದ್ಯರನ್ನು ವಾಪಸು ಕರೆಸಿಕೊಳ್ಳಬೇಕಾದ ಪರಿಸ್ಥಿತಿಗಳು ಯಾವುವು?

"ಹೆಚ್ಚು ವೈದ್ಯರು' ಯೋಜನೆಯಲ್ಲಿ ಮಾಡಲಾಗುವ ಬದಲಾವಣೆಗಳ ನಂತರ ಕ್ಯೂಬನ್ ವೈದ್ಯರು ಅವರ ಲೈಸೆನ್ಸ್ ಮತ್ತು ಒಪ್ಪಂದಗಳನ್ನು ಪುನರ್ ಪರಿಶೀಲಿಸಲಾಗುವುದು. ಇದರ ಭಾಗವಾಗಿ ವೈದ್ಯರ ಅರ್ಹತೆ, ಅನುಭವಗಳನ್ನು ಪ್ರಶ್ನಿಸುವ ಹೇಳಿಕೆಗಳನ್ನು ಸ್ವತಃ ಅಧ್ಯಕ್ಷರೇ ನೀಡಿದರು. ಮಾತ್ರವಲ್ಲ ಬ್ರೆಜಿಲಿನಲ್ಲಿ ಸೇವೆ ಮುಂದುವರೆಸಲು ಸರಕಾರ ನಡೆಸುವ ಪರೀಕ್ಷೆಗಳಲ್ಲಿ ಪಾಸಾಗಬೇಕು ಎಂದು ಹೇಳಲಾಯಿತು. ಇದಕ್ಕೆ ತದ್ವಿರುದ್ಧವಾಗಿ ಈ ಪರೀಕ್ಷೆಗಳ ಫಲಿತಾಂಶಕ್ಕೆ ಕಾಯದೆ, ಯಾವುದೇ ಕ್ಯೂಬನ್ ವೈದ್ಯ ಬ್ರೆಜಿಲಿನಲ್ಲಿ ರಾಜಕೀಯ ಆಶ್ರಯ ಕೇಳಿದರೆ ಅದನ್ನು ಬೇಷರತ್ತಾಗಿ ಕೊಡಲಾಗುವುದು ಎಂದೂ ಹೇಳಲಾಯಿತು. ಇವೆಲ್ಲ ಸೂಚನೆಗಳು ಕ್ಯೂಬಾ ಮತ್ತು ಬ್ರೆಜಿಲ್ ಸರಕಾರದ ಆರೋಗ್ಯ ಇಲಾಖೆಗಳು ಈ ಯೋಜನೆಯ ಬಗ್ಗೆ ಮಾಡಿದ ಸಹಕಾರ ಒಪ್ಪಂದದಲ್ಲಿ ಭಾರೀ ಬದಲಾವಣೆಗಳನ್ನು ಮಾಡುವಂಥವು. ಈ ಬಗ್ಗೆ ಕ್ಯೂಬಾದ ಸರಕಾರದ ಜತೆ ಯಾವುದೇ ರೀತಿಯ ಚರ್ಚೆ–ಮಾತುಕತೆಗೆ ಪ್ರಸ್ತಾವ ಸಹ ಬ್ರೆಜಿಲ್ ಸರಕಾರದಿಂದ ಬರಲಿಲ್ಲ. ಆದ್ದರಿಂದ ಅವರ ಉದ್ದೇಶ ಬ್ರೆಜಿಲಿನ ಜನರ ಹಿತಾಸಕ್ತಿ ಕಾಪಾಡುತ್ತಾ ಈ ಯೋಜನೆಯನ್ನು ಉತ್ತಮ ಪಡಿಸುವುದಲ್ಲ. ತಮ್ಮ ರಾಜಕೀಯ ಪ್ರಚಾರ ಕಾರ್ಯಾಚರಣೆಗಳಿಗೆ ಸಾಧ್ಯವಾದಷ್ಟು ಈ ಯೋಜನೆಯ ದುರ್ಬಳಕೆ ಮಾಡಿ ಅದನ್ನು ಮುಚ್ಚುವುದೇ ಆಗಿದೆ ಎಂಬುದು ಸ್ಪಷ್ಟವಿತ್ತು. ಇಂತಹ ಅಪ್ರಾಮಾಣಿಕ ವೃತ್ತಿಪರತೆ–ರಹಿತ ಸರಕಾರದ ಯೋಜನೆಯಲ್ಲಿ ಕೆಲಸ ಮಾಡುವಲ್ಲಿ ನಮ್ಮ ವೈದ್ಯರು ಅಸುರಕ್ಷಿತತೆ ಅನುಭವಿಸಬಹುದು. ಬ್ರೆಜಿಲಿನ ಅಧ್ಯಕ್ಷರು ಸೂಚಿಸಿದ ಪರೀಕ್ಷೆ ಮತ್ತಿತರ ಹೊಸ ಷರತ್ತುಗಳು ಅವರಿಗೆ ಅವಮಾನಕಾರಕವೂ ಆಗಿದ್ದವು. ಇಂತಹ ಪರಿಸ್ಥಿತಿಗಳಲ್ಲಿ ಬ್ರೆಜಿಲಿನ ಜನತೆಯ ಆಶೋತ್ತರಗಳಿಗೆ ಇದು ಹಾನಿಕಾರಕ ಎಂಬ ಅರಿವಿದ್ದರೂ, ಭಾರವಾದ ಹೃದಯದಿಂದ ಕ್ಯೂಬಾದ ಸರಕಾರ ಈ ನಿರ್ಣಯ ತೆಗೆದುಕೊಳ್ಳಬೇಕಾಯಿತು.

ಬ್ರೆಜಿಲಿನ ಆಗಿನ ಆಳುವ ಪಕ್ಷದ ಜತೆ ಕ್ಯೂಬಾದ ಆಳುವ ಪಕ್ಷದ ಸ್ನೇಹ–ಸೌಹಾರ್ದ ಸಂಬಂಧಗಳಿಂದಾಗಿ ಈ ಯೋಜನೆ ರೂಪಿಸಲಾಗಿತ್ತೇ?

ಹಿಂದಿನ ಆಳುವ ಪಕ್ಷದ ರಾಜಕೀಯ ಪ್ರಚಾರಕ್ಕಾಗಿ ಈ ಯೋಜನೆ ಬಳಸಿಕೊಳ್ಳಲಾಗಿತ್ತು ಎಂದು ಹೊಸ ಬ್ರೆಜಿಲಿನ ಆರೋಗ್ಯ ಮಂತ್ರಿ ಹೇಳಿದ್ದಾರೆ. ಅದು ನಿಜವಲ್ಲ. ಕ್ಯೂಬಾದ ವೈದ್ಯರು ರೋಗಿಗಳು ಯಾವ ಪಕ್ಷದವರು ಎಂಬುದನ್ನು ಕೇಳುತ್ತಿರಲಿಲ್ಲ. ಅಥವಾ ಆರೋಗ್ಯ ಇಲಾಖೆಯ ಅಧಿಕಾರಿಗಳು ಯಾವ ಪಕ್ಷದ ಪರ ಎಂಬುದರ ಪರಿವೆ ಸಹ ಅವರಿಗೆ ಇರಲಿಲ್ಲ. ಈ ಯೋಜನೆಯನ್ನು ಹಿಂದಿನ ಅಧ್ಯಕ್ಷರು ರೂಪಿಸಿದ್ದು, ಅದು ಆರೋಗ್ಯ ಸೇವೆಯನ್ನು ದೇಶದ ತುಂಬಾ ವಿಸ್ತರಿಸುವ ಉದ್ದೇಶ ಹೊಂದಿತ್ತು. ಈ ಯೋಜನೆಗೆ ಎಲ್ಲಾ ದೇಶಗಳಿಂದ ವೈದ್ಯರಿಗೆ ತೆರೆದ ಆಮಂತ್ರಣವಿತ್ತು. ಆ ಆಮಂತ್ರಣದ ಮೇರೆಗೆ ಕ್ಯೂಬಾದ ವೈದ್ಯರು ಅದರಲ್ಲಿ ಭಾಗವಹಿಸಿದರು. ಯೋಜನೆಯಲ್ಲಿ ಈ ವರೆಗೆ ಯಾವುದೇ ವೈದ್ಯರು ಲಭ್ಯವಿಲ್ಲದ ಪ್ರದೇಶಗಳನನು ತಲುಪುವುದಕ್ಕೆ ಆದ್ಯತೆ ನೀಡಲಾಗಿತ್ತು. ಅಂತಹ ಪ್ರದೇಶಗಳಿಗೆ ಕ್ಯೂಬನ್ ವೈದ್ಯರು ಸ್ವಯಮಿಚ್ಛೆಯಿಂದ ಹೋಗುವುದಾಗಿ ಯೋಜನೆಯ ಬಗ್ಗೆ ಮಾತುಕತೆಗಳಲ್ಲಿ ಹೇಳಲಾಗಿತ್ತು.

ಇಂತಹ ಅಂತರ್‌ರಾಷ್ಟ್ರೀಯ ಮಿಶನ್ ಗಳಲ್ಲಿ ಪಾಲುಗೊಳ್ಳುವಲ್ಲಿ ಕ್ಯೂಬಾದ ಉದ್ದೇಶವೇನು?

ಕ್ಯೂಬಾ 164 ದೇಶಗಳಲ್ಲಿ 6 ಲಕ್ಷ ಮಿಶನ್ ಗಳಲ್ಲಿ ಭಾಗವಹಿಸಿದೆ. ಇಂತಹ ಯೋಜನೆಗಳನ್ನು ಇನ್ನೊಂದು ದೇಶದಿಂದ ಆಹ್ವಾನ ಬಂದಾಗ ಎರಡು ದೇಶಗಳ ಆಗಿರುವ ಕ್ಷಮತೆಯನ್ನು ಬಳಸುವ ಬೆಳೆಸುವ ಸಹಕಾರದ ಆಧಾರದ ಮೇಲೆ ಜಂಟಿಯಾಗಿ ಯೋಜನೆಯನ್ನು ರೂಪಿಸಲಾಗುತ್ತದೆ. ಎರಡೂ ದೇಶಗಳಿಂದ ನೇರವಾಗಿ ಭಾಗವಹಿಸುವ ಸಂಸ್ಥೆಗಳ ನಡುವೆ ಸಹ ನಿರ್ದಿಷ್ಟ ಒಪ್ಪಂದಗಳು ಆಗುತ್ತವೆ. ಇಂತಹ ಎಲ್ಲಾ ಒಪ್ಪಂದಗಳು ಎರಡೂ ದೇಶಗಳ ಸಾರ್ವಭೌಮತೆ, ಸಂಸ್ಕೃತಿ, ಮತಧರ್ಮ, ಸ್ವಯಂ–ನಿರ್ಧಾರ, ದೇಶೀಯ ಅಂತರ್‌ರಾಷ್ಟ್ರೀಯ ಕಾನೂನುಗಳಿಗೆ ಗೌರವ ಮತ್ತು ಪಾಲನೆಗಳ ಆಧಾರದ ಸೌಹಾರ್ದ ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ. ಮಾತ್ರವಲ್ಲ ಈ ಯೋಜನೆಯಲ್ಲಿ ಕೆಲಸ ಮಾಡುವ ಕ್ಯೂಬಾದ ವೈದ್ಯರ ಅನುಭವ, ಅರಿವು, ಬದ್ಧತೆಗಳನ್ನು ಹೆಚ್ಚಿಸುವ ಮೂಲಕ ನಮ್ಮ ಆರೋಗ್ಯ ವ್ಯವಸ್ಥೆಯನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ. ವೈದ್ಯಕೀಯ ಸಹಕಾರ ಕ್ಯೂಬಾದ ಅಂತರ್‌ರಾಷ್ಟ್ರೀಯ ಸಹಕಾರದ ಪ್ರಮುಖ ಅಂಶವಾಗಿದ್ದು ಕ್ಯೂಬಾಕ್ಕೆ ಮನ್ನಣೆ ಮತ್ತು ಗೌರವ ತಂದು ಕೊಟ್ಟಿದೆ. ಅದು ಕ್ಯೂಬಾದ ಕ್ರಾಂತಿಯ ಮಾನವೀಯ ಸಾರಸತ್ವ ಕೂಡಾ.

ಇದು ವಿದೇಶಿ ವಿನಿಮಯ ಗಳಿಸುವ ಯೋಜನೆ ಎಂದು ವಿಕೃತ ಪ್ರಚಾರ ನಡೆದಿದೆ. ವಾಸ್ತವವೇನು?

ವಿದೇಶಿ ಯೋಜನೆಗಳಲ್ಲಿ ಕೆಲಸ ಮಾಡುವ ಕ್ಯೂಬಾದ ವೈದ್ಯರ ವೇತನವನ್ನು ಅವರ ಕುಟುಂಬಕ್ಕೆ ಕೊಡಲಾಗುತ್ತದೆ. ಅವರ ಕುಟುಂಬ ಇನ್ಯಾವುದೇ ಕ್ಯೂಬಾದ ಕುಟುಂಬದಂತೆ ಎಲ್ಲಾ ಸಾಮಾಜಿಕ ಸೇವೆಗಳನ್ನು ಪಡೆಯುತ್ತದೆ. ವೈದ್ಯರು ಕೆಲಸ ಮಾಡುವ ದೇಶದಲ್ಲಿ ಅಲ್ಲಿನ ಖರ್ಚಿಗಾಗಿ ಸ್ಟೈಪೆಂಡ್ ಮಾತ್ರ ಪಡೆಯುತ್ತಾರೆ. ಮಾತ್ರವಲ್ಲ, ಈ ವೈದ್ಯರು ಸ್ವದೇಶಕ್ಕೆ ಮರಳಲು ಬಯಸಿದರೆ ಅವರ ಕೆಲಸ ಸಹ ಸುರಕ್ಷಿತವಾಗಿರುತ್ತದೆ. ಅವರು ವಿಶೇಷ ಪರಿಣತಿ ಪಡೆಯ ಬಯಸಿದರೆ, ವಿದೇಶಿ ಭಾಷೆ ಕಲಿಯುವ ಇಚ್ಛೆಯಿದ್ದರೆ ಅದಕ್ಕೂ ಅವಕಾಶವಿರುತ್ತದೆ. ಈ ಯೋಜನೆಗಳನ್ನು ವೈದ್ಯರ 'ನಿರುದ್ಯೋಗ' ಸಮಸ್ಯೆ ಪರಿಹಾರಕ್ಕೆ ಬಳಸಲಾಗುವುದಿಲ್ಲ. ಕ್ಯೂಬಾದಲ್ಲಿ ಸಾರ್ವತ್ರಿಕ ಆರೋಗ್ಯ ಸೇವೆ ಎಂದರೆ ಶೇ.80 ವಿಶೇಷಜ್ಞರಲ್ಲದ ವೈದ್ಯರು ಮನೆಗಳಿಗೆ ಹೋಗಿ ಕೊಡುವ ಸೇವೆಯಾದ್ದರಿಂದ, ವೈದ್ಯರ ಕೊರತೆಯಿರುತ್ತದೆಯೇ ವಿನಃ 'ನಿರುದ್ಯೋಗ'ವಿರುವುದಿಲ್ಲ.


ಬ್ರೆಜಿಲಿನ ಈ ಏಟಿಗೆ ಎದಿರೇಟು ಕೊಡುವ ಯೋಚನೆ ಕ್ಯೂಬಾಕ್ಕೆ ಇದೆಯೇ?

ಇಲ್ಲ. ಬೇರೆ ಯಾವುದೇ ದೇಶದಂತೆ ಬ್ರೆಜಿಲಿನ ಯುವಜನರು ವೈದ್ಯಕೀಯ ಮತ್ತಿತರ ಶಿಕ್ಷಣಕ್ಕೆ ಕ್ಯೂಬಾಕ್ಕೆ ಬರಲು ಸ್ವಾಗತವಿರುತ್ತದೆ. ಬ್ರೆಜಿಲನ್ನು ಮತ್ತು ಅದರ ಜನತೆಯನ್ನು ತಾರತಮ್ಯದಿಂದ ನೋಡುವ ಯಾವುದೇ ಪ್ರತೀಕಾರ ಕ್ರಮವನ್ನು ಕ್ಯೂಬಾ ತೆಗೆದುಕೊಳ್ಳುವುದಿಲ್ಲ. ಎರಡು ದೇಶಗಳ ಜನತೆಯ ಸಂಬಂಧಕ್ಕೆ ಬಾಧಕವಾಗುವ ಯಾವುದೇ ಕ್ರಮವನ್ನು ಕ್ಯೂಬಾ ತೆಗೆದುಕೊಳ್ಳುವುದಿಲ್ಲ. ಮಾನವೀಯತೆ, ಭ್ರಾತೃತ್ವ ಮತ್ತು ಕಾರ್ಮಿಕರ ಅಂತರ್‌ರಾಷ್ಟ್ರೀಯತೆ ಎತ್ತಿ ಹಿಡಿಯುವ 60 ವರ್ಷಗಳ ಇತಿಹಾಸ ಇರುವ ನಾವು ಸತ್ಯ ಹೇಳುತ್ತೇವೆ. ಅದರ ಮುಂದೆ ಯಾರದೇ ಸುಳ್ಳು ಪ್ರಚಾರ ನಡೆಯುವುದಿಲ್ಲ. ಎಂಬ ಭರವಸೆ ನಮಗಿದೆ. ●





JANASHAKTHI KANNADA VARA PATRIKE JANUARY 21-27, 2019 Price: Rs. 10/- Date of Publication: 18 JANUARY 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283



ಕಾರ್ಲ್ ಲಿಬ್ನೇಕ್ಟ್ ಮತ್ತು ರೋಸಾ ಲಕ್ಸಂಬರ್ಗ್



ಲಕ್ಸಂಬರ್ಗ್, ಲಿಬ್ನೇಕ್ಟ್, ಲೆನಿನ್ –
ಯಾರನ್ನೂ ನಾವು ಮರೆತಿಲ್ಲ – ಜನವರಿ 15, 2019

ರೋಸಾ ಲಕ್ಸಂಬರ್ಗ್ ಹುತಾತ್ಮರಾಗಿ ನೂರು ವರ್ಷ

ರೋಸಾ ಲಕ್ಸಂಬರ್ಗ್, ಕಾರ್ಲ್ ಲೀಬ್ನೆಕ್ಟ್ ಹುತಾತ್ಮ ದಿನ — ಜನವರಿ 15, 1919

ನೂರು ವರ್ಷಗಳ ಹಿಂದೆ ಈ ವಾರದ ಒಂದು ದಿನ (ಜನವರಿ 15, 1919) ಭೂಗತರಾಗಿದ್ದ ಜರ್ಮನ್ ಕಮ್ಯುನಿಸ್ಟ್ ಪಕ್ಷದ ಸ್ಥಾಪಕ ನಾಯಕರಾದ ರೋಸಾ ಲಕ್ಸಂಬರ್ಗ್, ಕಾರ್ಲ್ ಲೀಬ್ನೆಕ್ಟ್ ಅವರನ್ನು ಬಂಧಿಸಲಾಯಿತು. ಮಾರನೇ ದಿನ ಪತ್ರಿಕೆಗಳಲ್ಲಿ, ಲೀಬ್ನೆಕ್ಟ್ ಜೈಲಿನಿಂದ ಪಲಾಯನ ಮಾಡುವಾಗ ಗುಂಡು ತಗಲಿ ಸತ್ತರು, ರೋಸಾ ಲಕ್ಸಂಬರ್ಗ್‌ರನ್ನು ಜನಜಂಗುಳಿ ಸಾಯಿಸಿತು ಎಂಬ ಸುಳ್ಳು ಸುದ್ದಿಯನ್ನು ಕೊಡಲಾಯಿತು. ಆದರೆ ನಿಜವಾಗಿ ನಡೆದದ್ದು ಏನು ಎಂದು ಆಮೇಲೆ ಬೆಳಕಿಗೆ ಬಂತು.

ಜನವರಿ 15, 1919ರಂದು ಬರ್ಲಿನ್ ಪಶ್ಚಿಮ ಮಿಲಿಟರಿ ಮುಖ್ಯ ಕಚೇರಿಯಲ್ಲಿ ವಿಚಾರಣೆಯ ನಾಟಕದ ನಂತರ ರೋಸಾ ಅವರನ್ನು ಕರ್ನಲ್ ವೋಗೆಲ್ ಎಂಬಾತ ಮತ್ತು ಇನ್ನೊಬ್ಬ ಹೊರಗೆ ಕರೆದುಕೊಂಡು ಬಂದರು. ರೋಸಾ ಅವರನ್ನು ವೋಗೆಲ್ ಅಲ್ಲಿ ಕಾವಲು ನಿಂತಿದ್ದ ಗಾರ್ಡ್‌ನತ್ತ ತಳ್ಳಿದ, ಈ ಯೋಜನೆ ಮೊದಲೇ ಗೊತ್ತಿದ್ದ ಆ ಗಾರ್ಡ್, ಒಟ್ಟೊ ರೂಂಗೆ ಎಂಬಾತ ಬಂದೂಕಿನ ಹಿಂಬದಿಯಿಂದ ರೋಸಾ ಅವರ ತಲೆಗೆ ಬಲವಾದ ಏಟು ಕೊಟ್ಟ. ರೋಸಾ ನೆಲಕ್ಕುರುಳಿದರು. ಆದರೂ ಹೇಗೋ ಎದ್ದು ನಿಲ್ಲಲು ಪ್ರಯತ್ನಿಸಿದರು. ಅಷ್ಟರಲ್ಲಿ ನಾಲ್ಕು ಸೈನಿಕರು ಮತ್ತು ವೋಗ್ ಅವರನ್ನು ಎಳೆದೊಯ್ದು ಈ ಮೊದಲು ಕರೆತಂದಿದ್ದ ಕಾರಿನೊಳಕ್ಕೆ ಹಾಕಿದರು. ವೋಗೆಲ್ ಅವರ ತಲೆಗೆ ಗುಂಡಿಟ್ಟು ಕೊಂದು ಹಾಕಿದ. ಹೆಣವನ್ನು ಅದೇ ಕಾರಿನಲ್ಲಿ ಒಯ್ದು ದಾರಿಯಲ್ಲಿ ಲಾಂಡ್ವೆಹ್ರ್‌ಕನಾಲ್ ಎಂಬ ಕಾಲುವೆಗೆ ಎಸೆದು ಬಿಟ್ಟರು.

ಸ್ವಲ್ಪ ಹೊತ್ತಿನ ನಂತರ ಕಾರ್ಲ್ ಲೀಬ್ನೆಕ್ಟ್ ಅವರನ್ನು ಅದೇ ರೀತಿ ಹೊರಗೆ ಕರೆತಂದು ಅವರನ್ನು ಇನ್ನೊಂದು ಕಾರಿನಲ್ಲಿ ಕೂರಿಸಿ ಒಯ್ದರು. ದಾರಿಯಲ್ಲಿ ಕಾರು ಕೆಟ್ಟು ಹೋಯಿತು ಎಂಬ ನಾಟಕ ನಡೆಯಿತು. ಉಳಿದವರು ಕಾರಿನಿಂದ ಇಳಿದರು. ಲೆಫ್ಟಿನೆಂಟ್ ಶೂಲ್ಟ್ಝ್ ಎಂಬಾತ ಒಂದು ಕಿರಿ ಚಾಕುವಿನಿಂದ ತನ್ನ ಕೈಗೆ ಗಾಯಮಾಡಿಕೊಂಡ, ಮತ್ತು ಪಿಸ್ತೂಲಿನಿಂದ ಲಿಬ್ನೇಕ್ಟ್‌ರನ್ನು ಗುಂಡಿಟ್ಟು ಕೊಂದು ಹಾಕಿದ. ಲೀಬ್ನೆಕ್ಟ್ ಪಲಾಯನ ಮಾಡುವ ಭರದಲ್ಲಿ ಶೂಲ್ಟ್ಝ್‌ಗೆ ಗಾಯವಾಯಿತು. ಆಗ ಗುಂಡು ತಗಲಿ ಸಾವು ಸಂಭವಿಸಿತು ಎಂಬ ಕತೆ ಕಟ್ಟಲಾಯಿತು.

ರೋಸಾ ಮತ್ತು ಲೀಬ್ನೆಕ್ಟ್ ಅವರ ಭೀಕರ ಕೊಲೆಯ ಸುದ್ದಿ ಹರಡುತ್ತಿದ್ದಂತೆ ಬರ್ಲಿನ್ ನಗರ ಮತ್ತು ಜರ್ಮನಿಯ ಉದ್ದಗಲಕ್ಕೂ ದುಡಿಯುವ ಜನ ಆಕ್ರೋಶಗೊಂಡರು. ಅವರ ಶವಯಾತ್ರೆಯೇ ಅತಿ ದೊಡ್ಡ ರಾಜಕೀಯ ಪ್ರತಿಭಟನಾ ಪ್ರದರ್ಶನವಾಗಿ ಪರಿವರ್ತಿತವಾಯಿತು. ಈ ಚಾರಿತ್ರಿಕ ದಿನದಂದು ಈಗಲೂ ಜರ್ಮನ್ ಎಡ ಚಳುವಳಿಯ ಎಲ್ಲರೂ ಸೇರಿ ದೊಡ್ಡ ಪ್ರದರ್ಶನ ರ‍್ಯಾಲಿ ಮಾಡಿ ಈ ಹುತಾತ್ಮರನ್ನು ನೆನಸಿಕೊಳ್ಳುತ್ತಾರೆ. ಎರಡನೇ ಮಹಾಯುದ್ಧದ ನಂತರ ಪೂರ್ವ ಜರ್ಮನಿ ಸಮಾಜವಾದಿ ದೇಶವಾಗಿ ಹೊಮ್ಮಿದಾಗ ಈ ದಿನವನ್ನು ಅಧಿಕೃತವಾಗಿ 'ರೋಸಾ, ಕಾರ್ಲ್ ಹುತಾತ್ಮ ದಿನ'ವಾಗಿ ಆಚರಿಸಲಾಗುತ್ತಿತ್ತು. ಸಮಾಜವಾದಿ ಸರಕಾರದ ಪತನದ ನಂತರವೂ ಈ ಸಂಪ್ರದಾಯ ನಿಂತಿಲ್ಲ. ಈ ವರ್ಷ ಈ ಭೀಕರ ಘಟನೆಗೆ ನೂರು ವರ್ಷ ತುಂಬಿದ್ದರಿಂದ ಭಾರೀ ಸಂಖ್ಯೆಯಲ್ಲಿ ಜನ ಸೇರಿದ್ದರು. ರೋಸಾ ಮತ್ತು ಲೀಬ್ನೆಕ್ಟ್ ಆಗಿನ ಜರ್ಮನ್ (ಅದೂ ಸೋಶಲಿಸ್ಟ್ ಪಕ್ಷದ) ಸರಕಾರಕ್ಕೆ ಯಾಕೆ ಅಂತಹ 'ಬೆದರಿಕೆ'ಯಾಗಿದ್ದರು?

ರೋಸಾ ಲಕ್ಸಂಬರ್ಗ್ 20 ನೇ ಶತಮಾನ ಕಂಡ ಮಹಾನ್ ರಾಜಕೀಯ ನಾಯಕಿ. ಈಗಲೂ ಲೆನಿನ್, ಮಾವೊ, ಕ್ಯಾಸ್ಟ್ರೋ, ಚೆ ಗವೇರಾ ರಂತೆ ಕಮ್ಯುನಿಸ್ಟರಲ್ಲಿ ಯುವಜನರಲ್ಲಿ ರೋಮಾಂಚನ ಉಂಟು ಮಾಡುವ ಸ್ಫೂರ್ತಿಯ ಸೆಲೆಯಾದ ಕ್ರಾಂತಿಕಾರಿ. ರೋಸಾ ಪೋಲಿಷ್ ಯೆಹೂದಿ ಕುಟುಂಬದಲ್ಲಿ ಹುಟ್ಟಿ ಜರ್ಮನಿಯ (ಆ ಮೇಲೆ ಯುರೋಪಿನ ಮತ್ತು ಜಾಗತಿಕ) ಸೋಶಲಿಸ್ಟ್ ಮತ್ತು ಕಮ್ಯುನಿಸ್ಟ್ ಚಳುವಳಿ ಕಟ್ಟಿ ಬೆಳೆಸುವುದರಲ್ಲಿ ಪ್ರಧಾನ ಪಾತ್ರ ವಹಿಸಿದರು. ತಾನು ಹಲವು ವಿಧಗಳಲ್ಲಿ 'ಅಲ್ಪ ಸಂಖ್ಯಾತಳು', ಜರ್ಮನಿಯಲ್ಲಿ ಪೋಲಿಷ್ ಮೂಲದವಳಾಗಿ, ಯೆಹೂದಿಯಾಗಿ, ಮಹಿಳೆಯಾಗಿ, ಎಂದು ಹೇಳಿಕೊಂಡ ರೋಸಾ ಈ ಎಲ್ಲಾ ತೊಡಕುಗಳನ್ನು ಧೈರ್ಯದಿಂದ ಎದುರಿಸಿ, ಅವನ್ನೆಲ್ಲಾ ಮೀರಿ ನಿಂತವರು. ಆಕೆ ಆರಂಭದ ದಿನಗಳಲ್ಲಿ ಮಹಿಳಾ ದಿನದ ಪ್ರಮುಖ ರೂವಾರಿ ಕ್ಲಾರಾ ಜೆಟ್ಕಿನ್ ನಿಕಟ ಸಹವರ್ತಿಯಾಗಿದ್ದರು.

ಮೊದಲನೆಯ ಮಹಾಯುದ್ಧಕ್ಕೆ ಜರ್ಮನ್ ಸೋಶಲ್ ಡೆಮಾಕ್ರೆಟಿಕ್ ಪಕ್ಷ (ಎಸ್‌ಪಿಡಿ) ಬೆಂಬಲಿಸಿದ್ದನ್ನು ಪ್ರತಿಭಟಿಸಿ ಹೊರ ಬಂದ ರೋಸಾ, ಜರ್ಮನ್ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಸೈದ್ಧಾಂತಿಕ ಸಂಘಟನಾ ಅಡಿಪಾಯ ಹಾಕುವುದರಲ್ಲಿ ಮುಖ್ಯ ಪಾತ್ರ ವಹಿಸಿದರು. ಬೊಲ್ಶೆವಿಕ್ ಕ್ರಾಂತಿಯ ಬೆನ್ನಲ್ಲೇ ಜರ್ಮನಿಯಲ್ಲೂ ಕಾರ್ಮಿಕ ವರ್ಗದ ಕ್ರಾಂತಿಯನ್ನು ಸಂಘಟಿಸಲು ಶತಪ್ರಯತ್ನ ಪಟ್ಟರು. ಅವರ ಸಂಘನೆಯನ್ನು 'ಸ್ಪಾರ್ಟಕಸ್ ಲೀಗ್' ಎಂದು ಕರೆಯಲಾಗಿದ್ದು, ಅವರ ಕ್ರಾಂತಿಯ ಪ್ರಯತ್ನ ಸಹ 'ಸ್ಪಾರ್ಟಕಸ್ ಕ್ರಾಂತಿ' ಎಂದೇ ಹೆಸರಾಗಿದೆ. ಅದು ವಿಫಲವಾದಾಗ ಲೈಬ್ನಿಕ್ತ್ ಜತೆ ಭೂಗತರಾದರು. ಕಾರ್ಮಿಕ ಕ್ರಾಂತಿಯನ್ನು ಹತ್ತಿಕ್ಕಲು ಜರ್ಮನಿಯ ಎಸ್‌ಪಿಡಿ ಸರಕಾರ ದೇಶವನ್ನು ಅದರಲ್ಲೂ ರಾಜಧಾನಿ ಬರ್ಲಿನನ್ನು ಮಿಲಿಟರಿಗೆ ಒಪ್ಪಿಸಿತ್ತು. ಕಾರ್ಮಿಕರನ್ನು ಹತ್ತಿಕ್ಕಲು ಜರ್ಮನ್ ಮಿಲಿಟರಿ, ಪಾರಾಮಿಲಿಟರಿ ಗುಂಪುಗಳನ್ನು ರಚಿಸಿತ್ತು. ರೋಸಾ ಮತ್ತು ಕಾರ್ಲ್ ಅವರನ್ನು 'ಮುಗಿಸದೆ' ಕಾರ್ಮಿಕ ಕ್ರಾಂತಿಯನ್ನು ಹತ್ತಿಕ್ಕುವುದು ಕಷ್ಟಸಾಧ್ಯವೆಂದು ಅರಿತ ಮಿಲಿಟರಿ ಅಧಿಕಾರಿಗಳು ಅದಕ್ಕೆ ಯೋಜನೆ ಹಾಕಿದ್ದರು.


ಜರ್ಮನಿಯ ಸಮಾಜವಾದಿ ಆಂದೋಲನದ ಹರಿಕಾರರಾದ ವಿಲಹೆಲ್ಮ್ ಲೀಬ್ನೆಕ್ಟ್‌ರವರ ಎರಡನೇ ಪುತ್ರರಾದ ಕಾರ್ಲ್ ಲೀಬ್ನೆಕ್ಟ್ ವಕೀಲರಾಗಿದ್ದರು, 1900ರಿಂದ ಎಸ್‌ಪಿಡಿ ಪಕ್ಷದ ಸದಸ್ಯರಾಗಿದ್ದರು. 1902ರಿಂದ ಬರ್ಲಿನ್ ನಗರ ಕೌನ್ಸಿಲರ್, 1908ರಿಂದ ಪ್ರಶ್ಯನ್ ಸಂಸತ್ತಿನ ಸದಸ್ಯರು, 1912ರಿಂದ ಜರ್ಮನ್ ಸಂಸತ್ತು ರೈಖ್‌ಸ್ಟಾಗ್‌ನ ಸದಸ್ಯರಾಗಿದ್ದರು. ಮೊದಲ ಮಹಾಯುದ್ಧ ಆರಂಭವಾದಾಗ

ರೈಖ್‌ಸ್ಟಾಗ್‌ನಲ್ಲಿ ಯುದ್ಧ ತಯಾರಿಯನ್ನು ವಿರೋಧಿಸಿದ ಏಕೈಕ ಸೋಶಿಯಲ್ ಡೆಮಾಕ್ರೆಟಿಕ್ ಸದಸ್ಯ.

ಮುಂದೆ ರೋಸಾ ಲಕ್ಸೆಂಬರ್ಗ್ ಮತ್ತು ಇತರರ ಒಡಗೂಡಿ ಸ್ಥಾಪಿಸಿದ ಜರ್ಮನ್ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷರಾದರು.

ಸೈದ್ಧಾಂತಿಕ ಪ್ರಖರತೆಗೆ ಹೆಸರಾಗಿದ್ದ ರೋಸಾ ಅವರ ಬರಹಗಳು, ಪುಸ್ತಕಗಳು ಜಾಗತಿಕ ಮಾರ್ಕ್ಸ್‌ವಾದಿ ಸೈದ್ಧಾಂತಿಕ ಚರ್ಚೆಯಲ್ಲಿ ಪ್ರಮುಖ ಕೊಡುಗೆ ಕೊಟ್ಟಿವೆ. 'ಸಮಾಜವಾದ ಅಥವಾ ಬರ್ಬರವಾದ', 'ಸುಧಾರಣೆ ಅಥವಾ ಕ್ರಾಂತಿ', 'ಬಂಡವಾಳದ ಶೇಖರಣೆ', 'ರಶ್ಯನ್ ಕ್ರಾಂತಿ', 'ಮಹಿಳೆಯರ ಮತದಾನದ ಹಕ್ಕು ಮತ್ತು ವರ್ಗಸಮರ', 'ಪೋಲಿಷ್ ಪ್ರಶ್ನೆ ಮತ್ತು ಸಮಾಜವಾದಿ ಚಳುವಳಿ', 'ರಾಷ್ಟ್ರೀಯತೆಯ ಪ್ರಶ್ನೆ' – ಅವರ ಪ್ರಮುಖ ಕೃತಿಗಳಲ್ಲಿ ಕೆಲವು. ಲೆನಿನ್ ಮತ್ತು ರೋಸಾ ಪರಸ್ಪರರನ್ನು ಗೌರವಿಸುವ ಜತೆಗೆ ಹಲವು ವಿಷಯಗಳಲ್ಲಿ ಅವರಲ್ಲಿ ತೀವ್ರ ಭಿನ್ನಾಭಿಪ್ರಾಯವೂ ಇತ್ತು. ಲೆನಿನ್ ರೋಸಾ ಬಗ್ಗೆ "ಜಗತ್ತಿನಾದ್ಯಂತ ರೋಸಾ ಅವರನ್ನು ಕಮ್ಯುನಿಸ್ಟರು ಸದಾ ನೆನೆಸುತ್ತಾರೆ. ಅವರ ಜೀವನ ಚರಿತ್ರೆ ಮತ್ತು ಅವರ ಸಮಗ್ರ ಕೃತಿಗಳು ಜಗತ್ತಿನಾದ್ಯಂತ ಮುಂದಿನ ಹಲವಾರು ಪೀಳಿಗೆಗಳಿಗೆ ತರಬೇತಿಯ ಕೈಪಿಡಿಗಳಂತೆ ಇರುತ್ತವೆ" ಎಂದು ಹೇಳಿದ್ದಾರೆ. ರೋಸಾ ಮತ್ತು ಲೀಬ್ನೆಕ್ಟ್ ಅವರ ಹಲವಾರು ಸ್ಮಾರಕಗಳು, ಜರ್ಮನಿಯಲ್ಲಿ ಮಾತ್ರವಲ್ಲ, ಕ್ರಾಂತಿ ನಂತರದ ರಶ್ಯಾ ಮತ್ತು ಯುರೋಪುಗಳಲ್ಲಿ ಜಗತ್ತಿನಾದ್ಯಂತ ಇವೆ.

ಜರ್ಮನಿಯಲ್ಲಿರುವ ರೋಸಾ ಲಕ್ಸಂಬರ್ಗ್ ಮ್ಯೂಸಿಯಂನ ಪ್ಯಾನೆಲ್‌ಗಳ ಮೇಲೆ ಆಧಾರಿತವಾದ ರೋಸಾ ಅವರ ಸಚಿತ್ರ ಜೀವನ ಪರಿಚಯವನ್ನು ಕನ್ನಡದಲ್ಲಿ 'ಚಿಂತನ ಪುಸ್ತಕ' ಪ್ರಕಟಿಸಿದೆ. ●



* "ಈ ಹೊತ್ತಿನಲ್ಲಿ ಮನುಕುಲದ ಮುಂದೆ ಇರುವ ಆಯ್ಕೆ ಒಂದೇ – ಸಮಾಜವಾದ ಅಥವಾ ಬರ್ಬರವಾದ"
* "ತೆಪ್ಪಗೆ ಕುಳಿತವರಿಗೆ ಕಾಲಿಗೆ ಸರಪಳಿ ಬಿಗಿಯಲಾಗಿದೆ ಎಂದು ತಿಳಿಯುವುದಾದರೂ ಹೇಗೆ?"

– ರೋಸಾ ಲಕ್ಸಂಬರ್ಗ್

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**